ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೯

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೧

೩೭

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೯

MANAVIKA KARNATAKA, Kannada quarterly of the University of Mysore. Volume 10, Number 1, November 1979. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್
ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಪ್ರಭುಶಂಕರ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ
ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ
ಮೈಸೂರು ೫೭೦೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಕೆ. ಮೊಹಮ್ಮದ್ ಶರೀಫ್	ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೨. ಶಿವರಾಮ ಕಾರಂತ	ಕನ್ನಡದ ಖ್ಯಾತ ಲೇಖಕರು, ಸಾಲಿಗ್ರಾಮ, ಉಡುಪಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ
೩. ಡಿ. ವಿ. ಕೆ. ಮೂರ್ತಿ	ಪ್ರಕಾಶಕರು, ರಾಮಯ್ಯರ್‌ರಸ್ತೆ, ಕೃಷ್ಣಮೂರ್ತಿ ಪುರಂ, ಮೈಸೂರು ೫೭೦೦೦೪
೪. ಎ. ಡಿ. ಹೆಗ್ಗಡೆ	ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳಗಂಗೋತ್ರಿ, ಮಂಗಳೂರು
೫. ಸಿ. ಜಿ. ಪುರುಷೋತ್ತಮ	ಸಂಸ್ಕೃತ ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು.

ಕೆ. ಮೊಹಮ್ಮದ್ ಶರೀಫ್

ಕವಲೇದುರ್ಗ ಮಹಾಮಹತ್ತಿನಮಠದ ಮೂರು ಹೊಸ ತಾಮ್ರಶಾಸನಗಳು

ಕವಲೇದುರ್ಗ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಇದಕ್ಕೆ ಕವಲೇದುರ್ಗ, ಕವಿಲೇದುರ್ಗ, ಕವುಲೇದುರ್ಗ ಮತ್ತು ಕೌಲೇದುರ್ಗ ಎಂಬೆಲ್ಲ ಹೆಸರುಗಳು ಇವೆ. ಕೆಳದಿ ಅರಸರ ಶಾಸನಗಳಲ್ಲಿ ಇದನ್ನು 'ದುರ್ಗ', 'ಭುವನಗಿರಿದುರ್ಗ' ಎಂದು ಕರೆದಿದ್ದಾರೆ. ಇದು ಕೆಳದಿ ಅರಸರ ನಾಲ್ಕನೆಯ ರಾಜಧಾನಿ. ಇಲ್ಲಿ ಈ ಅರಸರ ಕಾಲದಲ್ಲಿ ದುರ್ಗದ (ಕವಲೇದುರ್ಗದ) ತಿಮ್ಮಣ್ಣನೆಂಬುವನು ಕಟ್ಟಿಸಿದ ಮಹಾಮಹತ್ತಿನಮಠವೆಂಬ ಒಂದು ವೀರಶೈವಮಠವಿದೆ. ಇಲ್ಲಿ ಕೆಳದಿ ಅರಸರಿಗೆ ಸೇರಿದ ಸುಮಾರು ೭೦–೮೦ ತಾಮ್ರಶಾಸನಗಳು[1], ಓಲೆಗರಿಗಳು ಇವೆ. ಇವುಗಳಲ್ಲದೆ ಆ ಮಠದಲ್ಲಿ ಮೂರು ಅಪ್ರಕಟಿತ ತಾಮ್ರಶಾಸನಗಳು ಇದ್ದು ಅವನ್ನು ಶ್ರೀ ವೀರಭದ್ರ ಶಿವಾಚಾರ್ಯಸ್ವಾಮಿಗಳು ನನಗೆ ಪ್ರಕಟಿಸಲು ಕೊಟ್ಟರು. ಹೀಗೆ ಪ್ರಕಟಿಸಲು ನೆರವಿತ್ತ ಇವರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು.

ಈ ಮೂರು ತಾಮ್ರಶಾಸನಗಳು ಒಂದೊಂದು ಹಲಗೆಯವಾಗಿದ್ದು ಅವುಗಳ ಮೇಲುಭಾಗದಲ್ಲಿ ಒಂದು ರಂಧ್ರವಿದೆ. ಒಂದು ಹಲಗೆಯ ಮೇಲುಭಾಗದಲ್ಲಿ ಮಾತ್ರ—ಬಲಭಾಗದಲ್ಲಿ ಚಂದ್ರ ಮತ್ತು ಲಿಂಗ ಹಾಗೂ ಎಡಭಾಗದಲ್ಲಿ ಬಸವನ ಚಿತ್ರಗಳನ್ನು ಕೆತ್ತಿದೆ. ಇವುಗಳಲ್ಲಿ ಮೊದಲನೆಯ ತಾಮ್ರಪಟ ೧೩ ಅಂಗುಲ ಉದ್ದ ಹಾಗೂ ೮ ಅಂಗುಲ ಅಗಲ, ಎರಡನೆಯ ಪಟ ೧೬ ೧/೨ ಅಂಗುಲ ಉದ್ದ ಹಾಗೂ ೧೦ ೩/೪ ಅಂಗುಲ ಅಗಲ ಮತ್ತು ಮೂರನೆಯ ಪಟ ೧೨ ೧/೨ ಅಂಗುಲ ಉದ್ದ ಹಾಗೂ ೯ ೧/೨ ಅಂಗುಲ ಅಗಲ ಇವೆ. ಮೊದಲ ಎರಡು ಶಾಸನಗಳ ಹಲಗೆಗಳ ಎರಡೂ ಕಡೆಗಳಲ್ಲೂ ಬರವಣಿಗೆ ಇದೆ. ಮೂರನೆಯ ಶಾಸನದಲ್ಲಿ ಹಲಗೆಯ ಒಂದು ಕಡೆಯನ್ನು ಮಾತ್ರ ಕಂಡರಿಸಿದೆ. ಲಿಪಿ ಸವೆದುಹೋಗದಂತಿರಲು ಹಲಗೆಗಳ ಅಂಚನ್ನು ಕಂಡರಿಸಿರುವ ಮುಖದ ಕಡೆ ಸ್ವಲ್ಪ ಉಬ್ಬಿಸಿದೆ.

ಈ ಮೂರು ತಾಮ್ರಶಾಸನಗಳಲ್ಲಿ ಮೊದಲೆರಡು ಕೆಳದಿ ದೊರೆ ಬಸವಪ್ಪನಾಯಕನಿಗೂ ಉಳಿದ ಒಂದು ಶಾಸನ ಈತನ ಮಗ ಸೋಮಶೇಖರನಾಯಕನಿಗೂ ಸೇರಿವೆ.

ಈ ಮೂರು ಶಾಸನಗಳ ಲಿಪಿ ಮತ್ತು ಭಾಷೆ ಕನ್ನಡ. ಪ್ರಾರಂಭದಲ್ಲಿನ ಶಂಭುವಿನ ಸ್ತುತಿ ಹಾಗೂ ಕೊನೆಯಲ್ಲಿರುವ ಶಾಪ ಪದ್ಯಗಳು ಹೊರತಾಗಿ ಉಳಿದ ಶಾಸನ ಭಾಗ ಗದ್ಯದಲ್ಲಿವೆ. ಎರಡು ಮತ್ತು ಮೂರನೆಯ ಶಾಸನಗಳ ಕೊನೆಯಲ್ಲಿ ಶ್ರೀ ಸದಾಶಿವ ಎಂಬ ಅಂಕಿತವಿದೆ.

---

1. ನೋಡಿ: 'ಕವುಲೇದುರ್ಗದ ಶಾಸನಗಳ ಸಮೀಕ್ಷೆ', ಮಾನವಿಕ ಕರ್ಣಾಟಕ, ಸಂಪುಟ ೮, ಸಂಚಿಕೆ ೨ (೧೯೭೮) ಮತ್ತು 'ಕವುಲೇದುರ್ಗ ಒಂದು ಐತಿಹಾಸಿಕ ಅವಲೋಕನ' ಮಾನವಿಕ ಕರ್ಣಾಟಕ ಸಂಪುಟ ೪, ಸಂಚಿಕೆ ೩ (೧೯೭೪)

ಮೊದಲೆರಡು ಶಾಸನಗಳು ಕೆಳದಿ ಅರಸ ಬಸವಪ್ಪನಾಯಕ ಹಾಕಿಸಿರುವ ಇತರ ತಾಮ್ರಶಾಸನಗಳಂತೆಯೇ ಇದ್ದು ಅದರಲ್ಲಿ ಅರಸನ ವಂಶಾವಳಿಯನ್ನು ಹೀಗೆ ಕೊಟ್ಟಿದೆ.

ಸದಾಶಿವರಾಯನಾಯಕ
|
ಸಿದ್ದಪ್ಪನಾಯಕ
|
ಶಿವಪ್ಪನಾಯಕ
|
ಸೋಮಶೇಖರನಾಯಕ
(ಪತ್ನಿ)
ಚೆನ್ನಮ್ಮಾಜಿ
|
ಬಸವಪ್ಪನಾಯಕ

ಇವುಗಳಲ್ಲಿ ಕೆಳದಿ ಅರಸರ ಅನೇಕ ತಾಮ್ರಶಾಸನಗಳಲ್ಲಿ ಬರುವ ಹಾಗೆ ಅರಸರ ಬಿರುದಾವಳಿಗಳು ಇವೆ.

ಮೊದಲೆರಡು ದಾನಶಾಸನಗಳು ಬಸವಪ್ಪನಾಯಕನು 'ಮಹಾಮಹತ್ತಿನವೊಳಗಾದ ಯೆರಡು ದಂಡದಮಠದ ಪಟ್ಟದಗುರು ಬಸವರಾಜದೇವರ ಶಿಷ್ಯ ಬಸವಪ್ರಭುದೇವರಿಗೆ ಹದಿನೈದು ಎತ್ತಿನ ಮಾನ್ಯವನ್ನು'[2] ಬಿಟ್ಟಿರುವುದನ್ನು ತಿಳಿಸುತ್ತವೆ. ಇದರಲ್ಲಿ ಎರಡನೆಯ ಶಾಸನವನ್ನು ಮರಿಯಪ್ಪ ಎಂಬುವನು 'ಇದನ್ನು (ಈ ಎತ್ತಿನಮಾನ್ಯವನ್ನು) ಬಿಟ್ಟಬಗೆ ಶಾಸನವನ್ನು ಬರೆಸಿಕೊಡಬೇಕೆಂದು ಹೇಳಿದ್ದರಿಂದ' ದೊರೆಯು ಶಾಸನವನ್ನು ಬರೆಸಿಕೊಟ್ಟನೆಂದು ಹೇಳಿದೆ. ಅರಸನು ಎತ್ತಿನಮಾನ್ಯವನ್ನು ಬಿಡುವಾಗ 'ಯಿೂ ಯೆತ್ತಿನ ಮೇಲೆ ಅಡಿಕೆ ಮೆಣಸು ಝುಲ್ಲಿಪಟ್ಟೆಕವಾಡ ಮುಂತಾದ ಘಡಿಸಿನ ಸರಕು ಹೊರತ್ತಾಗಿ ಹೇರಿಕೊಂಬ ಜಿನಿಸು ಅಕ್ಕಿ ಭತ್ತ ರಾಗಿ ಉಪ್ಪು ಹುಳಿ ವಿದಳ ಬೂಸ ಯೆಂಣೆ ತುಪ್ಪ ಕಾಯಿ ಬೆಲ್ಲ ಕಾಚು ಖೊಬರಿ ಕತ್ತ ಕಬ್ಬುನ ಉತ್ತತ್ತೆ ಖರ್ಜೂರ ಅರಿಸಿನ ಶುಂಠಿ ಉಳ್ಳಿ ಮುಂತಾದ ಜಿನಿಸುಗಳಿಗೆ' ಸುಂಕವನ್ನು ಮಾನ್ಯಮಾಡಿಕೊಟ್ಟಿದ್ದಾನೆ. ಅಲ್ಲದೆ ಈ 'ಜಿನಿಸನು ದುರ್ಗ (ಕವಲೇದುರ್ಗ), ಯಿಕ್ಕೇರಿ (ಇಕ್ಕೇರಿ) ಮತ್ತು ಘಟ್ಟದ (ದಕ್ಷಿಣ ಕನ್ನಡ ಜಿಲ್ಲೆ) ಕೆಳಗಣ ಹೋಬಳಿ ಸುಂಕದಲ್ಲಿ ಯತ್ತುಗಳ ವರ್ನ ವಯಸ್ಸು ಬರಸಿ[3] ಯಿೂ ಪ್ರಮಾಣು ಜಿನಿಸನು ಹೇರಿಕೊಂಡು ಷಡ್ಧರುಶನಕ್ಕೂ ನಿಡಿಮಾಡಿಕೊಂಡು'[4] ಹಾಗೂ 'ಶಿಷ್ಯಪಾರಂಪರ್ಯ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮವ ನಡಸಿಕೊಂಡು ಬಾಹದೆಂದು' ಶಾಸನದಲ್ಲಿ ಹೇಳಿದ್ದಾನೆ.

---

2. ಎತ್ತಿನಮಾನ್ಯ ಅಂದರೆ ಎತ್ತಿನ ಮೇಲೆ ಹೇರಿಕೊಂಡು ಬರುವ ವಸ್ತುಗಳ ಮೇಲೆ ಹಾಕುವ ತೆರಿಗೆಯ ಮನ್ನ (ಮಾನ್ಯ). ಕೆಳದಿ ನಾಯಕರ ಅನೇಕ ಶಾಸನಗಳಲ್ಲಿ ಇದೇ ರೀತಿ ಮಹತ್ತಿನ ಮಠಗಳಿಗೆ ಎತ್ತಿನ ಮೇಲೆ ಹೇರಿಕೊಂಡು ಬರುವ ವಸ್ತುಗಳ ಮೇಲೆ ತೆರಿಗೆ ಮನ್ನ ಮಾಡಿದ್ದನ್ನು ನಾವು ನೋಡಬಹುದು. ನೋಡಿ: M. A. R. ೧೯೪೩–೩೭, E. C; VIII Tl, ೪೨, ೬೮, ೬೯ ಇತ್ಯಾದಿ.

3. ಮಠಗಳಿಗೆ ಬಿಟ್ಟ ಎತ್ತಿನಮಾನ್ಯದ ದುರುಪಯೋಗವಾಗಬಾರದೆಂಬುದೇ ಹೀಗೆ ಹೇಳಿರುವುದರ ಉದ್ದೇಶ.

4. ಅಂದರೆ ಭಾರತೀಯ ತತ್ವಶಾಸ್ತ್ರದ ಷಟ್‌ದರ್ಶನಗಳ ಅಧ್ಯಯನ ನಡಸಿಕೊಂಡು ಹೋಗುವುದು ಎಂದರ್ಥ. ಇದನ್ನು ನಾವು ಈ ಅರಸರ ಅನೇಕ ತಾಮ್ರಶಾಸನಗಳಲ್ಲಿ ಕಾಣಬಹುದು. ನೋಡಿ: E.C. VIII Tl ; ೪೨, ೪೪, ೪೫, ೪೭, ೪೮ ಇತ್ಯಾದಿ.

ಮೊದಲನೆಯ ಶಾಸನದಲ್ಲಿ ದಾನಕೊಟ್ಟದ್ದು ಶಕವರುಷ ೧೬೨೮ನೆಯ ವ್ಯಯಸಂವತ್ಸರದ ಮಾಘ ಶು ೫ ಎಂದಿದೆ. ಇದು ಕ್ರಿ. ಶ. ೧೭೦೭ರ ಜನವರಿ ೨೭ ಸೋಮವಾರಕ್ಕೆ ಸರಿಹೊಂದುತ್ತದೆ. ಎರಡನೆಯ ಶಾಸನದಲ್ಲಿ ದಾನಕೊಟ್ಟದ್ದು ಶಕವರುಷ ೧೬೩೧ನೆಯ ವಿರೋಧಿಸಂವತ್ಸರದ ಕಾರ್ತಿಕ ಶುದ್ಧ ೫ ಎಂದಿದೆ. ಈ ತೇದಿ ವಿವರಗಳು ಕ್ರಿ. ಶ. ೧೭೦೯ರ ಅಕ್ಟೋಬರ್ ೨೬, ಬುಧವಾರಕ್ಕೆ ಸರಿಹೋಗುತ್ತವೆ. ದತ್ತಿಗಳು ಒಂದೇ ಮಠಕ್ಕೆ ಸೇರಿದ್ದು ಅರಸನು ಅವುಗಳನ್ನು ಬೇರೆ ಬೇರೆ ಕಾಲದಲ್ಲಿ ಹಾಕಿಸಿದ್ದಾನೆ. ಬಹುಶಃ ಇವೆರಡೂ ದಾನಗಳು ಒಂದೇ ಆಗಿದ್ದು ಮೊದಲು ಕೊಟ್ಟ ದಾನವನ್ನು ಎರಡನೆಯ ಶಾಸನದಲ್ಲಿ ಪುನಃ ಸ್ಥಿರಪಡಿಸಿರಬಹುದು.

ಈ ಶಾಸನಗಳಲ್ಲಿ ದೊರೆ ಬಸವಪ್ಪನಾಯಕನ ಬಗೆಗಾಗಲಿ ಇತರ ರಾಜರ ವಿಷಯದಲ್ಲಾಗಲಿ ಹೊಸ ಬೆಳಕು ಬೀಳುವುದಿಲ್ಲ. ಈಗಾಗಲೇ ದೊರೆತಿರುವ ಬಸವಪ್ಪನಾಯಕನ ಹಲವಾರು ತಾಮ್ರಶಾಸನಗಳ ಸಾಲಿಗೆ ಇವು ಸೇರುತ್ತವೆ.

ಮೂರನೆಯ ಶಾಸನವು ಕೆಳದಿ ಅರಸ ಸೋಮಶೇಖರನಾಯಕನ ಕಾಲಕ್ಕೆ ಸೇರಿದ್ದು. ಆತನ ಅನೇಕ ತಾಮ್ರಶಾಸನಗಳಂತೆಯೇ ಇದ್ದು ಅದರಲ್ಲಿ ಅರಸನ ವಂಶಾವಳಿಯನ್ನು ಹೀಗೆ ಹೇಳಿದೆ.

ಸದಾಶಿವನಾಯಕ
|
ಶಿವಪ್ಪನಾಯಕ
|
ಸೋಮಶೇಖರನಾಯಕ
(ಪತ್ನಿ)
ಚೆನ್ನಮ್ಮಾಜಿ
|
ಬಸವಪ್ಪನಾಯಕ
|
ಸೋಮಶೇಖರನಾಯಕ

ಇಲ್ಲಿ ಅರಸರ ವಂಶಾವಳಿಯನ್ನು 'ಕೆಳದಿ ಸದಾಶಿವರಾಯನಾಯಕರ ವಂಶೋದ್ಭವರಾದ ಶಿವಪ್ಪನಾಯಕ'...ಎಂದು ಹೇಳಿದೆ. ಅಲ್ಲದೆ ಹಿಂದಿನ ಎರಡು ಶಾಸನಗಳಲ್ಲಿ ಹೇಳಿರುವ ಸಿದ್ದಪ್ಪನಾಯಕನ ಹೆಸರನ್ನು ಕೈಬಿಟ್ಟಿದೆ.

ಅರಸನ ಅನೇಕ ಬಿರುದಾವಳಿಗಳಾದ ನಂತರ ಈ ಶಾಸನ ಒಂದು ದಾನದ ಸಂಗತಿಯನ್ನು ತಿಳಿಸುತ್ತದೆ. ಅರಸನು 'ಅಳವಿಂಡಿ ಕೆಂಚಸಿದ್ದೇದೇವನ ಶಿಷ್ಯ ನಿರ್ವಾಣದೇವ ಎಂಬುವನ ಕೈಯ್ಯಲ್ಲಿ ಒಂದುನೂರ ಹಂನೆರಡುವರೆ ವರಹಗಳನ್ನು ಅರಮನೆಗೆ ಪಡೆದುಕೊಂಡು ಜಿನಿಸೀಮೆಗೆ ಸೇರಿದ ಚಿಕ್ಕ ಮಯಿಶೆ (ಚಿಕ್ಕ ಮಹಿಷೆ) ಗ್ರಾಮದಲ್ಲಿ ಅದೇ ನಿರ್ವಾಣದೇವನು ಕಟ್ಟಿಸಿದ ವಶೀಕ್ರುತಮಠದ ಧರ್ಮಕ್ಕೆ ಸ್ವಾಸ್ತಿಯನು ಶಿವಾರ್ಪಿತವಾಗಿ ಕೊಟ್ಟನೆಂದು ಹೇಳಿದೆ. ದಾನ ಪಡೆದವನು 'ಯಿ ಭೂಮಿಗೆ ನೆಟ್ಟ ಲಿಂಗ ಮುದ್ರೆ ಕಲ್ಲಿನೊಳಗುಳ್ಳ ನಿಧಿನಿಕ್ಷೇಪಜಲಪಾಷಾಣಅಕ್ಷೀಣಿಆಗಾಮಿಸಿಧಸಾಧ್ಯಂಗಳೆಂಬ ಅಷ್ಟಭೋಗ ತೇಜಸ್ವಾಮ್ಯಂಗಳನು ಪೂರ್ವಮರಿಯಾದೆಯಲ್ಲಿ ಅಗುಮಾಡಿಕೊಂಡು' ಶಿಷ್ಯಪಾರಂಪರ್ಯ್ಯವಾಗಿ ಅನುಭವಿಸಿಕೊಂಡು ಬರಬೇಕೆಂದು ಶಾಸನದಲ್ಲಿ ಹೇಳಿದೆ.

ಈ ದಾನಕೊಟ್ಟದ್ದು ಶಕವರುಷ ೧೬೪೧ನೆಯ ವಿಕಾರಿಸಂವತ್ಸರದ ಭಾದ್ರಪದ ಶು ೧೫ರಲ್ಲಿ. ಈ ತೇದಿ ವಿವರಗಳು ಕ್ರಿ. ಶ. ೧೭೧೯ರ ಆಗಸ್ಟ್ ೧೮ ಮಂಗಳವಾರಕ್ಕೆ ಸರಿಹೊಂದುತ್ತವೆ.

ಈ ಶಾಸನದಲ್ಲಿ ಕೆಳದಿ ಧೊರೆ ಸೋಮಶೇಖರನಾಯಕನ ಬಗೆಗಾಗಲಿ, ಇತರ ದೊರೆಗಳ ವಿಷಯಗಳಲ್ಲಾಗಲಿ ಹೊಸ ಬೆಳಕು ಬೀಳುವುದಿಲ್ಲ. ಈಗಾಗಲೇ ದೊರೆತಿರುವ ಸೋಮಶೇಖರನಾಯಕನ ಹಲವಾರು ತಾಮ್ರಶಾಸನಗಳ ಸಾಲಿಗೆ ಇದು ಸೇರುತ್ತದೆ.

ಕೆಳದಿ ಅರಸರು ದತ್ತಿ ಕೊಟ್ಟಿರುವ ಮಠಗಳಲ್ಲಿ ಮಹತ್ತಿನಮಠಗಳವೇ ಹೆಚ್ಚು ಸಂಖ್ಯೆ. ಆದರೂ ಕೆಲವು ವಶೀಕೃತ ಮಠಕ್ಕೂ ಅವರು ದತ್ತಿಕೊಟ್ಟರೆಂಬುದಕ್ಕೆ ಇದೂ ಒಂದು ನಿದರ್ಶನ.[5]

ಕೆಳದಿ ರಾಜ್ಯದ ವೀರಶೈವ ಮಠಗಳಲ್ಲಿ ಮಹತ್ತಿನಮಠಗಳೇ ಹೆಚ್ಚು. ಇವಲ್ಲದೆ ಸುಮಾರು ೮–೧೦ ವಿರಕ್ತಮಠಗಳು, ಒಂದೆರಡು ವಶೀಕೃತ ಮಠಗಳು ಮತ್ತು ಇತರೆ ಚಿಕ್ಕಪುಟ್ಟ ಮಠಗಳು ಇದ್ದ ನಿದರ್ಶನಗಳು ಇವರ ಶಾಸನಗಳಲ್ಲಿವೆ. ಒಟ್ಟಿನಲ್ಲಿ ಕೆಳದಿ ರಾಜ್ಯದಲ್ಲಿ ಕಂಡುಬರುವ ಕೆಲವೇ ವಶೀಕೃತ ಮಠಗಳ ಸಾಲಿಗೆ ಇದೂ ಸೇರುತ್ತದೆ. ವಶೀಕೃತ ಮಠವೆಂದರೆ ಬಹುಶಃ ವೀರಶೈವ ಮಠಗಳಲ್ಲಿನ ಒಂದು ವರ್ಗ ಅಥವ ಮಹಾಮಹತ್ತಿನ ಅಧೀನದಲ್ಲಿರುವ (ವಶೀಕೃತ) ಮಠವಾಗಿರಬಹುದು.

ಶಾಸನಗಳ ಪಾಠಗಳು

ಒಂದನೆಯ ತಾಮ್ರಶಾಸನ

ಮುಂಭಾಗ

೧. ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯ
೨. ನಗರಾರಂಭಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀಜಯಾ
೩. ಭ್ಯುದಯ ಶಾಲಿವಾಹನಶಕವರುಷ ೧೬೨೯ನೆಯ ವ್ಯಯಸಂವ
೪. ತ್ಸರದ ಮಾಘ ಶು ೫ ಲು ಶ್ರೀಮತ್ತುಸಜ್ಜನಶುಧಶಿವಾಚಾರಸ
೫. ಂಪಂನ ದೇವಾಪ್ರುಥ್ವೀ ಮಹಾಮಹತ್ತಿನೊಳಗಾದ ಯೆರಡುದ
೬. ಂಡದಮಠದ ಪಟ್ಟದಗುರು ಬಸವರಾಜದೇವರ ಶಿಶ್ಯರು ಬಸ
೭. ವಪ್ರಭುದೇವರಿಗೆ ಯಡವಮುರಾರಿ ಕೋಟೆಕೋಳಾಹಲ ವಿಶು
೮. ಧವೈದಿಕಾದ್ವೈತಸಿಧಾಂತ್ರಪ್ರತಿಷ್ಠಾಪಕ ಶಿವಗುರುಭಕ್ತಿಪರಾಯ
೯. ಣರಾದ ಕೆಳದಿ ಸದಾಶಿವರಾಯನಾಯಕರ ವಂಶೋದ್ಭವರಾ
೧೦. ದ ಸಿದಪ್ಪನಾಯಕರ ಪ್ರಪೌತ್ರರು ಶಿವಪ್ಪನಾಯಕರ ಪೌತ್ರ
೧೧. ರು ಸೋಮಶೇಖರನಾಯಕರ ಧರ್ಮಪತ್ನಿಯರಾದ ಚೆಂನಂ
೧೨. ಮ್ಮಾಜಿಯವರ ಪುತ್ರರು ಬಸವಪ್ಪನಾಯಕರು ಬರಸಿಕೊಟ್ಟ
೧೩. ಯೆತ್ತಿನಮಾನ್ಯದ ಶಾಸನದ ಕ್ರಮವೆಂತ್ತೆಂದರೆ ಯಿೂ ಮಠದ
೧೪. ಧರ್ಮಕ್ಕೆ ಬಿಟ್ಟ ಮಾನ್ಯದ ಯೆತ್ತು ನಡೆ ೧೫ ಹದಿನೈದು ಯೆತ್ತಿನ
೧೫. ಮಾನ್ಯವನು ಶಿವಾರ್ಪಿತವಾಗಿ ಬಿಟ್ಟೆವಾಗಿ ಯಿೂ ಯೆತ್ತಿನ ಮೇಲೆ ಅ
೧೬. ಡಿಕೆ ಮೆಣಸು ಝುಲಿಪಟ್ಟೆಕವಾಡ ಮುಂತ್ತಾದ ಘಡಿಸಿನ ಸರ
೧೭. ಕು ಹೊರತ್ತಾಗಿ ಹೇರಿಕೊಂಬ ಜಿನಿಸು ಅಕ್ಕಿ ಭತ್ತ ರಾಗಿ ಉಪ್ಪು ಹು
೧೮. ಳಿ ವಿದಳ ಬೂಸ ಯೆಂಣೆ ತುಪ್ಪ ಕಾಯಿ ಬೆಲ್ಲ ಕಾಚು ಖೊಬರಿ ಕ
೧೯. ತ್ತ ಕಬುನ ಉತ್ತುತ್ತೆ ಖರ್ಜೂರ ಅರಿಶಿನ ಶುಂಠಿ ಉಳಿಮುಂತ್ತಾ
೨೦. ದ ಜಿನಿಸನು ದುರ್ಗ ಯಿಕೆರಿ ಘಟ್ಟದ ಕೆಳಗಣಹೋಬಳಿ ಸು
೨೧. ಂಕದಲ್ಲಿ ಸಹ ಯೆತ್ತುಗಳ ವರ್ನ ವಯುಸನು ಬರಸಿ ಯಿೂ ಪ್ರ

ಹಿಂಭಾಗ

೨೨. ಮಾಣು ಜಿನಿಸನು ಹೇರಿಕೊಂಡು ಷಡ್ದರುಶನಕ್ಕೂ ನಿಡಿಮಾ
೨೩. ಡಿಕೊಂಡು ನಿಂಮ ಶಿಶ್ಯಪಾರಂಪರ್ಯ್ಯವಾಗಿ ಆಚಂದ್ರಾ

---

5. ನೋಡಿ: E.C. VIII. Tl, ೫೫ ಇತ್ಯಾದಿ.

೨೪. ರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮವ ನಡಸಿಕೊಂ
೨೫. ಡುಬಾಹದೆಂದು ಬರಸಿಕೊಟ್ಟ ಯೆತ್ತಿನಮಾನ್ಯದ ಧ
೨೬. ರ್ಮಶಾಸನ ಆದಿತ್ಯಚಂದ್ರಾವನಿಲೋನಳಶ್ಚ ದ್ಯೌರ್ಭೂ
೨೭. ಮಿರಾಪೋಹೃದಯಂ ಯಮಶ್ಚ ಅಹಶ್ಚ ರಾತ್ರಿಶ್ಚ ಉ
೨೮. ಭೇ ಚ ಸಂಧ್ಯೋ ಧರ್ಮಶ್ಚ ಜಾನಾತಿ ನರಸ್ಯ ಉತ್ತಂ ದಾನ
೨೯. ಪಾಲನಯೋರ್ಮಧ್ಯೇ ದಾನಾಛ್ರೇಯೋನುಪಾಲನಂ ದಾನಾ
೩೦. ತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ

ಎರಡನೆಯ ತಾಮ್ರಶಾಸನ

ಮುಂಭಾಗ

೧. ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ
೨. ಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನಶಕ
೩. ವರುಷ ೧೬೩೭ನೆಯ ವಿರೋಧಿಸಂವತ್ಸರದ ಕಾರ್ತೀಕ ಶುಧ ೫ ಲು ಶ್ರೀಮತ್ಸಜ್ಜನ
೪. ಶುಧಶಿವಾಚಾರಸಂಪಂನ ದ್ಯೇವಾಪೃಥ್ವೀ ಮಹಾಮಹತ್ತಿನವಳಗಾದ ಯೆರಡು
೫. ದಂಡದಮಠದ ಪಟ್ಟದಗುರು ಬಸವರಾಜದೇವರ ಶಿಶ್ಯರು ಬಸವಪ್ರಭುದೇ
೬. ವರಿಗೆ ಯೆಡವಮುರಾರಿ ಕೋಟೆಕೋಳಾಹಳ ವಿಶುಧವೈದಿಕಾದ್ವೈತಸಿಧಾಂತ
೭. ಪ್ರತಿಷ್ಠಾಪಕ ಶಿವಗುರುಭಕ್ತಿಪರಾಯಣರಾದ ಕೆಳದಿ ಸದಾಶಿವರಾಯನಾಯಕರ
೮. ವಂಶೋದ್ಭವರಾದ ಸಿದ್ದಪ್ಪನಾಯಕರ ಪ್ರಪೌತ್ರರು ಶಿವಪ್ಪನಾಯಕರ ಪೌತ್ರರು
೯. ಸೋಮಶೇಖರನಾಯಕರ ಧರ್ಮಪತ್ನಿಯರಾದ ಚೆಂನಂಮ್ಮಾಜಿಯವರ ಪುತ್ರ
೧೦. ರು ಬಸವಪ್ಪನಾಯಕರು ಬರಸಿಕೊಟ್ಟ ಯೆತ್ತಿನಮಾನ್ಯದ ಧರ್ಮಶಾಸನದಕ್ರ
೧೧. ಮವೆಂತೆಂದರೆ ಯಿ ಮಠದ ಧರ್ಮಕ್ಕೆ ಬಿಟ್ಟ ಮಾನ್ಯದ ಯೆತ್ತಿಗೆ ಶಾಸನವ ಬರಸಿಕೊಡ
೧೨. ಬೇಕೆಂದು ಮರಿಯಪ್ಪನವರು ಹೇಳಿದ್ದರಿಂದ ಬರಸಿಕೊಟ್ಟದು ಯಿ ಮಠದ ಧರ್ಮಕ್ಕೆ
೧೩. ಬಿಟ್ಟ ಮಾನ್ಯದ ಯೆತ್ತು ನಡೆ ೧೫ ಹದಿನೈದು ಯೆತ್ತಿನಮಾನ್ಯವನು ಶಿವಾರ್ಪಿತವಾಗಿ ಬಿ
೧೪. ಟ್ಟೆವಾಗಿ ಯಿ ಯೆತ್ತಿನಮೇಲೆ ಅಡಕೆ ಮೆಣಸು ಝುಲ್ಲಿಪಟ್ಟೆಕವಾಡ ಮುಂತ್ತಾ
೧೫. ದ ಘಡಿಸಿನ ಸರಕು ಹೊರತ್ತಾಗಿ ಹೇರಿಕೊಂಬ ಜಿನಿಸು ಅಕ್ಕಿ ಭತ್ತ ರಾಗಿ ಉಪ್ಪು ಹು
೧೬. ಳಿ ಪಿಪಳ ಬೂಸ ಯೆಂಣೆ ತ್ತುಪ್ಪ ಕಾಯಿ ಬೆಲ್ಲ ಕಾಚು ಕೊಬರಿ ಕತ್ತ ಕಬ್ಬಿನ ಉತ್ತುತ್ತೆ ಖ
೧೭. ರ್ಜೂರ ಅರಿಸಿನ ಶುಂಠಿ ಉಳ್ಳಿ ಮುಂತ್ತಾದ ಜಿನಿಸನು ದುರ್ಗಯಿಕ್ಕೇರಿ ಘಟ್ಟದ ಕೆಳಗ
೧೮. ಣಹೋಬಳಿ ಸುಂಕದಲ್ಲಿ ಸಹ ಯೆತ್ತುಗಳ ವರ್ಷ ವಯಸ್ಸನು ಬರಸಿ ಯಿ ಪ್ರಮಾ
೧೯. ಣುಜಿನಿಸನು ಹೇರಿಕೊಂಡು ಷದ್ದರುಶನಕ್ಕೂ ನಿಡಿಮಾಡಿಕೊಂಡು ನಿಂಮ ಶಿಶ್ಯ
೨೦. ಪಾರಂಪರ್ಯ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮ
೨೧. ವ ನಡಸಿಕೊಂಡುಬಾಹದೆಂದು ಬರಸಿಕೊಟ್ಟ ಯೆತ್ತಿನಮಾನ್ಯದ ಧರ್ಮಶಾ
೨೨. ಸನ ಆದಿತ್ಯಚಂದ್ರಾವನಿಲೋನಳಶ್ಚ ದ್ಯೌರ್ಭೂಮಿರಾಪೋಹೃದಯಂ ಯೆಮ
೨೩. ಶ್ಚ ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ಉತ್ತಂ ದಾನಪಾ

ಹಿಂಭಾಗ

೨೪. ಲನಯೋರ್ಮಧ್ಯೇ ದಾನಾಛ್ರೇಯೋನುಪಾಲನಂ ದಾನಾತ್ಸ್ವರ್ಗಮವಾಪ್ನೋತಿ ಪಾಲ
೨೫. ನಾದಚ್ಯುತಂ ಪದಂ ಸ್ವದತ್ತಾ ದ್ವಿಗುಣಂ ಪುಂಣ್ಯಂ ಪರದತ್ತಾನುಪಾಲನಂ
೨೬. ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇತು ಯೆತ್ರಯೋಗೀಶ್ವರಃ ಕುರ್ಯಾ
೨೭. ತು ಶಿವಲಿಂಗಾರ್ಚನಂ ಸಕ್ರುತು ವಸಂತಿ ತತ್ರ ತೀರ್ಥಾನಿ ಸರ್ವಾಣಿ ಸತತಂ ಗುಹಾ

೨೮. ಹರಸ್ಯ ಪ್ರೀಣಿತಾರ್ಥಂ ತು ಶಿವಭಕ್ತಾಯ ದೀಯ್ಯತೇ ದಾನಂ ತದ್ವಿಮುಲಂ [ಪ್ರೋಕ್ತಂ]
೨೯. ಕೇವಲಂ ಮೋಕ್ಷಸಾಧನಂ

ಶ್ರೀಸದಾಶಿವ

ಮೂರನೆಯ ತಾಮ್ರಶಾಸನ

ಮುಂಭಾಗ

೧. ನಮುಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭಮೂಲಸ್ತಂ
೨. ಭಾಯ ಶಂಭವೇ ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನಶಕವರುಷ ೧೬೪೨ನೆ[ಯ]
೩. ವಿಕಾರಿಸಂವತ್ಸರದ ಭಾದ್ರಪದ ಶು ೧೫ ಲು ಶ್ರೀಮದ್ವೇದಮುರಾರಿ ಕೋಟಿಕೋಳಾಹಳ
೪. ವಿಶುಧವೈದಿಕಾದ್ವೈತಸಿಧಾಂತಪ್ರತಿಷ್ಟಾಪಕ ಶಿವಗುರುಭಕ್ತಿಪರಾಯಣರಾದ ಕೆಳದಿ
೫. ಸದಾಶಿವರಾಯನಾಯಕರ ವಂಶೋಧ್ಭವರಾದ ಶಿವಪ್ಪನಾಯಕರ ಪ್ರಪೌತ್ರರು ಸೋಮಶೇ
೬. ಖರನಾಯಕರ ಧರ್ಮಪತ್ನಿಯರಾದ ಚೆಂನಮ್ಮಾಜಿಯವರ ಪೌತ್ರರು ಬಸವಪ್ಪನಾಯಕ
೭. ರ ಪುತ್ರರು ಸೋಮಶೇಖರನಾಯಕರು ಅಳವಿಂಡಿ ಕೆಂಚಸಿದ್ದೇವರ ಶಿಶ್ಯರು ನಿರ್ವಾಣದೇವ
೮. ರು ಜಿನಿಸೀಮೆ ಚಿಕಮಯಿಶೆಗ್ರಾಮದಲು ಕಟ್ಟಿಕೊಂಡು ಯಿಪ್ಪ ವಶೀಕೃತದಮಠದ ಧರ್ಮಕೆ ಬರ
೯. ಸಿಕೊಟ್ಟ ಭೂದಾನಧರ್ಮಶಾಸನದ ಕ್ರಮವೆಂತೆಂದರೆ ಯಿ ಮಟದ ಧರ್ಮಕೆ ಬಿಟ್ಟ ಸ್ವಾಸ್ತಿ ಯಿ ಚಿ
೧೦. ಕ ಮಯಿಶೆಗ್ರಾಮದಿಂದ ಕುಳಗ ೧೬ ಕೆ ರೇಟೆ ಗ ೨೪ ಯಿಕಲಾಗಿ ಕೂಡಿದ ದಾಸೋಹದ ಸಿಸ್ತಿನಿಂ ದಲ್ ॥
೧೧. ಉಭಯಂ ಗ ೨೪ ಲ್॥ಕೆ ವಿವರ ನಂದಿದಾಸಿಮಠದ ಸಿದ್ದಲಿಂಗದೇವರ ಸ್ವಾಸ್ತಿನು ನೀಉ ಕ್ರಯಕೆ ತ್ರೈಗದು
೧೨. ಕೊಂಡಬಗೆ ನಿಂಮ ಕೈಯ ಕಾಣಿಕೆ ಗ ೩೨ನು ಅರಮನೆಗೆ ತೆಗದುಕೊಂಡು ಉತ್ತಾರ ಕೊಟದು ಗ ೧೬ ನಿಂ
೧೩. ಮ ಕೈಯ ಕ್ರಯ ಗ ೮೦॥ನು ಅರಮನೆಗೆ ತೆಗದುಕೊಂಡು ಉತ್ತಾರ ಕೊಟ್ಟದು ಮೇಲುವಾಸಿ ಸಿಸ್ತಿನಿಂದಲು
೧೪. ಗ ೮೦ ಲ್॥ ಉಭಯಂ ನಿಂಮ ಕೈಯ ಕಾಣಿಕೆ ಕ್ರಯ ಗ ೧೧೨॥ ನೂರಹಂನೆರಡುವರೆ ವರಹಂನೂ
೧೫. ಅರಮನೆಗೆ ತೆಗದುಕೊಂಡು ಉತ್ತಾರ ಕೊಟ್ಟದು ಗ ೨೪ಲ್॥ ಯಿಪ್ಪತ್ತು ನಾಲ್ಕು ವರಹಂನೂ ಅ
೧೬. ದರ ಸ್ವಾಸ್ತಿಯನು ಶಿವಾರ್ಪಿತವಾಗಿ ಕೊಟ್ಟೆವಾಗಿ ಯಿ ಭೂಮಿಗೆ ನೆಟ್ಟ ಲಿಂಗಮುದ್ರೆ ಕಲ್ಲಿ
೧೭. ನೊಳಗುಳ್ಳ ನಿಧಿಸಿಕ್ಷೇಪಜಲಪಾಶಾಣಅಕ್ಷೀಣಿಆಗಾಮಿಸಿಧಸಾದ್ಯಂಗಳೆಂಬ ಅ
೧೮. ಷ್ಟಭೋಗತೇಜಸ್ವಾಮ್ಯಂಗಳನು ಪೂರ್ವಮರಿಯಾದೆಯಲ್ಲಿ ಅಗುಮಾಡಿಕೊಂಡು ನಿಂಮ ಶಿ
೧೯. ಶ್ಯಪಾರಂಪರ್ಯ್ಯವಾಗಿ ಅನುಭವಿಸಿಕೊಂಡು ಬಾಹದೆಂದು ಬರಸಿಕೊಟ್ಟ ಭೂದಾನಧರ್ಮ
೨೦. ಶಾಸನ ಆದಿತ್ಯಚಂದ್ರಾವನಿಲೋನಳಶ್ಚ ದ್ಯೌರ್ಭೂಮಿರಾಪೋಹೃದಯಂ ಯಮಶ್ಚ
೨೧. ಅಹಶ್ಚ ರಾತ್ರಿಶ್ಚ ಉಭೇ ಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ಉತ್ರತಂ ದಾನಪಾಲನಯೋರ್ಮ
೨೨. ಧ್ಯೇ ದಾನಾಛ್ರೇಯೋನುಪಾಲನಂ ದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ಸ್ವದ
೨೩. ತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ ಪರದತ್ತಾಪಹಾರೇಣ ಸ್ವದತ್ತಂ ನಿಶ್ಫಲಂಭ
೨೪. ವೇತ್ತು ಯತ್ರ ಯೋಗೀಶ್ವರಃ ಕುರ್ಯ್ಯಾತು ಶಿವಲಿಂಗಾರ್ಚನಂ ಸಕೃತ್ತು ವಸಂತಿ ತತ್ರ ತೀರ್ಥಾನಿ ಸ
೨೫. ರ್ವಾಣಿ ಸತತಂ ಗುಹಾ ಹರಸ್ಯ ಪ್ರೀಣಿತಾರ್ಥಂ ತು ಶಿವಭಕ್ತಾಯ ಧೀಯತೇ ದಾನಂ ತದ್ವಿಮುಲಂ
೨೬. ಪ್ರೋಕ್ತಂ ಕೇವಲಂ ಮೋಕ್ಷಸಾಧನಂ

ಶ್ರೀಸದಾಶಿವ

ಮೂಲ: ತ್ರಿವಿಕ್ರಮ ನಾರಾಯಣನ್
ಅನುವಾದ: ಶಿವರಾಮ ಕಾರಂತ

ಜಾವಾದಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವ

ಪ್ರಸ್ತಾವನೆ

ಜಾವಾ ದೇಶದ ಸಾಂಸ್ಕೃತಿಕ ಕುರುಹುಗಳು ಒಂದಿಷ್ಟೂ ಕೆಡದೆ, ದಿಗ್ದೇಶಗಳಿಗೆ ಹರಿಹಂಚಾಗಿ ಹೋಗದೆ, ಆ ದೇಶದಲ್ಲಿ ಇನ್ನು ಹಾಗೆಯೇ ಉಳಿದುಕೊಂಡಿವೆ. ಗ್ರೀಸಿನ ಕಲಾಕೃತಿಗಳಿಗೆ ನಡೆದಂಥ ಅಪಚಾರ ಅಲ್ಲಿ ನಡೆದಿಲ್ಲ. ಮತಾಂಧರು ಅವುಗಳ ಮೇಲೆ ಸೇಡನ್ನು ತೀರಿಸಿಕೊಂಡಿಲ್ಲ; ಆದರೆ ೧೮೧೭ರಲ್ಲಿ ಇಂಗ್ಲಿಷ್ ಗವರ್ನರನಾದ ಸರ್. ಸ್ಟ್ಯಾಂಫರ್ಡ್ ರ್ಯಾಫಲ್ಸ ಎಂಬಾತ, ಅಲ್ಲಿನ ಕಲಾವೈಭವವನ್ನು ಕುರಿತು ಅದ್ಭುತ ಸಂಪುಟಗಳನ್ನು ಪ್ರಕಟಿಸಿದ ಮೇಲೆ, ಅನೇಕರು ಜಾವಾ ದೇಶದ ಶಿಲ್ಪಗಳನ್ನು ಕದ್ದು ಹೊರಕ್ಕೆ ಸಾಗಿಸಿದ್ದುಂಟು. ಜಾವಾದಲ್ಲಿರುವ ಶಿಲ್ಪ ಸಂಪತ್ತನ್ನು ಕಳೆದ ಶತಮಾನದಲ್ಲಿ ಗುರುತಿಸಿದ ಜಾನ್ ಕ್ರಾಫರ್ಡ್ ಆ ವಿಷಯವಾಗಿ ವಿಸ್ಮಯವನ್ನು ಪ್ರಕಟಿಸಿದ್ದಾನೆ. ಆತ ೧೮೨೦ರಲ್ಲಿ ಬರೆದ ಮಾತುಗಳಿವು: "ಜಾವಾ ದೇಶದ ಎಲ್ಲೆಲ್ಲೂ ಹಿಂದೂ ದೇವಾನುದೇವತೆಗಳ ಕಂಚಿನ ಮತ್ತು ಕಲ್ಲಿನ ಶಿಲ್ಪಗಳನ್ನು ಕಾಣಬಹುದು. ಹಿಂದೂ ಪುರಾಣಗಳ ಪ್ರತಿಯೊಬ್ಬ ದೇವ ದೇವತೆಯ ಪ್ರತಿಮೆಯೂ ವಿವಿಧ ರೂಪಗಳಲ್ಲಿ ಅಲ್ಲಿ ಕಾಣಸಿಗುತ್ತದೆ." ಇದು ಹೇಗೆ ಸಾಧ್ಯವಾಯಿತು? ಭಾರತಕ್ಕೂ ಜಾವಾ ದೇಶಕ್ಕೂ ಇರುವ ಪುರಾತನ ಸಂಬಂಧವನ್ನು ಕುರಿತು ಅಲ್ಲಿ ಹಿಂದೆ ಇದ್ದ ಡಚ್ ಸರಕಾರದವರು ನಿರ್ವಂಚನೆಯಿಂದ ಪ್ರಕಟಿಸಿದ್ದಾರೆ. ಮೊದಲು ಜಾವಾ ಮತ್ತು ಸುಮಾತ್ರ ದ್ವೀಪಗಳಲ್ಲಿ ಹಿಂದುಗಳು ತಮ್ಮ ಸಾಮ್ರಾಜ್ಯ ವನ್ನು ಸ್ಥಾಪಿಸಿದರು. ಅಲ್ಲಿಂದ ಹಿಂದುಗಳು ನೆರೆಕೆರೆಯ ದ್ವೀಪಗಳಿಗೆ ವಲಸೆ ಹೋಗಿ, ನೆಲೆಸಿದರು. ಇಲ್ಲೊಂದು ವೈಶಿಷ್ಟ್ಯವಿದೆ. ಆಧುನಿಕ ಯೂರೋಪಿಯನರು ವಿದೇಶಗಳಿಗೆ ವಲಸೆಹೋಗಿ ಅಲ್ಲಿನವರ ಮೇಲೆ ತಮ್ಮ ಸಂಸ್ಕೃತಿಯನ್ನು ಹೊರಿಸಿದಂತೆ ಹಿಂದುಗಳು ಮಾಡಲಿಲ್ಲ. ಜಾವಾಕ್ಕೆ ಹೋದ ಹಿಂದು ಗಳು ಅಲ್ಲಿನ ದೇಶೀಯರೊಡನೆ ಬೆರೆತರು. ಅವರೊಡನೆ ಒಂದಾಗಿ ಅವರ ಮನಸ್ಸಿನ ಮೇಲೂ, ನಿತ್ಯ ಜೀವನದ ಮೇಲೂ ತಮ್ಮ ಪ್ರಭಾವ ಬೀರಿದರು.

ಸಂಶೋಧನೆಯ ಮುಂದುವರಿಕೆ

೧೫೯೫ರಲ್ಲಿ ಜಾವಾಕ್ಕೆ ಹೋದ ಡಚ್ ಈಸ್ಟ್ ಇಂಡಿಯಾ ಕಂಪೆನಿಯವರು ೧೭೭೮ರ ತನಕವೂ ಪ್ರಾಕ್ತನ ಸಂಶೋಧನೆಗೆ ಕೈ ಹಾಕಲಿಲ್ಲ. ೧೭೭೮ರಲ್ಲಿ ಅದಕ್ಕಾಗಿಯೇ 'ಬಟೇವಿಯಾ ಕಲೆ ಮತ್ತು ವಿಜ್ಞಾನ ಸೊಸೈಟಿ' ಎಂಬುದು ಸ್ಥಾಪನೆಗೊಂಡಿತು. ೧೮೦೧–೧೮೦೮ರಲ್ಲಿ ಅಲ್ಲಿನ ಡಚ್ ಗವರ್ನರನಾಗಿದ್ದ ನಿಕೊಲಸ್ ಎಂಗಲ್‌ಹಾರ್ಡ್ ಎಂಬಾತ ಅಲ್ಲಿನ ದೇಗುಲಗಳನ್ನು ಜೀರ್ಣೋದ್ಧಾರ ಮಾಡಿಸತೊಡಗಿದ. ಪ್ರಾಂಬನನ್ ಕಣಿವೆಯ ದೇಗುಲಗಳಲ್ಲೂ ಅಂಥ ಕೆಲಸ ನಡೆಯಿತು. ಆತ ಅಲ್ಲಿನ ಎಷ್ಟೋ ಶಿಲ್ಪಗಳನ್ನು ತನ್ನ ವಸತಿಯಿದ್ದ ಸೆಮರಂಗ ಎಂಬಲ್ಲಿಗೆ ಒಯ್ದುದುಂಟು. ಮುಂದೆ ಅವನ್ನು ಹಾಲೆಂಡಿನ ಲೈಡನ್

ಮ್ಯೂಸಿಯುಮಿಗೆ ಒಪ್ಪಿಸಿದರು. ಅನೇಕ ಪ್ರತಿಮೆಗಳನ್ನು ಥಾಯಿಲ್ಯಾಂಡಿನ ಬಂಕಾಕ್ ನಗರಕ್ಕೊ ಸಾಗಿಸಿದ್ದುಂಟು. ಜಾವಾ ದೇಶವನ್ನು ಕುರಿತ ಅಧ್ಯಯನದ ಕೆಲಸದಲ್ಲಿ ಸರ್ ಸ್ಟ್ಯಾಂಫರ್ಡ್ ರ್ಯಾಫಲ್ಸ್ ಜಾನ್ ಕ್ರಾಫರ್ಡ್, ಕಾಲಿನ್ ಮೆಕೆಂಜಿ ಎಂಬುವರು ಪ್ರಸಿದ್ಧರು. ಮೆಕೆಂಜಿ ದಕ್ಷಿಣ ಹಿಂದೂಸ್ಥಾನದಲ್ಲೂ ಕೆಲಸ ಮಾಡಿದಾತ. ಇನ್ನು ಪ್ರತಿಭಾಶಾಲಿಯಾದ ಡಚ್ ವಿದ್ವಾಂಸ ಜಾನ್ ಲೈಡನ್ ಅಲ್ಪಕಾಲ ಜಾವಾದಲ್ಲಿ ಸಂಶೋಧನೆ ನಡೆಸಿದ್ದುಂಟು. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಆ ನಾಡಿನ ವೀಕ್ಷಣೆ ಮತ್ತು ಪ್ರಾಚ್ಯ ಸಂಶೋಧನೆಗಳ ವಿಚಾರದಲ್ಲಿ ಡಚ್ ಸರಕಾರವು ಹೆಚ್ಚಿನ ಕೆಲಸ ನಡೆಸಿತು. ಬಟೇವಿಯಾ ಸೊಸೈಟಿಯವರು ಆ ವಿಷಯದಲ್ಲಿ ಅನೇಕ ಸಚಿತ್ರ ಲೇಖನಗಳನ್ನು ಪ್ರಕಟಿಸಿದರು. ಆ ಸಂಸ್ಥೆಯಲ್ಲಿ ಲೀಮೆನ್. ಬ್ರಮುಂಡ್. ವೈಜರಮ್ಯಾನ್. ಗ್ರೂನ್‌ಮ್ಯಾನ್. ಸಾಹೆರ. ಕರ್ನೀಸ್ ಮತ್ತು ಹ್ಯಾಮರ್‌ರಂತಹ ಪಂಡಿತರು ದುಡಿದರು. ಈ ಶತಮಾನದ ಆರಂಭದಲ್ಲಿ ಡಚ್ ವಿದ್ವಾಂಸರಾದ ಹೆಂಡ್ರಿಕ್ ಕರ್ನ್. ಎನ್. ಜೆ. ಕ್ರೋಮ್. ಡಿ. ಫಾನ್ ಎರ್ಪ್. ಎಫ್. ಡಿ. ಕೆ. ಬಾಶ್. ಜೆ. ಇ. ಎಚ್. ಫೊಗೆಲ್ ಸ್ಟಟರ್ ಹೈಮ್ ಮತ್ತು ಜೆ. ಗೊಂಡಾರಂಥವರು ಅವಿಶ್ರಾಂತವಾಗಿ ದುಡಿದರು. ಫ್ರಾನ್ಸಿನ ಎ. ಫೌಚರ್ ಮತ್ತು ಕೊಯೆಡೆಸ್ ಎಂಬವರೂ. ಭಾರತದ ಆರ್. ಸಿ. ಮುಜುಮದಾರ. ಬಿ. ಛಾಬ್ರಾ. ಬಿ. ಸಿ. ಗಂಗೂಲಿ ಮೊದಲಾದವರೂ ಪುರಾತನ ಜಾವಾ ಸಂಸ್ಕೃತಿಯನ್ನು ಕುರಿತು ನಮ್ಮ ತಿಳಿವಳಿಕೆಯನ್ನು ಹೆಚ್ಚಿಸಿದ್ದಾರೆ.

ಭಾರತೀಯ ವಲಸೆ

ಜಾವಾ ದೇಶವನ್ನು ಪೌರ್ವಾತ್ಯ ನಂದನವನ ಎಂದು ಕರೆದದ್ದು ಅತಿಶಯೋಕ್ತಿಯಲ್ಲ. ಸೂರ್ಯನ ಬಿಸಿಲಿನಿಂದ ಸೊಂಪಾದ ನಿಸರ್ಗವನ್ನು ಪಡೆದ ಅಲ್ಲಿನ ಗುಡ್ಡಗಾಡು. ಹುಲುಸಾದ ನೆಲ. ವನ ಸಂಪತ್ತುಗಳು ಭಾರತದೇಶದ ನಾವಿಕರನ್ನು ಅಲ್ಲಿಗೆ ಆಕರ್ಷಿಸಿದವು. ಅವರಿಗೆ ಆ ನಾಡು ತಮ್ಮ ದೇಶದಷ್ಟೇ ಮೋಹಕವಾಗಿ ಕಾಣಿಸಿತು. ಅಲ್ಲಿನ ಜನರ ಮಿದು ಸ್ವಭಾವ. ಸುಂದರ ರೂಪ. ಮತ್ತು ಉನ್ನತ ಸಂಸ್ಕೃತಿಗಳು ಕೂಡ ಭಾರತೀಯರನ್ನು ಆಕರ್ಷಿಸಿರಬೇಕು. ಈ ದ್ವೀಪದ ಸೌಂದರ್ಯವನ್ನು ಕಂಡು ಮೋಹಿತರಾದ ಭಾರತದ ನಾವಿಕರು. ಮಾತೃ ದೇಶದಲ್ಲಿ ಅದರ ಸುದ್ದಿಯನ್ನು ಹಬ್ಬಿಸಿದರು. ಅಲ್ಲಿಂದ ಮುಂದೆ ಭಾರತ ಮತ್ತು ಜಾವಾಗಳ ನಡುವೆ ನಡೆದ ವಲಸೆಯನ್ನು ಕುರಿತು ಜಿ. ಫರಾಂಡ್ ಹೀಗೆ ಬಣ್ಣಿಸಿದ್ದಾನೆ: "ಒಂದು ಸಣ್ಣ ಹಡಗು ಪಡೆ ಅಲ್ಲಿನ ರೇವಿಗೆ ಬರುತ್ತದೆ. ಅದರಿಂದ ಇಳಿದ ನಾವಿಕರು. ಆ ನಾಡಿನ ಮುಖಂಡರಿಗೆ ಕಾಣಿಕೆಯನ್ನೊಪ್ಪಿಸಿ ಅವರನ್ನು ಒಲಿಸುತ್ತಾರೆ. ಅವರಿಗೆ ತಾಯತ್ತುಗಳನ್ನೋ. ಔಷಧ ಚಿಕಿತ್ಸೆಗಳನ್ನೋ ಒದಗಿಸುತ್ತಾರೆ. ಹಾಗೆ ಬಂದ ಅವರು. ತಮ್ಮ ನಾಡಿನ ಶ್ರೀಮಂತಿಕೆಯನ್ನು, ತಮಗಿರುವ ಮಂತ್ರಶಕ್ತಿಯನ್ನು. ತಮ್ಮ ವಂಶದ ಹಿರಿಮೆಯನ್ನು ಕುರಿತು ಬಣ್ಣಿಸಿ. ಒಲಿಸಿ ಅಲ್ಲಿನ ಜನನಾಯಕರ ಕನ್ಯೆಯರೊಡನೆ ವಿವಾಹವಾಗುತ್ತಾರೆ. ಅವರ ವಧುಗಳಿಂದಾಗಿ ಹೊರನಾಡಿನಿಂದ ಬಂದವರ ಭಾವನೆಗಳೂ. ರಾಜರನ್ನು ಕುರಿತ ನಿಷ್ಠೆಯನ್ನು. ಅವರ ಆಚಾರ ವಿಚಾರಗಳನ್ನು. ದೇವ ಪೂಜಾ ವಿಧಾನಗಳನ್ನು ಆ ನಾಡಿನಲ್ಲೂ ಪ್ರಚುರಗೊಳಿಸಿದರು."

ಜೆ. ಗೊಂಡಾ ಎಂಬವರು ತಮ್ಮ ಈಚಿನದೊಂದು ಬರವಣಿಗೆಯಲ್ಲಿ ಅಂಥದೇ ಇನ್ನೊಂದು ಸುಂದರಚಿತ್ರವನ್ನು ಕೊಟ್ಟಿದ್ದಾರೆ. ಹಿಂದೂಧರ್ಮ ರಾಜಕೀಯ ವಿಧಾನದಿಂದ ಅಲ್ಲಿನ ವಸಾಹತುಗಳಲ್ಲಿ ಪಸರಿಸುವ ಬದಲು. ಸ್ನೇಹಭಾವದಿಂದ ಹಬ್ಬಿತು. ಅಲ್ಲಿಗೆ ಬಂದವರು ದೇಶೀಯ ಕುಟುಂಬಗಳೊಡನೆ ನಂಟುತನ ಬೆಳೆಸಿದರು. ತಮ್ಮ ಯುದ್ಧ ಕೌಶಲವನ್ನೋ. ಮಂತ್ರತಂತ್ರಗಳ ಮಹಿಮೆಯನ್ನೋ ಅವರ ಮುಂದೆ ಪ್ರಕಟಿಸಿ. ಸ್ಥಳೀಕರ ಅಭಿಮಾನಕ್ಕೆ ಪಾತ್ರರಾದರು. ಆಗ ಆ ದೇಶದ ಅರಸರು ಸಹ ಹಿಂದೂ ಧರ್ಮವನ್ನು ಸ್ವೀಕರಿಸಿ. ಹಿಂದೂ ಸಂಸ್ಕೃತಿ ಅಲ್ಲಿ ಬೆಳೆಯುವುದಕ್ಕೆ ಕಾರಣರಾದರು. ಇಲ್ಲಿಂದ ವ್ಯಾಪಾರಕ್ಕಾಗಿ ಹೋದ ವಣಿಕ್ಕುಗಳ ಜೊತೆಗೆ ಪುರೋಹಿತರೂ, ಸಾಹಿತಿಗಳೂ. ವೃತ್ತಿಕಾರರೂ ಹೋದರು. ಅಲ್ಲಿಗೆ ಹೋದ ಪುರೋಹಿತರು ಅಲ್ಲಿನ ಜನಕ್ಕೆ ಸಂಸ್ಕೃತ ಭಾಷೆಯಲ್ಲಿ ಪೂಜಾದಿ ವಿಧಾನಗಳನ್ನು ಕಲಿಸಿದರು. 'ರಾಜಾ ಪ್ರತ್ಯಕ್ಷ ದೇವತಾ' ಎಂಬ ಹಿಂದೂಭಾವನೆ ಅಲ್ಲಿಯೂ ಮೂಡಿತು.

ಅಲ್ಲಿಯೂ ವಂಶ ಪಾರಂಪರ್ಯ ಅರಸು ಪೀಳಿಗೆಯ ಕ್ರಮ ತೊಡಗಿತು. ಅವರು ನೆಲೆಸಿದ ಕೆಲವೊಂದು ಕೇಂದ್ರಗಳು ಕಲೆ ಮತ್ತು ಶಾಸ್ತ್ರಗಳ ಕೇಂದ್ರಗಳಾದುವು.

ಸಾಹಿತಿಕ ಸಾಕ್ಷ್ಯಗಳು

ಜಾವಾ ದೇಶದ ವಿಚಾರದಲ್ಲಿ ನಮ್ಮ ಪುರಾತನ ಸಂಸ್ಕೃತ ಮತ್ತು ತಮಿಳು ಗ್ರಂಥಗಳಲ್ಲಿ ಸಾಕಷ್ಟು ಉದಾಹರಣೆಗಳು ಇವೆ. ಜಾವಾ ಶಿಲಾ ಶಾಸನಗಳಲ್ಲಿ ಬೇಕಷ್ಟು ಸಂಸ್ಕೃತ ಶಬ್ದಗಳ ರೂಢಿ ಇದೆ. ಪಲ್ಲವರ ಕಾಲದಲ್ಲಿ ರೂಢಿಯಲ್ಲಿದ್ದ ಗ್ರಂಥಲಿಪಿ ಅಲ್ಲಿದೆ. ಜಾವಾನೀ ಭಾಷೆಯಲ್ಲಿ ಬೇಕೆನ್ನುವಷ್ಟು ಸಂಸ್ಕೃತ ಸೇರಿಕೊಂಡಿದೆ. ಜಾವಾ ದೊರೆಗಳು ವರ್ಮ ಎಂಬ ಬಿರುದನ್ನು ಸೇರಿಸಿಕೊಂಡರು. ಅಲ್ಲಿ ಹಿಂದೂಧರ್ಮವೂ, ಹಿಂದೂ ಸಾಮಾಜಿಕ ನೀತಿಗಳೂ ಹಬ್ಬಿರುವುದನ್ನು ಕಾಣುತ್ತೇವೆ. ಭಾರತದ ಕಥಾನಕಗಳು ಅಲ್ಲಿನ ಸಾಹಿತ್ಯದಲ್ಲಿ ಪ್ರಧಾನ ಪಾತ್ರ ಪಡೆದುವು. "ವಾಲ್ಮೀಕಿ ರಾಮಾಯಣ", "ಹರಿವಂಶ"ದಲ್ಲೂ 'ಯವದ್ವೀಪ'ದ ಉಲ್ಲೇಖವಿದೆ. ಜಾವಾದಲ್ಲಿರುವ ೮ನೇ ಶತಮಾನದ ಒಂದು ಸಂಸ್ಕೃತ ಶಾಸನದಲ್ಲಿ ಆ ನಾಡಿನ ಹೆಸರು 'ಯವದ್ವೀಪ' ಎಂದೇ ಉಲ್ಲೇಖಿಗೊಂಡಿದೆ. ತೊಲೆಮಿ 'ಬಾರ್ಲಿ' ಅಥವಾ 'ಯವೆ ಗೋಧಿ' ಎಂಬ ಅರ್ಥದಲ್ಲಿ ಆ ದೇಶವನ್ನು 'ಅಯಾ ಬಡಿಯೋಸ್' ಎಂದು ಕರೆದಿದ್ದಾನೆ. ಯವ ದ್ವೀಪ ಎಂಬ ಅರ್ಥದಲ್ಲಿ ಫಾ ಹೈನ್ ಯಿ-ಪೊ-ಟಿ ಎಂದು ಆ ದ್ವೀಪವನ್ನು ಕರೆದಿದ್ದಾನೆ.

ತಮಿಳುನಾಡಿನ ಬೌದ್ಧ ಗ್ರಂಥವಾದ ಮಣಿಮೇಖಲೆಯಲ್ಲಿ ಬರುವ ಚಾವಕಮ್ ಎಂಬ ಪದ, ಯಾವಕಮ್ ಅಥವಾ ಯವದ್ವೀಪದ ಸೂಚನೆ. ಆ ಕತೆಯಲ್ಲಿ ಚೌವಕಮಿನ ದೊರೆ ಭೂಮಿಚಂದ್ರ ಎಂಬವ. ಅವನ ರಾಜಧಾನಿ ನಾಗಪುರ. ಆ ಕತೆಯ ಒಂದು ಪಾತ್ರವಾದ ಅಪುತ್ರನ್ ಎಂಬಾತ ಹುಟ್ಟಿದ್ದು ಚೌವಕದಲ್ಲಿ. ಅವನ ಗುರುವಿನ ಹೆಸರು ಧರ್ಮಚೌವಕರ್. ಅವನನ್ನು ಭೂಮಿಚಂದ್ರ ದೊರೆ ದತ್ತು ತೆಗೆದುಕೊಳ್ಳುತ್ತಾನೆ. ಈ ದೊರೆಯ ಕಾಲಾನಂತರ ಅಪುತ್ರನೇ ಪುಣ್ಯರಾಜ ಇಲ್ಲವೇ ಧರ್ಮರಾಜ ಎಂಬ ಹೆಸರಿನ ಅರಸನಾಗುತ್ತಾನೆ. ಅವನ ಆಳ್ವಿಕೆಯಲ್ಲಿ ಚೌವಕದೇಶವು ಸಂಪದ್ಭರಿತವಾಗುತ್ತದೆ. ಆತ ಕಡಲಿನ ದಾರಿಯಾಗಿ ಬೌದ್ಧ ಧರ್ಮಕ್ಕೆ ಪ್ರಸಿದ್ಧವಾದ 'ಮಣಿಪಲ್ಲವ' ಎಂಬ ಒಂದು ದ್ವೀಪಕ್ಕೆ ಯಾತ್ರೆ ಕೈಗೊಳ್ಳುತ್ತಾನೆ. ಇದನ್ನೆಲ್ಲ ನೋಡುವಾಗ ದಕ್ಷಿಣ ಭಾರತದ ಬೌದ್ಧರು ಸಹ ಆ ಕಾಲಕ್ಕೆ ದಕ್ಷಿಣ ಸಾಗರ ದ್ವೀಪಗಳಿಗೆ ಹೋಗಿಬರುತ್ತಿದ್ದರೆಂದು ತರ್ಕಿಸಬಹುದು.

ಫಾ ಹೈನ್ ಮತ್ತು ಕಾಶ್ಮೀರ ರಾಜಕುಮಾರ

ಚೀನಿ ಚರಿತ್ರ ಕಥಾನಕಗಳಲ್ಲಿ ಯವ ದ್ವೀಪವನ್ನು ಯ-ಟಿಯಾವೊ ಎಂದು ಕರೆದಿದ್ದಾರೆ. ಆದರ ದೊರೆ ದೇವವರ್ಮ. ಅವನನ್ನು ಟಿಯಾವೊ ಪಯಿನ್ ಎಂದು ಹೆಸರಿಸಿದ್ದಾರೆ. ಈ ಬರಹದ ಕಾಲ ಕ್ರಿ. ಶ. ೧೩೨. ಕ್ರಿ. ಶ. ೨ನೇ ಶತಮಾನದಲ್ಲೇ ಅಲ್ಲೊಂದು ಹಿಂದೂ ರಾಜ್ಯ ಇತ್ತೆಂಬುದಕ್ಕೆ ಇದು ಸಾಕ್ಷಿ. ಫಾ ಹೈನ್ ಕ್ರಿ. ಶ. ೪೧೪ರಲ್ಲಿ ಕೆಲವು ತಿಂಗಳ ಕಾಲ ಜಾವಾದಲ್ಲಿ ನೆಲೆಸಿದ್ದ. ಅಲ್ಲಿಗೆ ಹೋದ ಅವನು ಅಲ್ಲಿನ ಜನರ ಅನೇಕ ತಪ್ಪು ನಡವಳಿಕೆಗಳನ್ನು ಕುರಿತು ತಿಳಿಸಿರುವುದಲ್ಲದೆ. ಅಲ್ಲಿ ಬ್ರಾಹ್ಮಣ ಧರ್ಮ ರೂಢಿಯಲ್ಲಿತ್ತೆಂದೂ, ಬುದ್ಧಧರ್ಮ ಹೇಳುವಷ್ಟಿಲ್ಲವೆಂದೂ ಬರೆದಿದ್ದಾನೆ. ಫಾ ಹೈನ್‌ನ ಕಾಲದ ನಂತರ ಕಾಶ್ಮೀರ ದೇಶದ ಒಬ್ಬ ರಾಜಕುವರನೂ ಭಿಕ್ಷುವೂ ಆದ ಗುಣವರ್ಮ ಎಂಬವನಿಂದ ಜಾವಾದಲ್ಲಿ ಬೌದ್ಧ ಧರ್ಮಕ್ಕೆ ಪ್ರಚಾರ ದೊರೆತಿತು. ಕ್ರಿ. ಶ. ೪೧೯ರಲ್ಲಿ ಬರೆದ ಒಂದು ಗ್ರಂಥದಲ್ಲಿ ಬೌದ್ಧ ಸನ್ಯಾಸಿಗಳ ಮತ್ತು ಗುಣವರ್ಮನ ವಿಚಾರ ಕಾಣಲು ಸಿಗುತ್ತದೆ. ಗುಣವರ್ಮನು ಜಾವಾದ ರಾಜಮಾತೆಗೂ, ದೊರೆಗೂ ಬೌದ್ಧಧರ್ಮದ ದೀಕ್ಷೆ ಕೊಟ್ಟು, ಕ್ರಿ. ಶ. ೪೨೦ರಲ್ಲಿ ಚೀನಾ ದೇಶಕ್ಕೆ ಹೋದ.

ಆರಂಭದ ಒಬ್ಬ ಹಿಂದೂ ಅರಸು

ಜಾವಾದಲ್ಲಿ ದೊರೆತ ಅತ್ಯಂತ ಮೊದಲಿನ ನಾಲ್ಕು ಸಂಸ್ಕೃತಭಾಷೆಯ ಶಾಸನಗಳಲ್ಲಿ, ಹಿಂದೂ ಅರಸನಾದ ಪೂರ್ಣವರ್ಮನ ಹೆಸರು ಬರುತ್ತದೆ. ಆ ಶಾಸನಗಳಲ್ಲಿ ಮೂರು ಶಾಸನಗಳು ಬುಯಿಟೆಂಜಾರ್ಗ

ಎಂಬ ಗುಡ್ಡಗಾಡು ಪ್ರದೇಶದ ಬಂಡೆಗಳ ಮೇಲೆ ಕೆತ್ತಲ್ಪಟ್ಟಿದೆ. ನಾಲ್ಕನೆಯ ಶಾಸನ ಬಟೇವಿಯದ ಕಡಲ ಕರಾವಳಿಯಲ್ಲಿ ಕಾಣಸಿಕ್ಕಿದೆ. ಅವುಗಳ ಲಿಪಿ ದಕ್ಷಿಣ ಭಾರತದಲ್ಲಿ ಪಲ್ಲವರು ಬಳಸುತ್ತಿದ್ದ ಗ್ರಂಥ ಲಿಪಿ. ಜೆ. ಪಿ. ಎಚ್. ಫೋಗೆಲ್. ಅವರ ಲಿಪಿಗಾರಿಕೆಯ ಮೇಲಿಂದ. ಅದು ಐದನೆಯ ಶತಮಾನದ ಶಾಸನ ಎಂದಿದ್ದಾನೆ.

ಮೊದಲ ಶಾಸನವನ್ನು ಚಿ-ಅರುತನ್ ಶಾಸನ ಎಂದು ಕರೆಯುತ್ತಾರೆ. ಆ ಹೆಸರಿನ ಒಂದು ನದೀ ಸಂಗಮದ ಒಂದು ಬಂಡೆಯ ಮೇಲೆ ಅದನ್ನು ಕೆತ್ತಿದ್ದಾರೆ. ಫೋಗೆಲ್ ಈ ಶಾಸನವಿರುವ ತಾವಿನಲ್ಲೇ ಪೂರ್ಣವರ್ಮ ದೊರೆಯ ಅಂತ್ಯಸಂಸ್ಕಾರ ನಡೆಯಿತು ಎಂದು ತರ್ಕಿಸುತ್ತಾನೆ. ನಾಲ್ಕು ಚರಣಗಳ ಈ ಸಂಸ್ಕೃತ ಶ್ಲೋಕಕ್ಕೂ. ದಕ್ಷಿಣಭಾರತದ ದಲವಾನೂರು ಮತ್ತು ಮಹೇಂದ್ರವಾಡಿಗಳಲ್ಲಿರುವ ಪಲ್ಲವ ದೊರೆ ಮೊದಲನೆಯ ಮಹೇಂದ್ರವರ್ಮನ ಶಾಸನಗಳಿಗೂ ಹೆಚ್ಚಿನ ಹೋಲಿಕೆಯಿದೆ. ಅದನ್ನು ಫೋಗೆಲ್ ಗುರುತಿಸಿದ್ದಾನೆ. ಈ ಶಾಸನ ಬರೆದಲ್ಲಿ ಎರಡು ಹೆಜ್ಜೆಗುರುತುಗಳನ್ನೂ ಕೆತ್ತಿದ್ದಾರೆ. ಶಾಸನ ಹೀಗಿದೆ:

ವಿಕ್ರಾಂತಸ್ಯಾವನಿಪಥೇ:
ಶ್ರೀಮತಃ ಪೂರ್ಣವರ್ಮಣಃ
ತಾರೂಮ ನಗರೇಂದ್ರಸ್ಯ
ವಿಷ್ಣೋರಿವ ಪದದ್ವಯಮ್ ॥

(ವಿಷ್ಣುವಿನ ಪಾದಗಳ ಗುರುತಿಗೆ ಸಮಾನವಾದ ಈ ಗುರುತುಗಳು ತಾರುಮ ನಗರವನ್ನಾಳುತ್ತಿದ್ದ ಪೂರ್ಣವರ್ಮ ದೊರೆಯದು.)

ಎರಡನೆಯ ಶಾಸನವನ್ನು ಜಂಬೂ ಶಾಸನ ಎಂದು ಕರೆಯುತ್ತಾರೆ. ಅದು ಜಂಬೂ ಜಮೀನ್ದಾರಿಗೆ ಸೇರಿದ ಒಂದು ಗುಡ್ಡದ ಮೇಲಿದೆ. ಅದರ ಸಾರಾಂಶವಿದು: ಒಮ್ಮೆ ತಾರುಮ ನಗರವನ್ನಾಳುತ್ತಿದ್ದ ಸುಪ್ರಸಿದ್ಧನೂ. ಉದಾರಿಯೂ. ಕರ್ತವ್ಯ ಪರಾಯಣನೂ. ಅಸಾಮಾನ್ಯ ಜನನಾಯಕನೂ ಆದ ಪೂರ್ಣವರ್ಮ ಎಂಬ ಹೆಸರಿನ ದೊರೆಯ ಕವಚವನ್ನು ಹಗೆಗಳ ಕಣೆಗಳು ಎಂದೂ ನಾಟಲಾರವು. ಇಲ್ಲಿನ ಹೆಜ್ಜೆ ಗುರುತುಗಳೂ ಅವನವು. ಹಗೆಗಳ ನಗರವನ್ನು ನಾಶಗೊಳಿಸುವುದರಲ್ಲಿ ಅವನ ಸಾಮರ್ಥ್ಯ ಅಸದಳ. ಆತ ಆಶ್ರಯಿ ಸಾಮಂತರ ಪಾಲಿಗೆ ಎಷ್ಟು ಉದಾರಿಯೋ. ಹಗೆಗಳ ಪಾಲಿಗೆ ಅಷ್ಟೇ ಕಂಟಕಪ್ರಾಯ. ಈ ಶಾಸನದಲ್ಲೂ ಎರಡು ಪಾದಗಳ ಕೆತ್ತನೆ ಇದೆ. ಆ ದೊರೆಯ ಸ್ಮಾರಕವಾಗಿ. ಇಲ್ಲೊಂದು ದೇಗುಲ ಇದ್ದಿರಬೇಕೆಂದು ಫೋಗೆಲ್ ತರ್ಕಿಸುತ್ತಾನೆ.

ಮೂರನೆಯ ಶಾಸನವನ್ನು 'ಕೆಬನ್ ಕೊಪಿ' ಶಾಸನ ಎನ್ನುತ್ತಾರೆ. ಅದು ಕಾಫಿ ತೋಟವೊಂದರ ನಡುವೆ ಇದೆ. ಆ ಕಾಫಿ ಗಿಡಗಳನ್ನು ಸವರುವಾಗ. ಎರಡು ನದಿಗಳ ಸಂಗಮ ಸ್ಥಾನದಲ್ಲಿ ಆ ಶಾಸನ ಕಾಣಸಿಕ್ಕಿತು. ಶಾಸನದ ಮೇಲ್ಗಡೆ ವೃತ್ತಾಕಾರದ ಎರಡು ಕುಳಿಗಳಿವೆ. ಅಲ್ಲಿನ ಬರಹ ಹೀಗೆ ಹೇಳುತ್ತದೆ: ಇಲ್ಲಿ ಕಾಣಿಸುವ ಜೋಡು ಹೆಜ್ಜೆಗಳು ತಾರುಮ ನಗರದ ಅಧೀಶ್ವರನಾದ. ಜಯಶಾಲಿಯಾದ, ಐರಾವತ ಸಮಾನನಾದ ದೊರೆಯವು.

ನಾಲ್ಕನೆಯ ಶಾಸನ ಬೆಕಾಸೀ ಜಿಲ್ಲೆಯ ಟೂಗು ಎಂಬಲ್ಲಿದೆ. ಇದು ಉದ್ದದ ಶಾಸನ ಸಾಕಷ್ಟು ಚಾರಿತ್ರಿಕ ವಿಷಯಗಳನ್ನು ತಿಳಿಸುತ್ತದೆ. ಆ ಶಾಸನ ಹೀಗಿದೆ—ರಾಜಾಧಿರಾಜನೂ. ಪರಾಕ್ರಮ ಬಾಹುವೂ ಆದ ದೊರೆಯು ಕಡಿಸಿದ ಚಂದ್ರಭಾಗಾ ನದಿಯು ರಾಜಧಾನಿಯನ್ನು ಸೇರಿದ ಬಳಿಕ ಸಾಗರವನ್ನು ಕೂಡಿಕೊಳ್ಳುತ್ತಿತ್ತು. ರಾಜ ಶ್ರೇಷ್ಠನೂ. ಧರ್ಮಿಷ್ಠನೂ. ಶ್ರೀಮಂತನೂ ಆದ ಪೂರ್ಣವರ್ಮನ್ ದೊರೆ ೬೧೨೨ ಬಿಲ್ಲು ಉದ್ದದ ಈ ತಿಳಿನೀರಿನ ಗೋಮತಿ ನದಿಯನ್ನು ಫಾಲ್ಗುಣಮಾಸ ಕೃಷ್ಣಪಕ್ಷ ಅಷ್ಟಮಿಗೆ ತೊಡಗಿ ಚೈತ್ರಮಾಸದ ತ್ರಯೋದಶಿಗೆ ಕಡಿಸಿ ಮುಗಿಸಿದ. ಮೊದಲ ನದಿ ಈ ದೊರೆಯ ಅಜ್ಜನೂ ರಾಜಋಷಿಯೂ ಆದವನ ಪಾಳೆಯವನ್ನು ಕೊಚ್ಚಿಹಾಕಿತ್ತು. ಈಗ ಅದು ನೇರಾಗಿ ಕಡಲಿಗೆ ಹರಿಯುತ್ತಿದೆ. ಈ ಸಂದರ್ಭದಲ್ಲಿ ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಲಾಯಿತು.

ಶಾಸನಗಳಲ್ಲಿ ಹಿಂದೂ ಸಂಪ್ರದಾಯಗಳು

ಜಾವಾದಲ್ಲಿ ಮೊದಲೇ ಉತ್ಕೃಷ್ಟ ನಾಗರಿಕತೆ ಇದ್ದಿತೆಂದೂ, ಭರತಖಂಡದ ಆರ್ಯರ ಪ್ರಭಾವ ಅದರ ಮೇಲೆ ಬಲವಾಗಿತ್ತೆಂದೂ ಶಾಸನಗಳಿಂದ ತಿಳಿದುಬರುವುದಾಗಿ ಫೊಗೆಲ್ ಹೇಳುತ್ತಾನೆ. ಈ ಶಾಸನಗಳನ್ನು ಶಿಲೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಕೆತ್ತಿದ್ದಾರೆ. ಅವು ಇಂದಿನತನಕ ಉಳಿದುಬಂದಿವೆ. ಹಾಗೆ ಕೆತ್ತಿದ ಲಿಪಿಕಾರರು ಜಾವಾನೀಯರಿರಬಹುದು; ಹಿಂದೂಗಳಿರಬಹುದು. ಜಂಬೂ ಮತ್ತು ಕೆಬನ್ ಕೊಪಿ ಶಾಸನಗಳಲ್ಲಿ ಕಲಾವಂತಿಕೆಯೂ ಇದೆ. ಈ ಶಾಸನಗಳನ್ನು ರಚಿಸಿದವರು ಶಾಸ್ತ್ರ ವಿಚಾರಗಳನ್ನು ಬಲ್ಲ ಪುರೋಹಿತರೋ, ಪಂಡಿತರೋ ಆಗಿರಬೇಕು. ಬಹಳಷ್ಟು ಶಾಸನಗಳು ಇಲ್ಲಿ ಇಲ್ಲವಾದರೂ ಇದ್ದ ಶಾಸನಗಳು ಸರಳ ರೀತಿಯವು. ಈ ಮೊದಲು ಹೇಳಿದ ಕಾಲುವೆಯನ್ನು ಕೇವಲ ೨೦ ದಿವಸಗಳಲ್ಲಿ ಅಗೆದು ಮುಗಿಸಿದರೆಂಬುದು ಒಂದುಮುಖ್ಯ ಸಂಗತಿ. ಅಷ್ಟೊಂದು ಪೂರ್ವದಲ್ಲಿ ಜಾವಾದ ನದಿಗಳಿಗೆ ಹಿಂದುಸ್ತಾನದ ನದಿಗಳ ಹೆಸರನ್ನೇ ಇರಿಸಿದ್ದು ಮತ್ತು, ಅಲ್ಲಿ ಪುರೋಹಿತವರ್ಗ ಇದ್ದದ್ದು ತಿಳಿದುಬರುತ್ತದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಶಕವರ್ಷಗಳ ಬಳಕೆ ಇದ್ದಂತೆ ಜಾವಾದಲ್ಲಿಯೂ ಅದು ರೂಢಿಗೆ ಬಂದಿತ್ತು.

ಅಗಸ್ತ್ಯನ ಆರಾಧನೆ

ಋಗ್ವೇದದ ಋಷಿಯಾದ ಅಗಸ್ತ್ಯ ಭಾರತದಲ್ಲಿ ಅಷ್ಟೊಂದು ಪ್ರಖ್ಯಾತನೆನಿಸದೆ ಹೋದರೂ, ಜಾವಾದಲ್ಲಿ ಆರಾಧ್ಯ ವ್ಯಕ್ತಿಯಾಗಿದ್ದ. ಅವನದೇ ಒಂದು ಭಕ್ತವರ್ಗ ಇದ್ದಂತಿತ್ತು. ಗಡ್ಡ, ಮೀಸೆ, ಚಲುವಿನ ಮುಖ, ಡೊಳ್ಳು ಹೊಟ್ಟೆಗಳುಳ್ಳ ಈ ಋಷಿಯ ಸುಂದರ ಶಿಲ್ಪದ ಹದಿಮೂರು ವಿಗ್ರಹಗಳನ್ನು ಲೈಡನ್ನಿನಲ್ಲಿಯೂ, ಹದಿಮೂರು ವಿಗ್ರಹಗಳನ್ನು ಬಟೇವಿಯಾ ಮ್ಯೂಸಿಯಮಿನಲ್ಲಿಯೂ ಕಾಣಬಹುದು. ಜಾವಾದಲ್ಲಿ ಅಗಸ್ತ್ಯನನ್ನು 'ಶಿವ ಗುರು' ಎಂದೋ 'ಭಟ್ಟಾರಕ ಗುರು' ಎಂದೋ ಕರೆಯುತ್ತಾರೆ. ಅವನನ್ನು ಮಹಾಋಷಿ ಅಗಸ್ತ್ಯನೆಂದೇ ಅಲ್ಲಿನವರು ತಿಳಿದಿದ್ದರು. ಕ್ರಿ. ಶ. ೭೬೦ಕ್ಕೆ ಮಲಂಗ ಎಂಬ ಊರಿನ ಬಳಿಯ ದಿನಯ ಎಂಬಲ್ಲಿ ಒಂದು ಪುರಾತನ ವಂಶದ ದೊರೆ ದೇವಸಿಂಹ ಎಂಬಾತ ಅಗಸ್ತ್ಯನ ಪ್ರತಿಮೆಗಾಗಿ ಒಂದು ದೇಗುಲವನ್ನು ಕಟ್ಟಿದ್ದಾನೆ. ಆ ದೇಗುಲದಲ್ಲಿ ಅದರ ಸ್ಥಾಪನೆ ಹೇಗೆ ಮಾಡಿದರು ಮತ್ತು ವೇದಶಾಸ್ತ್ರ ಸಂಪನ್ನರಾದ ಪುರೋಹಿತರು ಆ ಸಮಯದಲ್ಲಿ ಏನೆಲ್ಲ ಮಾಡಿದರೆಂಬುದರ ಕುರಿತು ವಿವರಗಳೂ ಸಿಗುತ್ತವೆ.

ಹಿಂದೂ ಮತ್ತು ಬೌದ್ಧ ರಾಜವಂಶಗಳು

ಜಾವಾದಲ್ಲಿ ಮನುವಿನಷ್ಟೇ ಧರ್ಮಿಷ್ಠನಾದ ಸನ್ನಹ ಎಂಬ ಹಿಂದೂ ದೊರೆ ಏಳನೆಯ ಶತಮಾನದ ಆದಿಯಲ್ಲಿ ಆಳುತ್ತಿದ್ದ. ಅವನ ಮಗ ಸಂಜಯ ಎಂಬಾತ ಚಂಗಾಲ್ ಎಂಬಲ್ಲಿ ಕ್ರಿ. ಶ. ೭೩೨ಕ್ಕೆ ಒಂದು ಗುಡ್ಡದ ಮೇಲೆ ಶಿವಲಿಂಗವುಳ್ಳ ಒಂದು ದೇಗುಲವನ್ನು ಸ್ಥಾಪಿಸಿದ. ಈ ಅರಸು ಮನೆತನದವರು ಈ ಕಾಲದ ಬಳಿಕ ಸುಮಾತ್ರಾ ದ್ವೀಪದ ಒಬ್ಬ ಬೌದ್ಧ ದೊರೆ ತಮ್ಮನಾಡನ್ನು ಆಕ್ರಮಿಸಿದ ಬಳಿಕ, ಅಲ್ಲಿಂದ ಹೊರಟು, ಮತ್ತಷ್ಟು ಪೂರ್ವದ ಪ್ರದೇಶಕ್ಕೆ ಹೋದರು. ಮಧ್ಯ ಜಾವಾ ದೇಶವನ್ನು ಕ್ರಿ. ಶ. ೭೭೮ಕ್ಕೆ ಪಂಚಪಣ ಎಂಬ ಬೌದ್ಧ ದೊರೆ ಆಳುತ್ತಿದ್ದನೆಂದು ಚಂಡಿ ಕಲಸನ್ ಎಂಬಲ್ಲಿನ ಒಂದು ಶಾಸನ ಹೇಳುತ್ತದೆ. ಈ ಪಂಚಪಣ ದೊರೆಯ ಕಾಲದಿಂದ ಎಲ್ಲೆಲ್ಲೂ ಬೌದ್ಧ ದೇಗುಲಗಳನ್ನು ಕಟ್ಟುವ ಚಟುವಟಿಕೆ ಹೆಚ್ಚಿತು. ಆಗಿನ ಅನೇಕ ದೇವಾಲಯಗಳನ್ನು ಕೇದು ಬಯಲುಭೂಮಿಯಲ್ಲಿ ಕಾಣಬಹುದು. ಜಾವಾದ ಸುಪ್ರಸಿದ್ಧವಾದ ಬೋರೋಬುದುರ್ 'ಸ್ತೂಪ' ಕ್ರಿ. ಶ. ೭೭೨ರ ಕಾಲದ್ದು. ಇದು ವಾಸ್ತು ರಚನೆ ಮತ್ತು ಶಿಲ್ಪಕಲೆಗೆ ಹೆಸರಾದುದು; ಈ ಕಾಲದ ಜಾವಾ ದೇಶದ ಪ್ರಭುತ್ವವನ್ನು ಕುರಿತು ಪಂಡಿತರಲ್ಲಿ ಅಭಿಪ್ರಾಯ ಭೇದವಿದೆ. ಕ್ರೋಮ್ ಮತ್ತು ಫೊಗೆಲ್‌ರು ಜಾವಾವನ್ನು ಸುಮಾತ್ರ ದ್ವೀಪದ ಶೈಲೇಂದ್ರ ಅರಸು ವಂಶದ ಶ್ರೀವಿಜಯ ಎಂಬ ದೊರೆ ಆಳತೊಡಗಿದ ಎಂಬ ಅಭಿಪ್ರಾಯ ತಾಳುತ್ತಾರೆ. ಸ್ಟಟರಹೈಮ್ 'ಹಾಗಲ್ಲ' ಎನ್ನುತ್ತಾನೆ. ಅವನ ಅಭಿಪ್ರಾಯದಂತೆ ಜಾವಾ ದೊರೆಗಳೇ

ಎಂಟು, ಒಂಬತ್ತನೆಯ ಶತಮಾನಗಳಲ್ಲಿ ಸುಮಾತ್ರಾ ದ್ವೀಪವನ್ನು ಆಳಿದರು. ಇಂಥ ವಿಷಯಗಳಲ್ಲಿ ಸಿಗುವ ಚಾರಿತ್ರಿಕ ಸಾಕ್ಷಿಗಳು ಸಾಕಷ್ಟಿಲ್ಲದುದರಿಂದ ಶಾಸನಗಳಲ್ಲಿ ಕಂಡುಬರುವ ಶ್ರೀವಿಜಯ, ಶೈಲೇಂದ್ರ, ಯವ ಭೂಮಿ ಇಂಥ ಹೆಸರುಗಳನ್ನು ಕುರಿತು ವಿಭಿನ್ನ ಕಲ್ಪನೆಗಳು ಹುಟ್ಟಿಕೊಂಡಿವೆ. ಉದಾಹರಣೆಗೆ ಮಲಯದ ಲಿಗೋರ್ ಎಂಬಲ್ಲಿ ಒಂದು ಶಾಸನದಲ್ಲಿ ಕ್ರಿ. ಶ. ೭೭೫ರಲ್ಲಿ ಶ್ರೀವಿಜಯ ಮತ್ತು ಶೈಲೇಂದ್ರ ಎಂಬ ಹೆಸರುಗಳು ಬರುತ್ತವೆ. ಆ ಶಾಸನ ಕೆಲವು ಬೌದ್ಧ ದೇಗುಲಗಳನ್ನು ನಿರ್ಮಿಸಿದ ವಿಚಾರವನ್ನು ತಿಳಿಸುತ್ತದೆ. ಶೈಲೇಂದ್ರ ಎಂಬ ಹೆಸರು ಜಾವಾದ ಕಲಸನ್ ಎಂಬಲ್ಲಿನ ಶಾಸನದಲ್ಲಿ ಒಂದು ದೇವಸ್ಥಾನ ಕಟ್ಟಿದ ಸಂದರ್ಭದಲ್ಲೂ ಬರುತ್ತದೆ. ಆ ಶಾಸನದ ಕಾಲ ಕ್ರಿ. ಶ. ೭೭೮. ಜಾವಾದ ಕೆಲೂರಾಕ ಎಂಬಲ್ಲಿನ ಕ್ರಿ. ಶ. ೭೮೨ರ ಶಾಸನದಲ್ಲಿ ಶೈಲೇಂದ್ರ ವಂಶದ ಇಂದ್ರ ಎಂಬ ದೊರೆ ಮಂಜುಶ್ರೀ ವಿಗ್ರಹವನ್ನು ಸ್ಥಾಪಿಸಿದ ವಿಚಾರ ಬರುತ್ತದೆ. ಭಾರತದ ನಲಂದಾದಲ್ಲಿ ಕ್ರಿ. ಶ. ೮೫೫ರ ಒಂದು ತಾಮ್ರ ಶಾಸನದಲ್ಲಿ ಒಬ್ಬ ವಿದೇಶೀಯ ದೊರೆ ಯವಭೂಮಿಯ ದೊರೆಯೂ, ಸಮರಾಂಗಣ ವೀರನೆನಿಸಿಕೊಂಡವನೂ ಶೈಲೇಂದ್ರವಂಶಕ್ಕೆ ರತ್ನಪ್ರಾಯನೂ ಆದ ಅರಸು ಬಾಲಪುತ್ರ ಎಂಬಾತನ ಹೆಸರು ಪಾಲವಂಶದ ದೊರೆ ದೇವಪಾಲನ ಕಾಲದಲ್ಲಿದ್ದುದು ತಿಳಿದುಬರುತ್ತದೆ. ಇದರಿಂದ ಶೈಲೇಂದ್ರರು ಜಾವಾದ ಅರಸರೆಂಬುದೂ, ಬೌದ್ಧ ಪಂಥೀಯರೆಂಬುದೂ ಸ್ಪಷ್ಟಗೊಳ್ಳುತ್ತದೆ.

ಹಿಂದೂ ಧರ್ಮದ ಪುನರುತ್ಥಾನ

ಮಧ್ಯ ಜಾವಾದಲ್ಲಿ ಮತರಂ ಎಂಬ ಹೊಸ ರಾಜ್ಯ ಹುಟ್ಟಿಕೊಳ್ಳುತ್ತಲೇ ಅಲ್ಲಿ ಬೌದ್ಧಧರ್ಮದ ಪ್ರಭಾವ ತಗ್ಗತೊಡಗಿ ಹಿಂದೂಧರ್ಮ ತಲೆಯೆತ್ತತೊಡಗಿತು. ಈ ವಿಚಾರ ಕೇದು ಬಯಲುಭೂಮಿಯಲ್ಲಿ ಬಲಿತುಂಗ ಎಂಬ ದೊರೆಯ ಕ್ರಿ. ಶ. ೯೦೭ರ ಶಾಸನದಿಂದ ತಿಳಿದುಬರುತ್ತದೆ. ಪ್ರಾಯಶಃ ಪೂರ್ವ ಜಾವಾದಿಂದ ಅವನ ವಂಶದವರು ಅಲ್ಲಿಗೆ ಬಂದಿರಬೇಕು. ಇವನ ಅನಂತರ ಪಟ್ಟಕ್ಕೆ ಬಂದ ದಕ್ಷ (ಕ್ರಿ. ಶ. ೯೧೦) ಪ್ರಾಂಬನನ್ ಕಣಿವೆಯಲ್ಲಿ ಅನೇಕ ಹೊಸ ದೇಗುಲಗಳನ್ನು ಕಟ್ಟಿಸಿದ. ಬೋರೋ ಬುದೂರು ಎಂಬುದು ಬೌದ್ಧ ಸ್ಮಾರಕಗಳಿಗೆ ಹೇಗೆ ಪ್ರಸಿದ್ಧವೋ, ಹಾಗೆಯೇ ಪ್ರಾಂಬನನ್ ಕಣಿವೆ ಹಿಂದೂ ಸ್ಮಾರಕಗಳಿಗೆ ಪ್ರಸಿದ್ಧವಾಗಿದೆ. ಅನಂತರ ಹಿಂದೂ ದೇಗುಲಗಳ ಸಮೃದ್ಧಿ ಪೂರ್ವ ಜಾವಾದಲ್ಲಿ ಹೆಚ್ಚುತ್ತದೆ. ಕ್ರಿ. ಶ. ೯೨೯ರಲ್ಲಿ ಪೂರ್ವ ಜಾವಾದ ದೊರೆ ಸಿಂಧೂಕ ಅಥವಾ ಈಶಾನವರ್ಮ ಅನೇಕ ಶೈವ ದೇವಾಲಯಗಳನ್ನು ಕಟ್ಟಿಸಿದನಂತೆ. ಅವನ ತರುವಾಯ ಅವನ ಮಗಳು ಈಶಾನತುಂಗ ವಿಜಯಾ ಅರಸಿಯಾದಳು. ಅವಳ ಮಗನ ಮಗಳು ಮಹೇಂದ್ರದತ್ತಾ ಅಥವಾ ಗುಣಪ್ರಿಯಾ ಎಂಬಾಕೆ ಸಾಹಸ ಪ್ರಸಿದ್ಧನಾದ ಅಯರ್ಲಂಗ (ಕ್ರಿ. ಶ. ೯೯೦) ಎಂಬ ಅರಸಿನ ತಾಯಿಯೆಂದು ತಿಳಿದು ಬರುತ್ತದೆ. ಈತನ ಸಾಹಸಗಳನ್ನು ಬಣ್ಣಿಸುವ ಒಂದು ಶಿಲಾ ಶಾಸನ ಸಂಸ್ಕೃತ ಮತ್ತು ಜಾವಾದ 'ಕವಿ' ಭಾಷೆಗಳಲ್ಲಿದೆ. ಈ ಶಾಸನ ಕಲ್ಕತ್ತಾ ಮ್ಯೂಸಿಯಮಿನಲ್ಲಿದೆ. ಈ ಶಾಸನದಲ್ಲಿ ಮೃತನಾದ ಈ ದೊರೆಯ ಭಾವ ಚಿತ್ರವನ್ನು ಗರುಡವಾಹನನಾದ ವಿಷ್ಣುವಿಗೆ ಸಮನಿಸಿ ಕೆತ್ತಿದ್ದಾರೆ. ಸಿಂಧೂಕನ ನಂತರ ಬಂದ ಅನೇಕ ದೊರೆಗಳ ಹೆಸರು ಸಂಸ್ಕೃತ ಹೆಸರುಗಳಾಗಿವೆ. ಅಂಥವರಲ್ಲಿ ಧರ್ಮವಂಶ, ಜಯವರ್ಷ, ಕಾಮೇಶ್ವರ, ಜಯಾಭಯ ಎಂಬುವರು ಕವಿಗಳಿಗೆ ಆಶ್ರಯವಿತ್ತರು.

ಸಾಮಾಜಿಕ ಪರಿಸ್ಥಿತಿ

ಜಾವಾನೀ ಸಮಾಜದಲ್ಲಿ ನಾಲ್ಕು ವರ್ಗಭೇದಗಳಿದ್ದುವೆಂದೂ ಅವು ಹಿಂದೂ ಶಾಸ್ತ್ರಗಳಿಗಿಂತ ಪುರಾತನವಾದುವೆಂದು ಕರ್ನ್ ತರ್ಕಿಸುತ್ತಾರೆ. ಅವರ ಸಮಾಜನೀತಿ ಭಾರತದ ಧರ್ಮಶಾಸ್ತ್ರವನ್ನು ಅನುಸರಿಸಿಕೊಂಡಿದ್ದು ಸ್ಥಳಿಕ ಪರಿಸ್ಥಿತಿಗೆ ಬೇಕಾದ ಮಾರ್ಪಾಟನ್ನು ಮಾಡಿಕೊಂಡಿತ್ತು. ಅಲ್ಲಿನ ಸ್ತ್ರೀಯರ ಸ್ಥಾನ ಭಾರತ ದೇಶದಲ್ಲಿದ್ದುದಕ್ಕಿಂತಲೂ ಉನ್ನತವಾಗಿತ್ತು. ಆ ದೇಶದವರು ಮನುಧರ್ಮ ಶಾಸ್ತ್ರವನ್ನು ಅನುವಾದಿಸಿದರು; ಅದಲ್ಲದೆ ಶಿವಶಾಸನ ಮತ್ತು ಸಾರಸಮುಚ್ಚಯ ಎಂಬ ಇನ್ನೆರಡು ನೀತಿಗ್ರಂಥಗಳು ಇದ್ದುವು. ಅಲ್ಲಿ ಬಹುಪತ್ನಿತ್ವ ವಾಡಿಕೆಯಲ್ಲಿದ್ದರೂ ವ್ಯಭಿಚಾರ ಅಪರಾಧವೆನಿಸಿತ್ತು. ಅಲ್ಲಿನದು ಯಾವ

ಜ್ಜೀವ ದಾಂಪತ್ಯವಾದರೂ, ಅವಶ್ಯ ಸಂದರ್ಭಗಳಲ್ಲಿ ದಾಂಪತ್ಯ ವಿಚ್ಛೇದನಕ್ಕೆ ಎಡೆ ಇತ್ತು. ಕಾಂಬೋಧಿಯ ಮತ್ತು ನೆರೆಯ ರಾಜ್ಯಗಳಂತೆ ಅಲ್ಲಿ ಯುದ್ಧದ ಹಾವಳಿ ವಿಪರೀತವಾಗಿರದಿದ್ದುದರಿಂದ ಜನತೆ ತೃಪ್ತವಾಗಿತ್ತು; ದೇಶದಲ್ಲಿ ನ್ಯಾಯ ನಿಷ್ಠೆ ನೆಲಸಿತ್ತು. ಆಚೀಚಿನ ರಾಜ್ಯದ ಜನಗಳಿಗೂ ಇಲ್ಲಿನವರಿಗೂ ತುಂಬ ವ್ಯತ್ಯಾಸವಿತ್ತು. ಜಾವಾನೀಯರು ವಿನಯಶೀಲರೂ ಕೌಟುಂಬಿಕ ಜೀವನದಲ್ಲಿ ಪ್ರೀತಿಯಿದ್ದವರೂ, ದೇಶ ಪ್ರೇಮಿಗಳೂ ಆಗಿದ್ದರು. ಮಿತಮಿತವಾದ ನಡವಳಿಕೆ ಅವರದಿತ್ತು. ಅಲ್ಲಿನ ರೈತರು ಶ್ರೀಮಂತರಾಗಿದ್ದಂತೆ. ಸಂಗೀತ ನರ್ತನಾದಿಕಲೆಗಳಲ್ಲಿ ಆಸಕ್ತಿಯನ್ನು ತಾಳಿದ್ದರು.

ಆರ್ಥಿಕ ಪರಿಸ್ಥಿತಿ

ಜಾವಾನೀಯರ ಪಾಲಿಗೆ ಕೃಷಿ ಅಷ್ಟೊಂದು ಕಷ್ಟತಮ ಕೆಲಸವಲ್ಲ. ಅಲ್ಲಿನ ಹವೆ ಉಷ್ಣವಾಗಿದ್ದರೂ, ಅದನ್ನು ತಣಿಸುವ ನೈಋತ್ಯ ಮಾರುತ ಮತ್ತು ಈಶಾನ್ಯ ಮಾರುತಗಳು ಧಾರಾಳ ಮಳೆಯನ್ನು ತರುತ್ತಿದ್ದವು. ಜ್ವಾಲಾಮುಖಿಗಳೂ ಕಾರುತ್ತಿದ್ದ ಬೂದಿಯ ದೆಸೆಯಿಂದ ಅಲ್ಲಿನ ನೆಲ ಸಾರವತ್ತಾಗಿದ್ದು ಬಿಸಿಲು ಮಳೆಗಳೆರಡೂ ಹೆಚ್ಚಿದ್ದುದರಿಂದ, ಅಲ್ಲಿನ ಸಸ್ಯ ಸಂಪತ್ತಿನಲ್ಲಿ ವೈವಿಧ್ಯವಿತ್ತು. ಬಹಳ ಪೂರ್ವ ಕಾಲದಲ್ಲಿ ಅವರು ತಮ್ಮ ದೇಶದಿಂದ ಕಾಳುಮೆಣಸು, ಅಕ್ಕಿ ಮತ್ತು ಬಣ್ಣ ಬಣ್ಣದ ಚಿತ್ತಾರಗಳನ್ನು ಮುದ್ರಿಸಿದ ಅರಿವೆಗಳನ್ನು ಪರದೇಶಗಳಿಗೆ ರಫ್ತು ಮಾಡುತ್ತಿದ್ದರು. ಹಿಂದಣ ಕಾಲದಲ್ಲಿ ಅಲ್ಲಿ ಜನಸಂಖ್ಯೆಯ ಒತ್ತಡ ಹೆಚ್ಚಿಲ್ಲದ್ದರಿಂದ, ಅದು ಸಾಕಷ್ಟು ಐಶ್ವರ್ಯವಂತ ದೇಶವಾಗಿತ್ತು. ನಾಡಿನ ಕಟ್ಟಡ, ಕಾಮಗಾರಿ ಕೆಲಸಗಳ ಚಟುವಟಿಕೆ ಒಂದೇ ಸಮನೆ ನಡೆದುಕೊಂಡು ಬಂದಿತ್ತು. ಬೋರೋಬುದುರಿನಲ್ಲಿ ಅದ್ಭುತ ಸ್ತೂಪವನ್ನು ನಿರ್ಮಿಸಿದ ಬಳಿಕ ಪ್ರಾಂಬನಿನಲ್ಲಿ ಅಸಂಖ್ಯ ದೇಗುಲಗಳನ್ನು ನಿರ್ಮಿಸಲು ತೊಡಗಿದರು. ಇಂಥ ಕೆಲಸಗಳಲ್ಲಿ ಜನಗಳ ಉತ್ಸಾಹಕ್ಕೆ ಯಾವ ಕೊರತೆಯೂ ಬರಲಿಲ್ಲ.

ಸಾಹಿತ್ಯದ ಹಿನ್ನೆಲೆ

ಆ ದೇಶದಲ್ಲಿ ಪ್ರಾಮುಖ್ಯವೆನಿಸಿದ ಕಾವ್ಯರೂಪ ಎಂದರೆ ಆತ್ಮಚರಿತ್ರೆಗಳು. ಅದು ಇಲ್ಲಿನ ವೈಶಿಷ್ಟ್ಯ. ಅಲ್ಲಿ ಹಿಂದೂ ದೊರೆಗಳ ಆಳ್ವಿಕೆ ತೊಡಗಿದಂದಿನಿಂದ ಭಾರತದ ಅಸಂಖ್ಯ ಸಂಸ್ಕೃತ ಕಾವ್ಯಗಳು ಅನುವಾದಗೊಂಡುವು. ಅಂಥ ಅನುವಾದಗಳ ಮೂಲಕ ಜನಸಾಮಾನ್ಯರಲ್ಲೂ ಸಾಹಿತ್ಯಾಭಿರುಚಿ ಬೆಳೆಯಿತು. ಮಧ್ಯ ಜಾವಾದಲ್ಲಿ ನಡೆದ ದೇಗುಲಗಳ ನಿರ್ಮಾಣ ಕಾರ್ಯವೂ, ಈ ಸಾಹಿತ್ಯ ಚಟುವಟಿಕೆಗಳೂ ಏಕಕಾಲದಲ್ಲಿ ನಡೆದುವು; ಅವರ ಭಾಷೆಯಲ್ಲಿ ಅಸಂಖ್ಯ ಸಂಸ್ಕೃತ ಪದಗಳು ತತ್ಸಮದಲ್ಲಿ ಬಳಕೆಗೆ ಬಂದುವು. ಗೊಂಡ "ಇಂಡೋನೇಶ್ಯದಲ್ಲಿ 'ಸಂಸ್ಕೃತ' ಎಂಬ ತನ್ನ ಗ್ರಂಥದಲ್ಲಿ ಇದಕ್ಕೆ ಬೇಕಷ್ಟು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಜಾವಾನೀಯರ ಮನಸ್ಸಿನ ಮೇಲೆ ಅತಿ ಹೆಚ್ಚಿನ ಪರಿಣಾಮ ಬೀರಿದ ಎರಡು ಕಾವ್ಯಗಳೆಂದರೆ ಭಾರತದ ಮಹಾಭಾರತ ಮತ್ತು ರಾಮಾಯಣ ಗ್ರಂಥಗಳು. ಈ ವಿಚಾರದಲ್ಲಿ ಫೋಗೆಲ್ ಹೇಳುವ ಮಾತುಗಳನ್ನು ಕೇಳಿ: "ಐವರು ಪಾಂಡವರ ಮಹಾಕತೆ, ಮತ್ತು ರಾಮನ ವಿಷಯದ ಈ ಕಾವ್ಯಗಳು ವ್ಯಾಸ ಮತ್ತು ವಾಲ್ಮೀಕಿಯರಿಂದ ರಚನೆಗೊಂಡಿದ್ದರೂ, ಭಾರತದಲ್ಲಿ ಜನಾದರ ಗಳಿಸಿದಷ್ಟೇ ಜಾವಾ ದೇಶದಲ್ಲೂ ಗಳಿಸಿದುವು. ಜಾವಾನೀಯರು ಈ ಕತೆಗಳು ಪರದೇಶದಿಂದ ಬಂದುವೆಂಬುದನ್ನೇ ಮರೆತು, ಅದನ್ನು ತಮ್ಮದೆಂದೇ ತಿಳಿದರು. ಅಲ್ಲಿಯ ಜನತೆಯ ಪಾಲಿಗೆ ಪಾಂಡವರು ಮತ್ತು ರಾಮ ಅವರ ದೇಶದಲ್ಲಿ ಹುಟ್ಟಿದ ವೀರರೆನಿಸಿದರು. ಧರ್ಮವಂಶನೆಂಬ ದೊರೆ ಅಲ್ಲಿ ಆಳುತ್ತಿದ್ದ ಕಾಲದಲ್ಲಿ ಈ ಎರಡು ಕಾವ್ಯಗಳನ್ನು ಅಲ್ಲಿನ ಭಾಷೆಗೆ ಅನುವಾದಿಸಿದರು. ಈ ಕಾವ್ಯಗಳಲ್ಲಿ ಬರುವ ಅನೇಕ ಕಿರುಗತೆಗಳು ಸಹ ಜಾವಾನೀ ಕವಿಗಳನ್ನು ಆಕರ್ಷಿಸಿದುವು. ಹಿಂದೂ ದೇಶದ ಈ ಪುರಾತನ ಕಥಾನಕಗಳನ್ನು, ಅವರು ತಮ್ಮ ಸಾಹಿತ್ಯದಲ್ಲಿ ವಿವಿಧ ರೂಪಗಳಲ್ಲಿ ಬರೆದರು. ಅಂಥವುಗಳಲ್ಲಿ ಈ ಕೆಲವು ಪ್ರಸಿದ್ಧ ಎನಿಸಿವೆ.

೧. ದೊರೆ—ಅಯ್ರ್ಲಂಗ-ಕಾಲ ೧೦೩೫—ಕವಿ ಕಣ್ವ—'ಅರ್ಜುನ ವಿವಾಹ' ಎಂಬ ಕಾವ್ಯ.

೨. ದೊರೆ ಜಯವರ್ಷ —ಕಾಲ ೧೧೦೪—ಕವಿ ತ್ರಿಗುಣ—ರುಕ್ಮಿಣಿ ವಿವಾಹದ ಕತೆ ಕೃಷ್ಣಾಯಣ.

೩. ದೊರೆ ಕಾಮೇಶ್ವರ ೨ನೇ—ಕಾಲ ೧೧೮೫—ಕವಿ ಧರ್ಮಾಯ—ಕಾವ್ಯ—'ಸ್ಮರದಾಹನ'.

೪. ದೊರೆ ಜಯಾಭಯ—ಕಾಲ ೧೧೫೭—ಶೇಡ ಮತ್ತು ಪನಲೂಹ-ಕವಿ—ಕಾವ್ಯ—'ಭಾರತ ಯುದ್ಧ'.

ಭಾರತದ ಕಥಾವಸ್ತುಗಳ ಬಗ್ಗೆ ಅಲ್ಲಿನ ವಾಸ್ತುಕಾರರೂ ಮತ್ತು ಶಿಲ್ಪಿಗಳೂ ತೋರಿಸಿದ ಉತ್ಸಾಹ ಕಡಿಮೆಯಾಗುತ್ತ ಸರಿದ ಮೇಲೆ ಕೂಡ. ಸಾಹಿತ್ಯದ ಉತ್ಸಾಹ ಕುಂದಲಿಲ್ಲ. ಉದಾಹರಣೆಗಾಗಿ ಹರಿವಿಜಯ. ಕಾರ್ತವೀರ್ಯಾರ್ಜುನ ವಿಜಯ. ಇಂದ್ರವಿಜಯ. ಪಾರ್ಥಯಜ್ಞ. ಕಾರ್ತವೀರ್ಯನನ್ನು ಗೆದ್ದ ಪರಶುರಾಮನ ವಿಜಯ. ಕಾದಾಡಿದ ಸುಂದೋಪಸುಂದರ ಕಾಳಗ (ರತ್ನವಿಜಯ) ಮೊದಲಾದ ಅನಂತರದ ಕಾವ್ಯಗಳು ಜನಪ್ರಿಯವಾಗತೊಡಗಿ. ಅಲ್ಲಿನ ರಂಗಭೂಮಿಯಲ್ಲಿ ತೊಗಲು ಗೊಂಬೆ ಆಟಗಳ ರೂಪದಲ್ಲಿ ಉಳಿದುಕೊಂಡಿವೆ.

ಪೌರಾಣಿಕ ಕಾವ್ಯ ನಿರ್ಮಾಣವಲ್ಲದೆ ಬ್ರಹ್ಮಾಂಡ ಪುರಾಣ. ಆದಿಪುರಾಣ. ಭುವನಪುರಾಣ. ಅಗಸ್ತ್ಯಪರ್ವಗಳಂಥ ಪುರಾಣಗಳನ್ನು ಸಂಪೂರ್ಣವಾಗಿ ಅನುವಾದಿಸಿದ್ದಾರೆ. ವೈದ್ಯ.ಪ್ರಕೃತಿಶಾಸ್ತ್ರ. ಸಂಗೀತ. ಛಂದಸ್ಸು. ಶಬ್ದಕೋಶ ಕಾಮಶಾಸ್ತ್ರಗಳಂತಹ ಗ್ರಂಥಗಳನ್ನು ಅನುವಾದಿಸಿದ್ದಾರೆ. ಅಮರಮಾಲಾ ಎಂಬುದು ಶಬ್ದಕೋಶ: 'ವೃತ್ತ ಸಂಚಯ' ಶಬ್ದಕೋಶ. 'ಸ್ಮರತಂತ್ರ' ಎಂಬುದು ಕಾಮಶಾಸ್ತ್ರ, 'ಧರ್ಮಸವಿತೆ' ಎಂಬುದು ನೀತಿಶಾಸ್ತ್ರ.

ಜಾವಾದ ಇನ್ನೊಂದು ವೈಶಿಷ್ಟ್ಯವೆಂದರೆ ಅಲ್ಲಿ ಒಂದೆ ಬುದ್ಧ ಮತ್ತು ಹಿಂದೂಧರ್ಮಗಳ ಪ್ರಚಾರ ಇದ್ದಿದ್ದರೂ. ಅನಂತರ ಇಸ್ಲಾಂ ಧರ್ಮ ರೂಢಿಗೆ ಬಂದರೂ ಯಾವ ಮತದ್ವೇಷವೂ ಕಾಣುವುದಿಲ್ಲ. ಹಿಂದುಸ್ಥಾನದಲ್ಲಿ ಬುದ್ಧನು ವಿಷ್ಣುವಿನ ಅವತಾರವೆನಿಸಿಕೊಂಡಂತೆ. ಅಲ್ಲಿ ಶೈವಧರ್ಮ ಮತ್ತು ಬೌದ್ಧಧರ್ಮಗಳು ಒಂದಾದುವು. ಅಲ್ಲಿನ ದೊರೆ ಸಿಂಗಸರಿಯ ಕೃತಸಾಗರ ಎಂಬಾತ ತಾನು ಶೈವಬುದ್ಧನೆಂದು ಹೇಳಿಕೊಂಡಿದ್ದಾನೆ. ಅವನ ಕಾಲದ ಬಳಿಕ ಅವನ ಸ್ಮಾರಕವಾಗಿ ಅವನ ಒಂದು ಮೂರ್ತಿಯನ್ನು ಕೆತ್ತಿದ್ದಾರೆ.

ಈ ಬಗೆಯ ಧರ್ಮಸಮನ್ವಯದ ಜೊತೆಗೆ. ದೊರೆಗಳನ್ನು ಕುರಿತ ಇನ್ನೊಂದು ಬಗೆಯ ಭಾವ ಸಮನ್ವಯವೂ ನಡೆಯಿತು. ದೊರೆಯಾದವನು ಯಾವನಾದರೂ ಒಬ್ಬ ದೇವತೆಯ ಜೀವಂತರೂಪ ಎಂಬ ಭಾವನೆ ಬೆಳೆದು. ಅವನ ಆತ್ಮವು ಆ ದೇವತೆಯ ಮೂರ್ತಿಯಲ್ಲಿ ಸೇರಿಕೊಳ್ಳುತ್ತದೆ ಎಂಬ ನಂಬಿಕೆಯಿಂದ ಅಲ್ಲಿಯವರು ಮೃತದೊರೆಗಳ ಸ್ಮಾರಕ ವಿಗ್ರಹಗಳುಳ್ಳ ಗುಡಿಗಳನ್ನು ಕಟ್ಟಿದರು.

ಆರಂಭದ ಶತಮಾನಗಳಲ್ಲಿ ಜಾವಾ ದೇಶದಲ್ಲಿ ಶಿವನನ್ನು ಮಾನವ ರೂಪದಲ್ಲಿ ಪೂಜಿಸಿದರೆ ಹೊರತು ಲಿಂಗರೂಪದಲ್ಲಿ ಪೂಜಿಸಲಿಲ್ಲ. ಹಾಗೆ ಲಿಂಗಪೂಜೆಯ ಪದ್ಧತಿ ಹಿಂದುಗಳು ಅಲ್ಲಿಗೆ ಬರುವ ಮೊದಲೇನೆ ಇದ್ದಿರಬಹುದುದೆಂದು ಸ್ಟಟರ್ ಹೈಮ್ ತರ್ಕಿಸುತ್ತಾನೆ. ಜಾವಾದಲ್ಲಿ ಬೌದ್ಧಧರ್ಮ ಪ್ರಸಿದ್ಧಿಗೆ ಬರುವ ಮೊದಲೇ. ಎಂದರೆ ಎಂಟನೇ ಶತಮಾನದಲ್ಲಿ ಆರಾಧನೆಗೊಳಗಾದ ಹಿಂದೂ ದೇವತೆಗಳು ಬ್ರಹ್ಮ. ವಿಷ್ಣು. ಶಿವ. ದುರ್ಗಾ ಮತ್ತು ಅಗಸ್ತ್ಯರು ಹತ್ತನೇ ಶತಮಾನದಿಂದ ಮುಂದಕ್ಕೆ ದಕ್ಷಿಣ ಹಿಂದೂಸ್ಥಾನದಲ್ಲಿ ಕಂಡುಬರುವ ಅನೇಕ ಪೌರಾಣಿಕ ದೇವತೆಗಳ ಕಲ್ಪನೆ ಅಲ್ಲಿಯೂ ಹಬ್ಬಿತ್ತು. ಶಿವ ಮಹಾದೇವನೆನಿಸಿಕೊಂಡ: ಮಹಾಯೋಗಿ ಎನಿಸಿಕೊಂಡ: ಭೈರವ ಎನಿಸಿಕೊಂಡ. ಆತ ಲಿಂಗರೂಪದಲ್ಲಿಯೂ ಪೂಜೆಗೊಂಡ. ಶಿವನ ಮಡದಿ ಪಾರ್ವತಿ ಮಹಾ ಕಾಳಿಯಾದಳು. ಮಹಿಷಾಮರ್ಧಿನಿ ಆದಳು. ವಿಷ್ಣುವಿಗೆ ನಾರಸಿಂಹ. ರಾಮ. ಕೃಷ್ಣ. ಹಯಗ್ರೀವಾದಿ ರೂಪುಗಳು ಬಂದುವು. ಶಿವ ಪಾರ್ವತಿಯರು ಅರ್ಧನಾರೀಶ್ವರ ರೂಪ ತಾಳಿದರು. ವಿಷ್ಣು ಶಿವರು ಹರಿಹರರೆನಿಸಿಕೊಂಡರು. ಗಣೇಶ, ಸ್ಕಂದರಿಗೂ ಪೂಜೆ ತೊಡಗಿತು. ಅನಂತರ ಅಷ್ಟ ದಿಕ್ಪಾಲಕರ ಪೂಜೆ, ಸೂರ್ಯ ಚಂದ್ರರ ಪೂಜೆಗಳು ರೂಢಿಗೆ ಬಂದುವು. ಜಾವಾದಲ್ಲಿ ಬಹಳ ಹಿಂದಿನ ಕಾಲದಲ್ಲಿಯೇ ಬರೆದ ಮಹಾಯಾನ ಧರ್ಮಗ್ರಂಥಗಳು ಸಿಗುವುದರಿಂದ ಆ ಧರ್ಮವೂ ಅಲ್ಲಿ ವಿಶೇಷ ಪ್ರಚಾರದಲ್ಲಿತ್ತು ಎನಿಸುತ್ತದೆ. ಅವನ್ನು ಕುರಿತ ಶಿಲ್ಪಗಳು ಮುಂದೆ ಕಾಣಿಸಿಕೊಳ್ಳಬೇಕಾದರೆ, ಈ ಶಾಸ್ತ್ರಗಳ ಗಾಢವಾದ ಅಭ್ಯಾಸ

ವನ್ನು ಅದಕ್ಕಿಂತ ಮೊದಲೇ ಮಾಡಿಕೊಂಡಿರಬೇಕೆಂದು ಅನಿಸುತ್ತದೆ. ಏಕೆಂದರೆ ಅಲ್ಲಿನ ಶಿಲ್ಪಗಳಲ್ಲಿ ಅನೇಕ ತೆರನ ಬೌದ್ಧ ಪ್ರತಿಮೆಗಳಿವೆ. ಆದಿ ಬುದ್ಧರಿದ್ದಾರೆ; ಬೋಧಿಸತ್ವರಿದ್ದಾರೆ; ಅವಲೋಕಿತೇಶ್ವರರೂ, ಮೈತ್ರೇಯರೂ, ಮಂಜುಶ್ರೀಗಳೂ, ಪ್ರಜ್ಞಾ ಪಾರಮಿತರೂ ಮತ್ತು ತಾರಾ ಅಲ್ಲಿ ಕಂಡು ಬರುತ್ತವೆ. ಇಲ್ಲಿನ ಶಾಸನಗಳಲ್ಲಿ ನಮ್ಮ ದಕ್ಷಿಣ ಹಿಂದುಸ್ಥಾನದಲ್ಲಿರುವಂತೆ, ದೇವಾಲಯಗಳ ಕೆಲಸ ನಡೆಯಲು ಸಾಧ್ಯವಾಗುವಂತೆ ಜಮೀನನ್ನು, ಸೇವಕರನ್ನು, ಗೋವುಗಳನ್ನು ಉಂಬಳಿಯಾಗಿ ಬಿಟ್ಟದ್ದು ಕಾಣುತ್ತದೆ.

ದೇವಾಲಯಗಳ ಹೆಸರು

ಜಾವಾದಲ್ಲಿ 'ಚಂಡಿ' ಎಂದರೆ ದೇವಾಲಯ. ಅದು ಹಿಂದೂ ದೇವಾಲಯವಿರಬಹುದು, ಬುದ್ಧ ದೇವಾಲಯವಿರಬಹುದು. ಸ್ಟಟರ್ ಹೈಮ್‌ನ ಅಭಿಪ್ರಾಯದಂತೆ—ಚಂಡಿ ಎಂಬುದು ನಿತ್ಯ ಪೂಜೆಯ ದೇವಾಲಯ ಅಲ್ಲವೆಂದೂ, ದೊರೆಗಳು ತೀರಿಕೊಂಡಮೇಲೆ ಅವರ ಸ್ಮಾರಕವಾಗಿ ಕಟ್ಟಿದ ಮತ್ತು ಅವರ ಆತ್ಮತೃಪ್ತಿಗಾಗಿ ಪೂಜೆ ಸಲ್ಲಿಸುವ ದೇವಾಲಯವಂತೆ. ಈ ರೀತಿ ಪ್ರೇತಾತ್ಮರಿಗೆ ಗೌರವ ಸಲ್ಲಿಸುವ ಪದ್ಧತಿ ಅತಿ ಪೂರ್ವದಿಂದಲೂ ಜಾವಾದಲ್ಲಿದ್ದಿರಬೇಕು. 'ಚಂಡಿಕಾ' ಎಂಬುದರಿಂದ 'ಚಂಡಿ' ಎಂಬ ಪದ ಹುಟ್ಟಿತು. ಅದು ದುರ್ಗೆಯ ಒಂದು ಹೆಸರಾಗಿದ್ದು, ಸ್ಮಶಾನಕ್ಕೆ ಸಂಬಂಧಪಟ್ಟ ಹೆಸರೆಂಬುದ ರಿಂದ, ಮುಂದೆ ದೇಗುಲಕ್ಕೂ ಆ ಹೆಸರು ಬಂದಿರಬೇಕೆಂದು ಕರ್ನ್ ಹೇಳುತ್ತಾನೆ. ಬಾಲಿ ದ್ವೀಪದ ಸ್ಮಶಾನದಲ್ಲಿ ಇಂದಿಗೂ ಚಂಡಿಯ ದೇವಾಲಯವಿದೆ. ಮಣಿಮೇಖಲೆ ಕಾವ್ಯಕ್ಕೆ ಟೀಕೆ ಬರೆದ ಡಾ॥ ಸ್ವಾಮಿನಾಥ ಅಯ್ಯರ್‌ರವರು ಚೋಳರ ರಾಜಧಾನಿಯಾದ ಪ್ರಹಾರ ಎನ್ನುವಲ್ಲಿ ಸ್ಮಶಾನದಲ್ಲಿ ದುರ್ಗಾ ದೇವಾಲಯವಿತ್ತು ಎನ್ನುತ್ತಾರೆ. ಅಂಥ ಇನ್ನೆರಡು ಉದಾಹರಣೆಗಳನ್ನು ಅವರು ಜೈನಗ್ರಂಥಗಳಿಂದಲೂ ಕೊಟ್ಟಿದ್ದಾರೆ. ಇವು ಎರಡನೆ ರಾಜರಾಜ ಚೋಳನ ಕಾಲದಲ್ಲಿ ಸ್ಮಶಾನದಲ್ಲಿ ಕಟ್ಟಿದ ದುರ್ಗಾ ಗುಡಿ ಗಳ ಅಸ್ತಿತ್ವವನ್ನು ಸೂಚಿಸುತ್ತವೆ.

ಇವತ್ತು ರೂಢಿಯಲ್ಲಿರುವ ಚಂಡಿ ಬೋರೋಬುದುರ್ ಮತ್ತು ಚಂಡಿ ಅರ್ಜುನ ಎಂಬವು ತೀರ ಈಚೆ ರೂಢಿಗೆ ಬಂದ ಹೆಸರುಗಳು. ಅವುಗಳ ನಿಜವಾದ ಹೆಸರನ್ನು ಆ ದೇಗುಲಗಳನ್ನು ಕಟ್ಟಿಸಿದವರು ಏನೆಂದು ಹೇಳಿದ್ದರೆಂದು ಅಲ್ಲಿನ ಸಾಹಿತ್ಯದಿಂದ ತಿಳಿಯುವುದಿಲ್ಲ. ಮಹಾಬಲಿಪುರದ ಪಂಚಪಾಂಡವರ ರಥಗಳಂತೆ ಅವುಗಳಿಗೆ ಬರಿದೆ ಅರ್ಜುನ, ಭೀಮಾದಿಗಳ ಹೆಸರನ್ನಿಟ್ಟಿರಬೇಕು.

ವಾಸ್ತುರಚನೆಯ ಕಾಲ

ಜಾವಾ ದೇಶದ ವಾಸ್ತುರಚನೆಗಳ ಕಾಲವನ್ನು ಬುದ್ಧ ಪೂರ್ವ ಹಿಂದು, ಬೌದ್ಧ ಮತ್ತು ಬುದ್ಧೋತ್ತರ ಹಿಂದೂ ಕಾಲದವು ಎಂದು ಮೂರು ವರ್ಗಗಳನ್ನಾಗಿ ವಿಭಾಗಿಸಬಹುದು.

ಬುದ್ಧಪೂರ್ವ ಹಿಂದೂವಾಸ್ತುಗಳು

ಇವು ಏಳನೇ ಶತಮಾನದಿಂದ ಎಂಟನೆ ಶತಮಾನದ ಮಧ್ಯಾವಧಿವರೆಗೆ ಚಾಚುತ್ತದೆ. ಮಧ್ಯ ಜಾವಾದ ಡಿಯಂಗ್ ಪ್ರಸ್ಥಭೂಮಿಯ ದೇಗುಲಗಳು ಇದಕ್ಕೆ ಉದಾಹರಣೆ. ಅಲ್ಲಿ ದೇಗುಲಗಳು ಇವು: ಅರ್ಜುನ, ಶ್ರೀಕಂಡಿ, ಪುಂತದೇವ, ಸೆಂಬಧ್ರು, ಸೆಮಾರ, ದ್ವಾರಾವತಿ, ಘಟೋತ್ಕಚ, ಭೀಮ, ಪರೀಕ್ಷಿತ, ನಕುಲ, ಸಹದೇವ, ಪಿಂಗಪನ್, ಸೆಲಗ್ರಿಯ ಮತ್ತು ಗೆಡಾಂಗ ಸಂಗ—ಎಂಬುವು.

ಬೌದ್ಧ ವಾಸ್ತುಗಳು

೮ನೇ ಶತಮಾನಾರ್ಧದಿಂದ ಒಂಬತ್ತನೆಯ ಶತಮಾನದ ಮಧ್ಯಾವಧಿ. ಬೋರೋಬುದುರ ದೇಗುಲ, ಮೆಂದೂತ, ಪಾವನ್, ಕಲಸನ್, ಸರಿ, ಸವು, ಪ್ಲಾವೂಸಾನ್—ದೇಗುಲಗಳು.

ಬೌದ್ಧೋತ್ತರ ಹಿಂದೂ ವಾಸ್ತುಗಳು

೯ನೇ ಶತಮಾನದ ಮಧ್ಯಾವಧಿಯಿಂದ ೧೦ನೇ ಶತಮಾನದ ಮಧ್ಯಾವಧಿಯ ತನಕ. ಪ್ರಾಂಬನನ್ ದೇಗುಲಗಳ ಗುಂಪು ಲೋರೋಜೊಂಗ್ರಾಂಗ್ ದೇಗುಲಗಳು ನಿರ್ಮಾಣಗೊಂಡುವು.

ಮಧ್ಯ ಜಾವಾದ ಡಿಯಂಗ್ ಪ್ರಸ್ಥಭೂಮಿಯನ್ನು ಅನೇಕ ಸುಂದರ ಬೆಟ್ಟದ ಶ್ರೇಣಿಗಳು ಆವರಿಸುತ್ತವೆ. ಅವುಗಳ ಅನೇಕ ಸುಂದರ ದೇಗುಲಗಳನ್ನು ಕಟ್ಟಿದ್ದಾರೆ. ಇವುಗಳಲ್ಲಿ ಹೆಚ್ಚಿನವು ಶಿವಾಲಯಗಳು. ಹಿಂದಿನ ಕಾಲದಲ್ಲಿ ಈ ಸ್ಥಳ ಒಂದು ಯಾತ್ರಾ ಸ್ಥಳವಾಗಿದ್ದಿರಬೇಕೆಂದು ಡಾ॥ ಕುಮಾರ ಸ್ವಾಮಿಯವರು ನಂಬುತ್ತಾರೆ. ಈ ದೇಗುಲಗಳ ಆಕೃತಿ ಸರಳವಾಗಿರುವುದನ್ನು ಕಾಣುತ್ತೇವೆ: ಇವು ತೀರ ಆರಂಭ ಕಾಲದ ವಾಸ್ತುಕೃತಿಗಳು. ಅವುಗಳ ಸ್ಥೂಲ ರೂಪ ಮಹಾಬಲಿಪುರದ ಪಲ್ಲವ ಗುಡಿಗಳಂತೆ ಕಾಣಿಸಿದರೂ. ಇಲ್ಲಿನ ಧರ್ಮರಾಜ ಮತ್ತು ಅರ್ಜುನನ ರಥಗಳು ಒಂದೇ ಕೋಣೆಯುಳ್ಳವು. ಅವುಗಳ ಶೈಲಿಯೂ ಪಲ್ಲವ ಶೈಲಿಯ ಅನುಕರಣೆಯಲ್ಲ.

ಈ ಪ್ರಸ್ಥಭೂಮಿಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಸಾಲಾಗಿ ಕಟ್ಟಿದ ನಾಲ್ಕು ದೇಗುಲಗಳಿವೆ ಅವುಗಳ ಮುಖ ಪಶ್ಚಿಮಕ್ಕೆ ತೆರೆದಿದ್ದು ಅವು ಅರ್ಜುನ. ಶ್ರೀಕಂಡಿ. ಪುಂತದೇವ. ಸೆಂಬಧ್ರ ಎಂಬ ಹೆಸರಿನವು. ಅರ್ಜುನ ದೇಗುಲಕ್ಕೆ ಇದಿರಾಗಿ ಪಶ್ಚಿಮಾಭಿಮುಖದ ಸೆಮಾರ್ ಎಂಬ ಹೆಸರಿನ ಒಂದು ದೇವಾಲಯವಿದೆ. ಇವುಗಳ ಬಳಿ ದ್ವಾರಾವತಿ. ಘಟೋತ್ಕಚ. ಭೀಮ ಎಂಬ ಕಿರುದೇಗುಲಗಳು ಪರೀಕ್ಷಿತ. ನಕುಲ. ಸಹದೇವರ ದೇಗುಲಗಳೂ ಇವೆ. ಇಲ್ಲಿನ ಭೀಮ ದೇಗುಲದ ಮೇಲುಪ್ಪರಿಗೆಯಲ್ಲಿ ಏಳಿ ಆಕಾರದ ಒಂದು ಗೂಡುಗಂಡಿಯಿದ್ದು. ಅದರಲ್ಲಿ ಒಂದು ಮಾನವ ಶಿರಸ್ಸು ಮಾತ್ರ ಇದೆ. ಈ ರೀತಿಯ ಕಾರ್ನೀಸು ಮತ್ತು ಅಲಂಕಾರ ದಕ್ಷಿಣ ಆರ್ಕಾಟು ಜಿಲ್ಲೆಯ ದಳವಾನೂರು ಎಂಬಲ್ಲೂ ಕಾಂಬೋಡಿಯದ ಈಶಾನವರ್ಮ ದೇಗುಲದಲ್ಲೂ ಕಾಣಬಹುದು. ಪಲ್ಲವರು ಇಂಥ ಗೂಡುಗಂಡಿಗಳನ್ನು 'ಕೂಡು' ಎಂದು ಕರೆದಿದ್ದಾರೆ. ಅಮರಾವತಿ ಸ್ತೂಪದಲ್ಲೂ ಈ ತೆರನ ಗೂಡುಗಂಡಿ ಇದೆ. ಇಲ್ಲಿನ ಶಿವ. ದುರ್ಗ. ಗಣೇಶ ಮೊದಲಾದ ವಿಗ್ರಹಗಳು ದುಂಡು ಶಿಲ್ಪಗಳು. ಅವುಗಳ ಜೊಂಗಡೆ ಸಸ್ಯಗಳೂ. ವ್ಯೈ ಮೇಲೆ ಹಾರ. ತಾವರೆ ಮೊದಲಾದ ಅಲಂಕಾರಗಳೂ ಇವೆ. ದಕ್ಷಿಣ ಹಿಂದುಸ್ಥಾನದಲ್ಲಿರುವಂತೆ ಈ ದೇಗುಲಗಳ ಮೇಲೂ. ಕಮಾನುಗಳ ಮೇಲೂ ಕೀರ್ತಿಮುಖ ಎಂಬ ಅಲಂಕಾರವನ್ನು ಕಾಣುತ್ತೇವೆ. ಕಂಚಿನ ಪ್ರತಿಮೆಗಳ ಮೇಲೆ ಪ್ರಭಾವಳಿಗಳನ್ನು ಇರಿಸುತ್ತಾರೆ. ಫೋಗೆಲ್‌ನ ಅಭಿಪ್ರಾಯದಂತೆ ಇಲ್ಲಿನ ದೇಗುಲಗಳು ದೀರ್ಘಕಾಲದ ವಿಕಾಸವನ್ನು ತೋರುತ್ತವಾದರೂ. ಅವಕ್ಕಿಂತ ಪೂರ್ವ ಕಾಲದ ಮಾದರಿಗಳು ಇಲ್ಲಿ ಉಳಿದುಕೊಂಡಂತಿಲ್ಲ. ಈ ಪ್ರದೇಶದ ಪೂರ್ವಕ್ಕೂ. ದಕ್ಷಿಣಕ್ಕೂ ಹಬ್ಬಿರುವ ಬಯಲು ಭೂಮಿಯಲ್ಲಿ ಸುಂಗಿಮ್ ಮತ್ತು ಉಂಗರಾಮ ಎಂಬ ಹೆಸರಿನ ಬೆಟ್ಟಗಳ ಮೇಲೆ ಅಲ್ಲಲ್ಲಿ ಇದೇ ಮಾದರಿಯ ಅನೇಕ ದೇಗುಲಗಳಿವೆ: ಆ ಬೆಟ್ಟಗಳ ಬೆನ್ನಿನ ಮೇಲೆ ಪಿಂಗಪನ್, ಸೆಲಗ್ರಿಯ. ದೆಪಾಂಗ ಸಂಗದಂತಹ ದೇಗುಲಗಳನ್ನು ನಿರ್ಮಿಸಿದ್ದಾರೆ.

ಬೌದ್ಧ ಯುಗ-ಬೊರೋಬುದುರ

ಎಂಟನೇ ಶತಮಾನದ ಮಧ್ಯಾವಧಿಯಲ್ಲಿ ಜಾವಾದಲ್ಲಿ ಕಲೆಗಳ ಪಾಲಿನ ಸುವರ್ಣಯುಗವೇ ಕಾಲಿರಿಸಿತ್ತು. ಬೋರೋಬುದುರ ನಿರ್ಮಾಣಗೊಂಡುದು ಆಗ. ಅದು ಆ ನಾಡಿಗೆ ಮಾತ್ರವಲ್ಲ. ಜಗತ್ತಿಗೇ ಮಹಾಯಾನ ಬೌದ್ಧಧರ್ಮ ಕೊಟ್ಟಂಥ ಹಿರಿಯ ಕಾಣಿಕೆ ಎಂದರೂ ಸಲ್ಲುತ್ತದೆ. ಜಾವಾದ ನೆರೆಯ ನಾಡಾದ ಸುಮಾತ್ರಾದಲ್ಲಿ ನೆಲೆಸಿದ್ದ ಶೈಲೇಂದ್ರ ಅರಸುವಂಶವು ಸಮೀಪದ ಜಾವಾ ದ್ವೀಪದಲ್ಲಿ ಇಂಥ ಒಂದು ವಾಸ್ತುವನ್ನು ಹೇಗೆ ನಿರ್ಮಿಸಿತೆಂಬುದು ಒಂದು ಸಮಸ್ಯೆಯೇ ಸರಿ. ಅದಕ್ಕೆ ಮುಖ್ಯ ಕಾರಣ ಜಾವಾದಲ್ಲಿ ಅಂದು ಕಾಣಿಸಿಕೊಂಡ ಅನುಕೂಲ ಪರಿಸ್ಥಿತಿ. ಅಲ್ಲಿ ವಾಸ್ತುರಚನೆಗೆ ಬೇಕಾದ ಕಸುಬುದಾರ ಸಲಕರಣೆಗಳಿದ್ದುವು. ಅನುಕೂಲವಾದ ಸ್ಥಳವಿತ್ತು. ಜನಸಾಮಾನ್ಯರಲ್ಲಿ ಅದಕ್ಕೆ ಬೇಕಾದ ಉತ್ಸಾಹೀ ಮನೋಭಾವವಿತ್ತು. ಇವೆಲ್ಲವೂ ಕೂಡಿಕೊಂಡುದರಿಂದ ಬೋರೋಬುದರಿನಂಥ ಅದ್ಭುತ ವಾಸ್ತು

ಕೃತಿ ಸಾಧ್ಯವಾಯಿತು. ಇದನ್ನು ಒಂಬತ್ತನೇ ಶತಮಾನದ ಆರಂಭದಲ್ಲಿ ನಿರ್ಮಾಣಗೊಂಡಿತೆಂದು ಜನರು ತಿಳಿದುಕೊಂಡಿದ್ದರೂ, ಅದು ನಿಜವಾಗಿ ನಿರ್ಮಾಣಗೊಂಡುದು ದೊರೆ ಪಂಚಪಣ (ಕ್ರಿ. ಶ. ೭೭೨) ಆಳುತ್ತಿದ್ದ ಕಾಲದಲ್ಲಿ.

ಜಗತ್ತಿನ ಅನ್ಯ ಪುರಾತನ ವಾಸ್ತುಗಳಿಗಿಂತಲೂ ಹೆಚ್ಚಿನ ಮನ್ನಣೆ ಮತ್ತು ಮೆಚ್ಚಿಕೆಗಳು ಬೋರೋಬುದುರ ವಾಸ್ತುವಿಗೆ ಸಲ್ಲಬೇಕು. ವಿಶಾಲವೂ, ಉನ್ನತವೂ ಆದ ಈ ವಾಸ್ತು ಜಾನನ್ನು ಮುಟ್ಟುವಂತೆ ದೂರದ ನೋಟಕ್ಕೆ ಕಾಣಿಸುತ್ತದೆ. ಅದರ ನೆರಳ ಬಿಂಬವನ್ನು ಕಂಡುದಾದರೆ ಈ ವಾಸ್ತುವಿನ ಉನ್ನತ ಚಾವಡಿಗಳ ಮೇಲೆ ನಿರ್ಮಿಸಿದ ಅಸಂಖ್ಯ ಗೋಪುರಗಳ ದೆಸೆಯಿಂದ, ಅವು ಈಟಿಗಳನ್ನು ಹೊತ್ತು ಸಾಲಾಗಿ ಸರಿಯುತ್ತಿರುವ ಸೇನಾಪಡೆಯಂತೆ ಕಾಣಿಸುತ್ತದೆ. ಈ ದೃಶ್ಯ ನಮಗೆ ಮಿಲ್ಟನ್ ಕವಿಯ ಪಂಕ್ತಿಗಳನ್ನು ನೆನಪಿಗೆ ತಂದುಕೊಡುತ್ತವೆ.

ಕವಿದ ಮಬ್ಬಿನ ನಡುವೆ ತಕ್ಷಣದಿ ಕಾಂಬುದು
ಹತ್ತು ಸಾವಿರ ಕುಡಿಗಳ್ ಎದ್ದು ನಿಂತು
ವರ್ಣ ವೈಖರಿ ಸೂಸಿ ಈಟಿಗಳದೇ ಒಂದು
ಕಾಡು ನಿಂತಂತೆ!

ಜಗತ್ತಿನ ಅದ್ಭುತ ದೇಗುಲಗಳಲ್ಲಿ ಬೋರೋಬುದುರ ವಿಶಿಷ್ಟವಾದುದು. ಅದನ್ನು ಸ್ತೂಪ ವೆಂದು ಕರೆದರೂ ಭಾರತ ದೇಶದ ಸ್ತೂಪದಂತೆ ಅದಿಲ್ಲವೇ ಇಲ್ಲ. ನಿಜವಾದ ಸ್ತೂಪ ಎಂಬುದು ಮೃತರ ಅಸ್ಥಿಯ ಮೇಲೆ ಕಟ್ಟಿದ ಅರ್ಧ ಗೋಲಾಕಾರದ ದಿಬ್ಬ . ಆ ದಿಬ್ಬದ ಸುತ್ತಲೂ ವೃತ್ತಾಕಾರದ ಪ್ರದಕ್ಷಿಣಾ ಪಥ ಇರುತ್ತದೆ. ಆದರೆ ಇದು ಹಾಗಿಲ್ಲ. ಆದರೆ ಇಂಥ ರಚನೆಗೆ ಸಹಾಯಕವಾದ ಮೊದಲಿನ ಯಾವ ಉದಾಹರಣೆಯೂ ಸಿಗುವುದಿಲ್ಲ. ಇದು ಒಂದು ಬೆಟ್ಟವನ್ನು ದೇಗುಲವನ್ನಾಗಿ ಪರಿವರ್ತಿಸಿದ ಮಾದರಿ. ಇದರ ವಾಸ್ತುಕಾರ ಅದ್ಭುತ ಸೃಷ್ಟಿಕಾರ ಮತ್ತು ತಂತ್ರಜ್ಞ. ಪಿರಮಿಡಿನಂತಹ ನಾಲ್ಕು ಮೈಯುಳ್ಳ ಒಂದು ಬೆಟ್ಟವನ್ನು ಆರಿಸಿಕೊಂಡು, ಅದರ ನಾಲ್ಕು ಇಳಿಮಗ್ಗುಲುಗಳನ್ನು ಕ್ರಮಕ್ರಮ ವಾಗಿ ಬುಡದಿಂದ ಮೇಲಕ್ಕೇರುವ ಎಂಟು ಚಾವಡಿಗಳನ್ನಾಗಿ ರೂಪಿಸಿದ್ದಾನೆ. ಅವನ್ನು ಚಾವಡಿಗಳು ಎನ್ನಬಹುದು: ತಾರಸಿಗಳು ಎನ್ನಬಹುದು. ಇಂಥ ಒಂದು ವಿಚಿತ್ರ ರಚನೆ ನಿರ್ಮಾಣಗೊಂಡು ಇಂದಿಗೆ ೧೨೦೦ ವರ್ಷಗಳೇ ಸಂದಿವೆ.

ಇವುಗಳಲ್ಲಿ ಮೊದಲ ಐದು ಚಾವಡಿಗಳು ಚೌಕಯಂತೆ ಕಾಣಿಸುತ್ತವೆ. ಅವುಗಳಿಗಿಂತ ಮೇಲ ಕ್ಕಿರುವ ಸಣ್ಣದಾದ ಮೂರು ಚಾವಡಿಗಳು ವೃತ್ತಾಕಾರದವು. ಹೀಗೆ ಒಂದಕ್ಕಿಂತ ಒಂದು ಕಿರಿದಾಗುತ್ತ ಸರಿಯುವ ಚಾವಡಿಗಳನ್ನು ಕಡಿದು ಮುಗಿಸಿದ ಮೇಲೆ, ಯಾವತ್ತು ಚಾವಡಿಗಳಿಗೆ ನೆಲಕ್ಕೆ ಹಾಸು ಗಲ್ಲನ್ನು ಹೊದೆಸಿದ್ದಾರೆ; ಆ ಚಾವಡಿಗಳ ಒಂದು ಮಗ್ಗುಲು ನೆಟ್ಟಗಿನ ಗೋಡೆಯಂತಿದ್ದುವು. ಅವೂ ಕಲ್ಲಿನ ದಂಡೆಗಳು. ಆ ಗೋಡೆಯು ಕಲ್ಲು ಹೊದಿಕೆ ಬೋಳಾಗಿಲ್ಲ. ಅವು ಅಸಂಖ್ಯ ಉಬ್ಬುಗೆತ್ತನೆ ಗಳಿಂದ ತುಂಬಿಕೊಂಡಿವೆ. ಇದೇ ರೀತಿಯಲ್ಲಿ ಮೇಲಣ ವೃತ್ತಾಕಾರದ ಚಾವಡಿಯ ನೆಲಗಳನ್ನು ಕಲ್ಲಿನಿಂದ ಹೊದೆಸಿದ್ದಾರೆ. ಈ ಗೋಡೆಗಳ ಗೋಡೆಗುಂಡಿಗಳಲ್ಲಿ ಬುದ್ಧನ ಪ್ರತಿಮೆಗಳನ್ನು ಇರಿಸಿದ್ದಾರೆ. ಮೇಲಣ ಮೂರು ವೃತ್ತಾಕಾರದ ಚಾವಡಿಗಳ ನೆಲದ ಮೇಲೆ ಘಂಟೆಯಾಕಾರದ ಸ್ತೂಪಗಳನ್ನು ನಿರ್ಮಿಸಿದ್ದಾರೆ. ತೀರ ಮಧ್ಯದ ಮತ್ತು ಅತ್ಯಂತ ಎತ್ತರದ ಚಾವಡಿಯ ಮೇಲೆ, ಬಲು ದೂರಕ್ಕೆ ಕಾಣಿಸುವಂತಹ ಒಂದು ದೊಡ್ಡ ಸ್ತೂಪವನ್ನು ರಚಿಸಿದ್ದಾರೆ. ಈ ದೇಗುಲದ ಬುಡದಿಂದ ಕುಡಿಗೆ ಹೋಗಬೇಕಾದರೆ ನಾಲ್ಕು ದಿಕ್ಕುಗಳಿಂದಲೂ ಏರುವ ಸೋಪಾನಗಳಿವೆ. ಅವುಗಳ ಮೂಲಕ ಒಂದೊಂದು ಚಾವಡಿಯನ್ನೂ ಸೇರಿ, ಸುತ್ತುವರಿದು, ಮೇಲಿನ ಚಾವಡಿಗಳಿಗೆ ಹೋಗುತ್ತಾ ತೀರ ಕೊನೆಯ ಕೇಂದ್ರಕ್ಕೆ ಬರುವಾಗ ಮೂರು ಮೈಲು ಉದ್ದದ ಹಾದಿಯನ್ನು ತುಳಿಯಬೇಕಾಗುತ್ತದೆ. ಈ ಬೋರೋಬುದುರು ವಾಸ್ತುವಿನ ಪಂಚಾಂಗ ೬೦,೦೦೦ ಚದರ ಅಡಿ ವಿಶಾಲವಾದುದು ಅಥೆನ್ಸಿನ ಪಾರ್ಥೆನಾನ್ ೨೩.೦೦೦ಚ. ಅಡಿ ಇದೆ. ಅಕ್ಲಿನ ಜ್ಯೂಸ್ ದೇಗುಲ ೪೭,೬೮೦ ಚ. ಸಮೂಸದ ಹೇರಾ ದೇಗುಲ ೬೫,೭೫೦

ಚ.ಅ. ವಿಸ್ತೀರ್ಣವುಳ್ಳದ್ದು. ಎಫೆಸಸ್ಸಿನಲ್ಲಿರುವ ಆರ್ಟೆಮಿಸ್ ದೇಗುಲ ೫೭,೦೦೦ ಚ.ಅ. ಪರ್ಸಿಪೋಲೀಸ್ ಸಭಾಂಗಣ ೫೭,೯೦೦ ಚ.ಅ. ಕಾನಾರ್ಕದ ಸಭಾ ಮಂಟಪ ೫೭,೮೦೦ ಚ.ಅ. ವಿಶಾಲ, ಆಗ್ರಾದ ತಾಜಮಹಲು ೩೦,೦೦೦ ಚ.ಅ. ವಿಶಾಲವಾದುವು.

ಬೋರೋಬುದುರ ಎಂಬ ಶಬ್ದದ ಅರ್ಥ 'ಬಹು ಬುದ್ಧರು' ಎಂದು. ಆ ಮಾತು ತೀರ ಸತ್ಯ. ಅಲ್ಲಿನ ಚೌಕ ಮತ್ತು ವೃತ್ತಾಕಾರದ ಗೋಡೆಗೂಡುಗಳಲ್ಲಿ ೫೦೪ + ೪೩೨ ಬುದ್ಧನ ದುಂಡುಶಿಲ್ಪಗಳಿವೆ. ಘಂಟೆಯಾಕಾರದ ಮೇಲಿನ ಸ್ತೂಪಗಳಲ್ಲಿ ೭೨ ಶಿಲ್ಪಗಳಿವೆ. ಕಲ್ಲು ಹಾಸಿದ ಇಲ್ಲಿನ ಚೌಕ ಜಾವಡಿಗಳನ್ನು ನಾವು ಚೌಕ ಎಂದು ಕರೆದರೂ ಆ ಚೌಕಗಳ ಮೈ ಒಂದೇ ಸರಳ ರೇಖೆಯಲ್ಲಿದ್ದರೂ ಅವನ್ನು ಕಂಡು ಕಣ್ಣು ದಣಿಯುತ್ತಿತ್ತು. ಹಾಗೆ ಮಾಡದೆ. ಆ ಚೌಕದ ಮಗ್ಗುಲಿನ ಒಂದೊಂದು ಮೈಯಲ್ಲೂ ಮೂರು ಮೂರು ಮುಂಬರಿಕೆಗಳನ್ನು ತಂದಿದ್ದಾರೆ. ಹೀಗಾಗಿ ಒಟ್ಟು ಚೌಕಕ್ಕೆ ನಾಲ್ಕು ಸಮಕೋನ ಮೂಲೆಗಳಿರುವ ಬದಲು. ಇಪ್ಪತ್ತು ಸಮಕೋನ ಮೂಲೆಗಳು ಕಾಣಸುತ್ತವೆ.

ಇಲ್ಲಿನ ವಿವಿಧ ಜಾವಡಿಗಳಿಗೆ ಹೋಗುವುದಕ್ಕೆ ನಡುವಣಿಂದ ಮೆಟ್ಟಿಲುಗಳನ್ನು ರಚಿಸಿದ್ದಾರೆ. ಮೆಟ್ಟಿಲ ತುದಿಯಲ್ಲಿ ಬಾಗಿಲಿದೆ. ಪ್ರಾಯಶಃ ಇದನ್ನು ಕಟ್ಟುತ್ತಿದ್ದ ಆರಂಭದಲ್ಲೇ. ಇದರ ನಿರ್ಮಾಣಕಾರರಿಗೆ ಇಲ್ಲಿ ಇಷ್ಟೊಂದು ಕಲ್ಲುಗಳನ್ನು ತಂದು ಹೇರಿದುದರ ದೆಸೆಯಿಂದ. ಜಾವಡಿ ದಂಡೆಗಳ ಮಗ್ಗುಲು ಕುಸಿಯಬಹುದು ಎಂಬ ಭೀತಿ ಬಂದಿರಬೇಕು. ಈ ಕೆಲಸ ಪೂರ್ತಿಯಾಗುವುದರೊಳಗಾಗಿ ಪ್ರಥಮ ಜಾವಡಿಯ ಗೋಡೆಗಳನ್ನು. ಉಬ್ಬುಗೆತ್ತನೆಯಿಂದ ಹೊದೆಸಿಯಾಗಿತ್ತು: ಆಮೇಲೆ ಆ ದಂಡೆಗಳು ಕುಸಿಯಬಹುದೆಂದು. ಅಲ್ಲಿನ ಉಬ್ಬುಗೆತ್ತನೆಗಳಿಗೆ ತಾಗಿ. ಇದಿರುಗೋಡೆಯೊಂದನ್ನು ಕಟ್ಟಿದರು. ಈ ರಕ್ಷಣೆ ದಿಬ್ಬದ ಮಗ್ಗುಲುಗಳು ಕುಸಿಯದಂತೆ ಬಲಪಡಿಸಿತ್ತು. ಹೀಗೆ ತೀರ ಬುಡದಲ್ಲಿ ಕಟ್ಟಿದ ರಕ್ಷಣೆಯ ಕಲ್ಲುಂಡೆಯೇ ೧೨ ಅಡಿ ದಪ್ಪ. ೨೧ ಅಡಿ ಎತ್ತರ ೬೬೦ ಅಡಿ ಉದ್ದವಾಗಿದೆ. ಅದನ್ನು ಅಲ್ಲಲ್ಲಿ ಸಿಪಾಯಿಗೋಡೆಗಳಿಂದ ಬಲಪಡಿಸಿದ್ದಾರೆ. ಈ ಗೋಡೆಗಳಿಂದಾಗಿ ಮೊದಲು ಜಾವಡಿಯ ಗೋಡೆಗಳಿಗೆ ಹೊದೆಸಿದ ಶಿಲ್ಪಗಳ ಅಸ್ತಿತ್ವ ಯಾರಿಗೂ ತಿಳಿದಿರಲಿಲ್ಲ. ಕಳೆದ ಮಹಾಯುದ್ಧದ ಅವಧಿಯಲ್ಲಿ ಜಾವಾ ದೇಶ ಜಾಪಾನೀಯರ ಕೈವಶವಾದಾಗ ಅವರ ಸೈನಿಕರು ತಮ್ಮ ಕುತೂಹಲ ತಣಿಸಲು. ಒಂದು ಮಗ್ಗುಲ ದಂಡೆಯನ್ನು ಕಿತ್ತುನೋಡಿದಾಗ ಬೆಂಗಡೆಯಲ್ಲಿದ್ದ ಉಬ್ಬುಗೆತ್ತನೆಗಳ ಸಾಲು ಕಾಣಿಸಿತು.

ಇಲ್ಲಿನ ಜಾವಡಿಗಳ ಗೂಡುಗುಂಡಿಗಳಲ್ಲಿ ಸ್ಥಾಪಿಸಿದ ಬೌದ್ಧ ವಿಗ್ರಹಗಳು ಒಂದು ನಿಶ್ಚಿತ ಕ್ರಮದಲ್ಲಿವೆ. ಕೆಳಗಣ ನಾಲ್ಕು ಜಾವಡಿಗಳಲ್ಲಿ ಆ ಕ್ರಮ ಹೀಗಿದೆ. ಪೂರ್ವ ದಿಸೆಯಲ್ಲಿ ಭೂಮಿಸ್ಪರ್ಶ ಮುದ್ರೆಯುಳ್ಳ ಅಕ್ಷೋಭ್ಯನ ಪ್ರತಿಮೆಗಳು ನಾಲ್ಕು ಸಾಲುಗಳಲ್ಲಿವೆ. ಅವುಗಳ ಒಟ್ಟುಸಂಖ್ಯೆ ೯೨.

ದಕ್ಷಿಣದಿಕ್ಕಿನಲ್ಲಿ ವರದ ಮುದ್ರೆಯ ರತ್ನಸಂಭವನ ಪ್ರತಿಮೆಗಳು ೯೨.

ಪಶ್ಚಿಮದಿಕ್ಕಿನಲ್ಲಿ ಧ್ಯಾನಮುದ್ರೆಯುಳ್ಳ ಅಮಿತಬನ ೯೨ ಪ್ರತಿಮೆಗಳಿವೆ.

ಉತ್ತರ ದಿಕ್ಕಿನಲ್ಲಿ ಅಭಯಮುದ್ರೆಯುಳ್ಳ ಅಮೋಘ ಸಿದ್ಧನ ೯೨ ಪ್ರತಿಮೆಗಳಿವೆ.

ಐದನೇ ಜಾವಡಿಯಲ್ಲಿ ನಾಲ್ಕು ದಿಕ್ಕುಗಳಿಂದ ಕೂಡಿ ೬೪ + ೭೨ ವಿಗ್ರಹಗಳಿವೆ. ಅವು ವೈರೋಚನ ಬುದ್ಧನವು. ಬೌದ್ಧಗ್ರಂಥ "ಬೌದ್ಧ ನಿಕಾಯ"ದಲ್ಲಿ ಚಿರಂತನ ಜೀವಿಯಾದ ಬುದ್ಧನನ್ನು 'ವೈರೋಚನ ಬುದ್ಧ' ಎಂದು ಕರೆದಿದ್ದಾರೆ. ಈ ರಚನೆಯನ್ನು ಕುರಿತು ಬೆಂಜಮಿನ್ ರೌಲೆಂಡ ಅವನ್ನು ಕುರಿತು ಹೀಗೆ ಹೇಳಿದ್ದಾನೆ. ವೈರೋಚನ ಬುದ್ಧನನ್ನು ಉಬ್ಬುಗೆತ್ತನೆಗಳಲ್ಲೂ. ದುಂಡು ಶಿಲ್ಪಗಳಲ್ಲೂ ಆತ ಸರ್ವಕಾಲದಲ್ಲೂ ಸರ್ವಸ್ಥಳಗಳಲ್ಲೂ ಮೂರ್ತಿಮತ್ತಾಗಿ ಕಾಣಿಸುವ ತೆರನಲ್ಲಿ. ವಿವಿಧ ರೂಪಗಳಲ್ಲಿ ಪ್ರದರ್ಶಿಸಿದ್ದಾರೆ. ಬೋರೋಬುದುರಿನಲ್ಲಿ ತೋರಿಸಿರುವ ಈ ಬೌದ್ಧ ವಿಗ್ರಹಗಳು ಜಗತ್ತಿನಲ್ಲೇ ಶ್ರೇಷ್ಠವೆನಿಸುವ ಶಿಲ್ಪದ ಮಾದರಿಗಳಾಗಿವೆ. ಈ ಶಿಲ್ಪಗಳು ಮಾನವ ದೇಹದ ಸೊಗಸನ್ನು ಮೀರಿಸಿ ನಿಂತ ಆಧ್ಯಾತ್ಮ ಜೀವಿಗಳಂತೆ ಕಾಣಿಸುತ್ತವೆ. ತೀರ ತುತ್ತುದಿಯ ವೃತ್ತಾಕಾರದ ಅಂಗಣದಲ್ಲಿರುವ ಸ್ತೂಪ ಜೀರ್ಣಗೊಂಡಿದೆ. ಅದರಲ್ಲಿ ಯಾವ ವಿಗ್ರಹವೂ ಇದ್ದಂತಿಲ್ಲ. ಅಲ್ಲಿಯೂ ವೈರೋಚನನ ಪ್ರತಿಮೆಯೇ ಇದ್ದಿರಬೇಕೆಂದು ತರ್ಕಿಸುತ್ತಾರೆ.

ಬುಡದಿಂದ ತುದಿಯ ತನಕ ಏರುವಾಗ ಮಗ್ಗುಲು ಗೋಡೆಗಳಲ್ಲಿ ಕಾಣಿಸುವ ಈ ಉಬ್ಬುಗೆತ್ತನೆಗಳು ಜೇಮ್ಸ್ ಫರ್ಗೂಸನಂತಹ ವಾಸ್ತು ತಜ್ಞನನ್ನು ಬೆರಗುಗೊಳಿಸಿವೆ. ಅವುಗಳು ಸಾಗಿರುವ ಉದ್ದವೇ ೫.೦೦೦ ಅಡಿಗಳಷ್ಟಿದೆ. ಇಕ್ಕಡೆಯ ಈ ಶಿಲ್ಪಗಳ ಸಾಲುಗಳ ಒಟ್ಟು ಉದ್ದ ೧೦,೦೦೦ ಅಡಿ ಆಗುತ್ತದೆ. ಇವಲ್ಲದೆ ಇನ್ನು ಉಳಿದ ಶಿಲ್ಪಗಳನ್ನು ನಾವು ಸಾಲಾಗಿ ಇರಿಸಿದಲ್ಲಿ ಅವುಗಳ ಒಟ್ಟು ಉದ್ದ ಮೂರು ಮೈಲುಗಳಾದೀತು. ಹೀಗೆ ಅಸಂಖ್ಯ ಸ್ತೂಪಗಳಿಂದ ಕೂಡಿದ ಈ ದಿಬ್ಬದಂಥ ದೇಗುಲದಲ್ಲಿ ಇರುವ ಸ್ತೂಪಗಳ ಸಂಖ್ಯೆಯೇ ೭೦ರಷ್ಟಿದೆ. ಈ ಮಹಾಸ್ತೂಪ ಸಮುದಾಯವನ್ನು 'ಒಂದು ಸ್ತೂಪ' ಎಂದು ಕರೆದರೆ ತಪ್ಪಾದೀತು ಎಂದು ಡಾ॥ ಕುಮಾರಸ್ವಾಮಿ ಉದ್ಗರಿಸಿದ್ದಾನೆ.

ಇಲ್ಲಿ ಒಟ್ಟು ೧೧ರಷ್ಟು ಸಮತಲ ಚಾವಡಿಗಳ ಮಗ್ಗುಲು ಗೋಡೆಗಳಲ್ಲಿ ಉಬ್ಬುಗೆತ್ತನೆಯ ಸಾಲುಗಳಿವೆ.

ಮೊದಲನೆಯ ಸಾಲನ್ನು ಕಟ್ಟಿ ಮುಗಿಸಿದಾಗ ಅದು ಕುಸಿದೀತೆಂಬ ಭೀತಿಯಿಂದ. ಅವುಗಳ ಇದಿರಿಗೆ ಕಲ್ದಂಡೆ. ಆ ದಂಡೆಯ ಇದಿರಿಗೆ ಎರಡು ಸಾಲು ಉಬ್ಬುಗೆತ್ತನೆಗಳಿವೆ.

ಎರಡನೆಯ ಚಾವಡಿಯ ಗೋಡೆಯಲ್ಲಿ ಒಂದು ಸಾಲೂ. ಅದರ ಬೆಂಗಡೆಯಲ್ಲಿ ಇನ್ನೊಂದು ಸಾಲು,

ಮೂರನೆಯ ಚಾವಡಿಯ ಹಿಂದೆ. ಮುಂದೆ ೨ ಸಾಲುಗಳಿವೆ.

ನಾಲ್ಕನೆಯ ಚಾವಡಿಯ ಹಿಂದೆ ಮುಂದೆ ೨ ಸಾಲುಗಳಿವೆ. ಇಂಥ ಬಹುದೊಡ್ಡ ಶಿಲ್ಪ ಸಮುದಾಯದಲ್ಲಿ ಯಾವ ವಿಗ್ರಹ ಎಂಥದು ಎಂದು ಗುರುತಿಸುವುದೇ ಕಷ್ಟ. ಅದನ್ನು ಕಟ್ಟಿದ ಬಳಿಕ ಸಂದ ೧೨೦೦ ವರ್ಷಗಳ ಅವಧಿಯಲ್ಲಿ ಮಳೆ, ಬಿಸಿಲು, ಗಾಳಿಗಳ ಹಾವಳಿ ಅಷ್ಟೊಂದು ಕಾಣಿಸಿರಬಹುದಾದರೂ ಅವು ಆ ವಿಗ್ರಹಗಳನ್ನು ಹೆಚ್ಚಾಗಿ ಕೆಡಿಸಿಲ್ಲ. ೧೯೦೭ರಲ್ಲಿ ಬೋರೋಬುದುರವನ್ನು ಪರಿಶೀಲಿಸಿದ ಫೌಜರ್ ಎಂಬಾತ ಅಲ್ಲಿನ ೨.೦೦೦ ಉಬ್ಬುಗೆತ್ತನೆಗಳಲ್ಲಿ ೧.೬೦೦ ಸುಸ್ಥಿತಿಯಲ್ಲಿವೆಯೆಂದು ತಿಳಿಸಿರುತ್ತಾನೆ. ಅವು ಇಂದಿನತನಕ ಹಾಗೆಯೇ ಉಳಿಯುತ್ತಿದ್ದವೇನೋ! ಆದರೆ ಅದರ ಕೆಲವು ಭಾಗ ಭೂಕಂಪದ ದೆಸೆಯಿಂದ ಕೆಡುವಂತಾಯಿತು.

ಇಲ್ಲಿನ ಶಿಲ್ಪಗಳನ್ನು ಕುರಿತು ಹೇಳುವ ಮೊದಲು. ಇವಕ್ಕೂ ಕಾಂಬೋದಿಯದ ಆಂಕೋರ್ ವಾಟಿನಲ್ಲಿಯ ಶಿಲ್ಪಲಕ್ಷಣಗಳಿಗೂ ಇರುವ ಕೆಲವು ಸಾಮ್ಯಗಳನ್ನು ಕುರಿತು ಹೇಳಬಹುದು. ಅವೆಂದರೆ ಈ ಉಬ್ಬುಗೆತ್ತನೆಗಳಲ್ಲಿ ಜನಸಾಮಾನ್ಯರ ನಿತ್ಯ ಜೀವನದ ನೋಟಗಳನ್ನು. ಮನೆಗಳನ್ನು. ಉಡುಗೆ ತೊಡುಗೆಗಳನ್ನು. ಆಭರಣಗಳನ್ನು. ಆಟವಿನೋದಗಳನ್ನು ಚಿತ್ರಿಸುವುದರ ಜೊತೆಗೆ ಪಶುಪಕ್ಷಿಗಳ ಚಿತ್ರಗಳನ್ನು ಕೆತ್ತಿದ್ದಾರೆ. ಜನರಿಗೆ ನೀತಿ ಬೋಧೆ. ಧರ್ಮ ಬೋಧೆ ಮಾಡುವ ಸಲುವಾಗಿ ಸ್ವರ್ಗ', ನರಕಗಳ ಚಿತ್ರಗಳನ್ನೂ ಕೆತ್ತಿದ್ದಾರೆ.

• ಇಲ್ಲಿಗೆ ಬರುವ ಪ್ರವಾಸಿಯು ಸಾಮಾನ್ಯವಾಗಿ ಪೂರ್ವದಿಕ್ಕಿನ ಪ್ರವೇಶದ್ವಾರದಿಂದ ಮೇಲಕ್ಕೇರಿ ಮೊದಲು ಚಾವಡಿಗೆ ಬರುತ್ತಾನೆ. ತನ್ನ ಎಡಮಗ್ಗುಲಲ್ಲಿ ಎರಡು ಸಾಲು ಉಬ್ಬುಗೆತ್ತನೆಗಳನ್ನು ನೋಡುತ್ತಾನೆ. ಅದರ ನಾಲ್ಕು ಮಗ್ಗುಲುಗಳ ಮೇಲಣ ಸಾಲುಗಳಲ್ಲಿ ೧೨೦ರಷ್ಟು ಉಬ್ಬುಗೆತ್ತನೆಗಳಿವೆ. ಅವುಗಳಲ್ಲಿ ಬುದ್ಧನನ್ನು ಕುರಿತು ಐತಿಹಾಸಿಕ ಸಂಸ್ಕೃತಗ್ರಂಥಗಳಲ್ಲಿ ಬರುವ ಅವನ ಜೀವನದ ಚಿತ್ರಗಳಿವೆ; ಅವನ್ನು ಕುರಿತ ಶ್ಲೋಕಗಳೂ ಇವೆ. ಅಂಥ ಗ್ರಂಥಗಳಲ್ಲಿ 'ಲಲಿತ ವಿಸ್ತಾರ' ಒಂದು. ಆದರೆ ಇಲ್ಲಿ ಬುದ್ಧನ ಜನನ. ಮರಣಗಳನ್ನು ಕುರಿತ ಯಾವ ದೃಶ್ಯವೂ ಇಲ್ಲ. ಇಲ್ಲಿನ ದೃಶ್ಯಗಳಲ್ಲಿ ಮುಖ್ಯವಾಗಿ ಕಾಣಿಸುವವು—ತುಷಿತಸ್ವರ್ಗ, ಮಾಯಾದೇವಿಯ ಸ್ವಪ್ನ. ಸ್ವರ್ಗದಿಂದ ಇಳಿಯುವುದು, ವಧುವಿನ ಆಯ್ಕೆ. ದಾಂಪತ್ಯ ಜೀವನದ ದೃಶ್ಯಗಳು. ವೈರಾಗ್ಯ. ಅರಮನೆಯಿಂದ ತೊಲಗುವುದು. ಅರಣ್ಯದಲ್ಲಿ ತಪಸ್ಸು. ವಾರಣಾಸಿಯ ಮೃಗೋದ್ಯಾನದಲ್ಲಿ ಬೋಧಿಸುವುದು. ಈ ಉಬ್ಬುಗೆತ್ತನೆಗಳನ್ನು ಕಾಣುವಾಗ ವಸ್ತು ಮತ್ತು ತಂತ್ರಗಳೆರಡರಲ್ಲೂ ಭಾರತ ದೇಶದ ಪ್ರಭಾವ ಕಾಣಿಸುವುದಿಲ್ಲ. ಇಲ್ಲಿನ ಶಿಲ್ಪಗಳನ್ನು ಕಠಿಣ ಬಂಡೆಯ ತುಂಡುಗಳ ಮೇಲೆ ಕೆತ್ತಿದ್ದರೂ, ಆ ತುಂಡುಗಳನ್ನು ಗಚ್ಚು ಇಲ್ಲದೆ,

ಒಂದಕ್ಕೊಂದು ಜೋಡಿಸಿದ್ದಾರೆ. ಅಲ್ಲಿ, ಇಲ್ಲಿ, ಕೆಲವು ಬಾರಿ ಶಿಲ್ಪಿ ಅಷ್ಟು ಚತುರನಲ್ಲ ಎಂಬ ಭಾವನೆ ಬರಬಹುದು. ಇನ್ನು ಕೆಲವೊಂದು ಉಬ್ಬುಗೆತ್ತನೆಗಳಲ್ಲಿ, ಉದಾಹರಣೆಗಾಗಿ ಅರಮನೆಯ ನಾರಿಯರು ಮಲಗಿಕೊಂಡಿರುವ ದೃಶ್ಯಗಳಲ್ಲಿ, ಅವರ ಮೈಯಿಂದ ಬಟ್ಟೆ ಜಾರಿದ್ದನ್ನು ತೋರಿಸಿದ್ದರೂ, ಯಾವೊಂದು ಅಶ್ಲೀಲ ಭಾವನೆಗೂ ಎಡೆಗೊಡದ ರೀತಿಯಲ್ಲಿ ಕೆತ್ತಿರುವುದನ್ನು ಕಾಣುತ್ತೇವೆ.

ಇಲ್ಲಿನ ಉಬ್ಬುಗೆತ್ತನೆಗಳಲ್ಲಿ ಚಿತ್ರಿತವಾಗಿರುವ ದೃಶ್ಯಗಳಿಗೆ ಯಾವ ಲಿಖಿತ ಸಾಹಿತ್ಯದ ಆಧಾರ ಇದೆ ಎಂಬುದನ್ನು ನಿನ್ನೆ ಮೊನ್ನೆಯ ತನಕವೂ ಸಂಪೂರ್ಣವಾಗಿ ಕಂಡುಹಿಡಿಯಲು ಬಂದಿಲ್ಲ. ಕೆಲವು ದೃಶ್ಯಗಳ ಮೂಲ ಏನೆಂದೇ ತಿಳಿಯುವುದಿಲ್ಲ. ಇಲ್ಲಿನ ಉಬ್ಬುಗೆತ್ತನೆಗಳ ಸಾಲುಗಳಲ್ಲಿ ಮೊದಲನೆಯ ದರಲ್ಲಿ ಬುದ್ಧನ ಕಾರ್ಯಗಳನ್ನು ವಿವರಿಸುವ 'ದಿವ್ಯಾವಧಾನ'ದಂತ ಕತೆಗಳ ಚಿತ್ರಣವಿದೆ. ಅದೇ ರೀತಿ ಅವನ ಪೂರ್ವ ಜನ್ಮವನ್ನು ಸೂಚಿಸುವ ಜಾತಕದ ಕತೆಗಳೂ ಇವೆ. ಅಂಥವುಗಳಲ್ಲಿ ೧. "ಸೂದನಕುಮಾರಾವಧಾನ"; ೨. ಮಾಂಧಾತ್ರಾವಧಾನ; ೩. ಶಿಬಿ ಜಾತಕ; ೪. ರುದ್ರಾಯಣಾವಧಾನ; ೫. ಕುಮಾರಿ ಜಾತಕ; ೬. ಭಲ್ಲಾತಿಯ ಜಾತಕ; ೭. ಮೈತ್ರಕನ್ಯಕಾವಧಾನ ಎಂಬವು ಮುಖ್ಯವಾಗಿವೆ.

ಅವುಗಳಲ್ಲಿ ಕಲಾವಿಮರ್ಶಕರನ್ನು ವಿಶೇಷವಾಗಿ ಆಕರ್ಷಿಸಿದ ಸೂದನಕುಮಾರಾವಧಾನದ ದೃಶ್ಯ ಬಲು ಪ್ರಸಿದ್ಧವಾಗಿದೆ. ಅವನ್ನು ನೋಡಿದ ಇ. ಬಿ. ಹಾವೆಲ್ ಆನಂದದಿಂದ 'ಈ ದೃಶ್ಯ ಎಷ್ಟೊಂದು ಜೀವಂತವೂ ಆಕರ್ಷಕವೂ ಆಗಿದೆ ಎಂಬುದಕ್ಕಿಲ್ಲಿ. ಅಲ್ಲಿನ ನಾರಿಯರ ಪಾವಿತ್ರ್ಯ, ಲಾಲಿತ್ಯ, ಸೊಬಗುಗಳನ್ನು ಬಣ್ಣಿಸಲಸದಳ. ಅವುಗಳಲ್ಲಿ ಭಾರತದೇಶದ ಪ್ರಾತಃಕಾಲದ ಬೆಳಕು, ಪಕ್ಷಿಗಳ ಇಂಚರ, ಹಾರಾಟ ಮೊದಲಾದುವನ್ನು ಕಾಣುತ್ತೇವೆ. ಇಲ್ಲಿನ ಪ್ರತಿಯೊಂದು ಆಕೃತಿಯೂ ಲಾಲಿತ್ಯ, ಗಾಂಭೀರ್ಯಗಳಿಂದ ತುಂಬಿದೆ. ಯಾವಲ್ಲಿಯೂ ಅವನ್ನು ಕೆತ್ತಿದ ಶಿಲ್ಪಿ ತನ್ನ ಚಮತ್ಕಾರವನ್ನು ತೋರಿಸುವುದಕ್ಕೆ ಹೋಗಿಲ್ಲ; ಉದ್ದೇಶಪಟ್ಟು ಅಲ್ಲಿನ ಆಕೃತಿಗಳನ್ನು ಕೆತ್ತಿ ಸೇರಿಸಿದಂತೆಯೂ ಕಾಣಿಸುವುದಿಲ್ಲ' ಎಂದಿದ್ದಾನೆ.

ಆದರೆ ಮೇಲಿನ ಸಾಲುಗಳಲ್ಲಿರುವ ಶಿಲ್ಪಗಳ ವಸ್ತುವನ್ನು ವಿದ್ವಾಂಸರಿಗೂ ಗುರುತಿಸಲು ಬಂದಿಲ್ಲ. ಅವನ್ನು ಕಂಡ ಮಜುಂದಾರರು "ಸರಿಯಾದ ಸಾಹಿತ್ಯ ಮೂಲವನ್ನು ತಿಳಿಯದೆ ಇವು ಏನೆಂದೇ ಹೇಳಲು ಬರುವುದಿಲ್ಲ" ಎಂದಿದ್ದಾರೆ. ಅವುಗಳ ಕತೆ ತಿಳಿಯುವುದಿಲ್ಲವೆಂಬುದರಿಂದ ಆ ಶಿಲ್ಪಗಳನ್ನು ಮೆಚ್ಚುವುದು ಕಷ್ಟವೆಂದಲ್ಲ. ಇಲ್ಲಿನ ಅತ್ಯಂತ ಕೆಳಗಿನ ಗೋಡೆಗಳಲ್ಲಿ ಬರುವ ಹೊರಮುಗ್ಗುಲ ಉಬ್ಬುಗೆತ್ತನೆಗಳಲ್ಲಿ ೧೬೦ರಷ್ಟು ದೃಶ್ಯಗಳು "ಕರ್ಮ ವಿಭಾಗ" ಎಂಬ ಗ್ರಂಥದ ಚಿತ್ರಣಗಳು ಎಂದು ಸಿಲ್ವನ್ ಲೇವಿ ಹೇಳುತ್ತಾರೆ. ಆ ಶಿಲ್ಪಗಳ ಕೆಳಗೆ ಅಂಕಿಸಿರುವ ಕಾಲವನ್ನು ಕುರಿತು ಬರೆದ ಲಿಪಿಯ ಲಕ್ಷಣಗಳಿಂದ ಅದು ಮೂರನೆಯ ಶತಮಾನದ ಎರಡನೆಯ ಪಾದದ್ದು ಎಂದು ಕ್ರೋಮ್ ತಿಳಿಸುತ್ತಾನೆ.

ಮೆಂದೂರ ದೇಗುಲ ಮತ್ತು ಪಾವನ್

ಬೋರೋಬುದುರಿನಿಂದ ಎರಡು ಮೈಲು ದೂರದಲ್ಲಿ ಮಧ್ಯಮ ಗಾತ್ರದ ಚಂಡಿ ಮೆಂದೂತ್ ಎಂಬ ದೇಗುಲವಿದೆ. ದಿಯೆಂಗದ ವಾಸ್ತುಗಳಂತೆ ಇದನ್ನು ಎತ್ತರದ ಅಸ್ತಿವಾರದ ಮೇಲೆ ನಿರ್ಮಿಸಿದ್ದಾರೆ. ಅದಕ್ಕಿರುವ ಒಂದೇ ಗರ್ಭಗುಡಿಯಲ್ಲಿ ಮೂರು ಭವ್ಯ ವಿಗ್ರಹಗಳನ್ನಿರಿಸಿದ್ದಾರೆ. ನಡುವೆ ಇರುವ ವಿಗ್ರಹ ಬುದ್ಧನದು; ಆಚೀಚಿನವು ಬೋಧಿಸತ್ವರವು. ಅವನ ಕಾಲಿನ ಬುಡದಲ್ಲಿ ೨ ಜಿಂಕೆಗಳೂ, ಧರ್ಮಚಕ್ರವೂ ಕೊರೆಯಲ್ಪಟ್ಟಿದೆ. ಈ ಮೂರು ವಿಗ್ರಹಗಳ ಗಂಭೀರ ಮುಖಚರ್ಯೆ ಜಾವಾನೀ ಶಿಲ್ಪದ ಉನ್ನತ ಮಟ್ಟವನ್ನು ತೋರಿಸುತ್ತವೆ. ಮಧ್ಯದಲ್ಲಿರುವ ಬುದ್ಧನ ವಿಗ್ರಹ ಭಾರತದ ಯಾವ ಶ್ರೇಷ್ಠ ಶಿಲ್ಪಕ್ಕೂ ಕಡಿಮೆಯಾಗಿಲ್ಲ. ಆ ಮೂರನ್ನು ಕುರಿತು ಹೇಳುತ್ತ ಫೋಗೆಲ್ "ಈ ಮೂರು ಮಹಾಕೃತಿಗಳು ಬೌದ್ಧ ಶಿಲ್ಪದ ಅತ್ಯಂತ ಉತ್ಕೃಷ್ಟ ಉದಾಹರಣೆಗಳು" ಎಂದಿದ್ದಾನೆ.

ಚಂಡಿ ಮೆಂದೂತ್ ದೇವಾಲಯಕ್ಕೆ ಸಮೀಪದಲ್ಲಿ, ಅದೇ ಮಾದರಿಯ ಎತ್ತರದ ಪಂಚಾಂಗದ ಮೇಲೆ ಕಟ್ಟಿದ ಪಾವನ್ ದೇಗುಲವಿದೆ. ಅದು ಬೋರೋಬುದರ ವಾಸ್ತು ಶೈಲಿಯದು. ಬೋರೋಬುದುರಿನ ಒಂದು ಚಿಕ್ಕ ಪ್ರಮಾಣದ ಮಾದರಿಯಂತೆ ಕಾಣಿಸುತ್ತಿದ್ದು, ಕೆಳಗಿನ ಹಂತಗಳಲ್ಲಿ ಘಂಟೆಯ

ಆಕಾರದ ಸ್ತೂಪಗಳೂ, ಕುಡಿಯಲ್ಲಿ ದೊಡ್ಡ ಘಂಟೆಯಂತಿರುವ ಸ್ತೂಪವೂ ಇವೆ. ಈ ಸ್ತೂಪಗಳು, ಕೂಡ ಬೋರೋಬುದುರ ಶೈಲಿಯವು.

ಚಂಡಿಕಲಸನ್

ತಾರಾ ದೇವಿಗೆ ಅರ್ಪಿತವಾದ ಈ ದೇಗುಲವನ್ನು ಪಂಚಪನ ದೊರೆ ತನ್ನ ಮಡದಿಯ ಹೆಸರಿನಲ್ಲಿ ಕಟ್ಟಿಸಿದ. ಇದು ಪ್ರಾಂಬನನ್ ಕಣಿವೆಯಲ್ಲಿ ನಿರ್ಮಿಸಿದ ದೇಗುಲಗಳ ಸಮುದಾಯದಲ್ಲಿ ಪ್ರಥಮ ಬೌದ್ಧ ದೇವಾಲಯ. ಇಲ್ಲಿ ಒಟ್ಟು ೩೦ ದೇಗುಲಗಳಿವೆ. ಅವು ಬೇರೆ ಬೇರೆ ಕಾಲದವು; ಶೈಲಿಯವು; ಮತ್ತು ಹಿಂದೂ ಮತ್ತು ಬೌದ್ಧ ಧರ್ಮಕ್ಕೆ ಸೇರಿದುವು. ಡಿಯೆಂಗ್ ದೇಗುಲಗಳಂತೆ ಅವೆಲ್ಲ ಸರಳ ಮಾದರಿಗಳವು. ಜಾವಾದ ಆದಿಯುಗದ ದೇಗುಲಗಳಿಗೂ ನಡುವಣ ಶೈಲಿಯವು. ಇಲ್ಲಿನ ದೇಗುಲಗಳ ಆಚೀಚಿನ ಮಗ್ಗುಲುಗಳಲ್ಲಿ ಕಿರುಮಂಟಪಗಳಂತೆ ಮುಂದೆ ಚಾಚಿಕೊಂಡ. ಆದರೂ ಮುಖ್ಯ ಗುಡಿಗೆ ಹೊಂದಿದ ಅಂಗಗಳಿವೆ. ಅವಕ್ಕೆ ಬೇರೆಯೇ ಬಾಗಿಲುಗಳಿವೆ. ಅವುಗಳ ಗೋಡೆಗಳ ಮೇಲೆ ಮುಂಬರಿಕೆಗಳ ನಡುವೆ. ಬೇಕಷ್ಟು ಅಲಂಕಾರಿಕ ಕೆತ್ತನೆಗಳಿವೆ. ಕಲಸನ್ ದೇಗುಲದ ಉತ್ತರ ಭಾಗದಲ್ಲಿ ಮಹಡಿಯುಳ್ಳ ಚಂಡಿ ಎಂಬ ಒಂದು ದೇಗುಲವಿದೆ.

ಚಂಡಿಸವು ಮತ್ತು ಪ್ಲಾವೋಸನ್ ದೇಗುಲಗಳು

ಈ ಕಲಸನ್ ದೇಗುಲ ಸಮುದಾಯದ ಸಮೀಪದಲ್ಲಿ ಒಂದು ದೊಡ್ಡ ಕೇಂದ್ರ ದೇಗುಲವಿದ್ದು. ಅದರ ಸುತ್ತಲೂ ಹಲವು ಕಿರು ದೇಗುಲಗಳಿವೆ. ಈ ಒಟ್ಟು ಗುಂಪಿಗೆ ಚಂಡಿಸವು, ಅಥವಾ ಸಾವಿರ ದೇಗುಲಗಳೆಂದು ಕರೆಯುತ್ತಾರೆ. ದೊಡ್ಡ ಒಂದು ಪ್ರಾಕಾರದ ನಡುವೆ ಆ ಕೇಂದ್ರ ದೇಗುಲವಿದ್ದು, ಅದರ ಸುತ್ತಲು ೪೦ ಕಿರು ದೇಗುಲಗಳಿವೆ. ಭಾರತದಲ್ಲಿ ಇದಕ್ಕೆ ಹೋಲಿಸುವ ಒಂದು ರಚನೆ ಇದ್ದರೆ ಅದು ಪಲ್ಲವ ದೊರೆ ಇಮ್ಮಡಿ ನರಸಿಂಹವರ್ಮ ಕಟ್ಟಿಸಿದ ಕಾಂಚೀಪುರದ ಕೈಲಾಸನಾಥ ದೇವಾಲಯದ ಗುಂಪು. ಆತನೇ ಮಹಾಬಲಿಪುರದ ೭ನೇ ಶತಮಾನದ ದೇಗುಲವನ್ನು ಕಟ್ಟಿಸಿದವ. ಕಾಂಚಿಯ ಕೈಲಾಸನಾಥ ದೇವಾಲಯದ ಸುತ್ತಲೂ ಸ್ವತಂತ್ರ ಶಿಖರಗಳುಳ್ಳ, ಒಂದೊಂದೇ ಕೋಣೆಯ ೫೮ ಕಿರುದೇಗುಲಗಳನ್ನು ಕಾಣುತ್ತೇವೆ. ಈ ಕಿರು ದೇವಾಲಯಗಳು ಪ್ರಧಾನ ದೇವಾಲಯದ ನಾಲ್ಕು ಮಗ್ಗುಲುಗಳಲ್ಲಿ ಸಾಲಾಗಿವೆ. ಆದರೆ ಚಂಡಿ ಸವು ದೇವಾಲಯಗಳು ಮುಖ್ಯ ದೇವಾಲಯದ ನಾಲ್ಕು ಸುತ್ತಲೂ, ನಾಲ್ಕು ನಾಲ್ಕು ಸಾಲುಗಳಲ್ಲಿ ಕಟ್ಟಲ್ಪಟ್ಟಿವೆ. ಈ ದೇಗುಲದ ಹೊರ ಮೈಯ್ಯಲ್ಲೆಲ್ಲ ಅಲಂಕಾರವಿದೆ. ಮುಖ್ಯ ದೇವಾಲಯದ ಹೊರಗೋಡೆಗಳು. ಬಾಗಿಲುಗಳು, ಅಲಂಕಾರಿಕ ಸುಂದರ ದೃಶ್ಯಗಳಿಂದಲೂ, ಮನುಷ್ಯ. ಪಕ್ಷಿ. ಹೂವು ಮೊದಲಾದುವುಗಳ ಕೆತ್ತನೆಗಳಿಂದಲೂ ತುಂಬಿ ಇಲ್ಲಿನ ಮುಖ್ಯ ದೇವಾಲಯದಲ್ಲೂ, ಹೆಚ್ಚಿನ ಕಿರು ದೇವಾಲಯಗಳಲ್ಲೂ. ಗರ್ಭಗುಡಿಗಳಲ್ಲಿ ಮೂರ್ತಿಗಳು ಉಳಿದಿಲ್ಲ.

ಈ ಪ್ರದೇಶದಿಂದ ಒಂದು ಮೈಲು ದೂರದಲ್ಲಿ. ಚಂಡಿ ಪ್ಲಾವುಸಾನ್ ದೇಗುಲವಿದೆ. ಇದು ಒಂದು ವಿಶಾಲ ಪ್ರಾಕಾರದೊಳಗಿದ್ದು. ನಡುವೆ ಮೂರು ಮೂರು ಕೋಣೆಗಳುಳ್ಳ ಎರಡು ದೇಗುಲಗಳಿವೆ. ಜಾವಾದ ವಾಸ್ತುಪ್ರಿಯರಿಗೆ ಕಿರುದೇಗುಲಗಳನ್ನು ಕಟ್ಟುವ ಹುಚ್ಚು ಬಹಳ ಎಂಬಂತೆ ಕಾಣಿಸುತ್ತದೆ. ಸವುವಿನಲ್ಲಿ ೨೪೦ ರಷ್ಟು ಕಿರುದೇಗುಲಗಳಿದ್ದರೆ. ಇಲ್ಲಿ ೧೨ ಸಾಲುಗಳಲ್ಲಿ ಬಿಟ್ಟು ೩೨೮ ಕಿರು ದೇಗುಲಗಳಿವೆ. ಇಲ್ಲಿನ ಧ್ಯಾನೀ ಬುದ್ಧ ವಿಗ್ರಹದಲ್ಲಿ ಅವನ ಮುಖದಲ್ಲಿ ಕಾಣಿಸುವ ಶಾಂತಿ ಪ್ರಸನ್ನತೆಗಳು ತುಂಬ ಮೋಹಕವಾಗಿವೆ.

ಉತ್ತರ ಬೌದ್ಧಯುಗ–ಪ್ರಾಂಬನನ್ ಗುಂಪು

ಮಧ್ಯ ಜಾವಾದಲ್ಲಿ ಬೌದ್ಧರು ಎಲ್ಲಿ ಆಕರ್ಷಿತರಾಗಿ ಸವು ಮತ್ತು ಪ್ಲಾವುಸನ್ ದೇಗುಲಗಳನ್ನು ಕಟ್ಟಿದರೋ ಅದೇ ಸ್ಥಳ ಹಿಂದೂ ಧರ್ಮೀಯರನ್ನು ಆಕರ್ಷಿಸಿತು. ಅವನ್ನು ಕಟ್ಟಿದ ಕಾಲದಲ್ಲಿ ಈ ವಿಶಾಲ ಕಣಿವೆ

ಅದರ ಸುತ್ತಣ ನೋಟ. ಕಾಂಬೋಡಿಯದ ಅಂಕೋರ್ ದೇವಾಲಯಗಳ ಬೆಡಗನ್ನೇ ಪ್ರದರ್ಶಿಸುತ್ತಿದ್ದಿರಬೇಕು. ಆದರೆ ಇವು ಪೂರ್ಣಗೊಳ್ಳಲಿಲ್ಲ. ಯಾವುದೋ ಒಂದು ನೈಸರ್ಗಿಕ ಅಪಘಾತದಿಂದಾಗಿ ಇಲ್ಲಿನ ದೇಗುಲಗಳ ರಚನೆ ಅರ್ಧದಲ್ಲಿಯೇ ನಿಂತುಹೋಯಿತು. ಪ್ರಾಯಶಃ ಮಹಾಬಲಿಪುರದಲ್ಲೂ ಬಂಡೆಗಳನ್ನು ಕೊರೆದು ವಾಸ್ತುಗಳನ್ನು ನಿರ್ಮಿಸುವ ಕೆಲಸ ಅಪೂರ್ಣವಾಗುವುದಕ್ಕೆ ಅಂಥದೇ ನೈಸರ್ಗಿಕ ಆಪತ್ತು ಕಾರಣವಾಗಿರಬಹುದು. ಇಲ್ಲಿ ಕಿರುದೇಗುಲಗಳನ್ನು ಕಟ್ಟುವ ಹುಚ್ಚು ವಿಪರೀತವಾಗಿ ಕಾಣಿಸುತ್ತದೆ. ಪ್ರಾಂಬನನ್‌ನಲ್ಲಿ ಎಂಟು ಪ್ರಧಾನ ದೇಗುಲಗಳಿದ್ದರೆ. ಅವುಗಳ ಜತೆಗೆ ೧೫೬ ಕಿರು ದೇಗುಲಗಳಿವೆ. ಅವನ್ನು ಕ್ರಿ. ಶ. ೯೧೫ರಲ್ಲಿ ಆಳುತ್ತಿದ್ದ ದಕ್ಷನೆಂಬ ದೊರೆ ಕಟ್ಟಿಸ ತೊಡಗಿದ. ಆ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧ ಮತ್ತು ಹಿಂದೂ ಧರ್ಮಗಳೆರಡೂ ರೂಢಿಯಲ್ಲಿದ್ದವು.

ಇಲ್ಲಿನ ಎಂಟು ದೊಡ್ಡ ದೇಗುಲಗಳನ್ನು ಎರಡು ಸಾಲುಗಳಾಗಿ ಉನ್ನತ ವೇದಿಕೆಗಳ ಮೇಲೆ ಕಟ್ಟಿದ್ದಾರೆ. ಈ ಸಣ್ಣ. ದೊಡ್ಡ ದೇಗುಲಗಳ ಗೋಡೆಗಳಲ್ಲೂ ವೇದಿಕೆಗಳ ಮಗ್ಗುಲುಗಳಲ್ಲೂ. ಬಾಗಿಲು. ಹೊಸ್ತಿಲು ಮೊದಲಾದುವುಗಳಲ್ಲೂ ಎಷ್ಟು ಬೇಕೋ ಅಷ್ಟು ಶಿಲ್ಪಗಳಿವೆ. ಈ ದೇಗುಲಗಳು ಬ್ರಹ್ಮ. ವಿಷ್ಣು ಮತ್ತು ಶಿವರಿಗೆ ಸಲುವಂಥವು. ಶಿವ ದೇವಾಲಯದಲ್ಲಿ ಮನುಷ್ಯರೂಪೀ ಶಿವನ ವಿಗ್ರಹವಿದೆ ಹೊರತು ಲಿಂಗವಿಲ್ಲ. ಇಲ್ಲಿನ ಈ ದೇಗುಲ ಸಮುದಾಯವನ್ನು 'ಲೋಂಗ್‌ರುಂಗ್' ಸಮುದಾಯ ಎಂದು ಕರೆಯುತ್ತಾರೆ. ನಿಜಕ್ಕೂ ಈ ಹೆಸರು ಇಲ್ಲಿನ ದುರ್ಗಾದೇವಿ ಗುಡಿಯೊಂದಕ್ಕೆ ಸಲ್ಲತಕ್ಕದು. ಲೋಂಗ್‌ರುಂಗ್ ಅಂದರೆ 'ಶಿಲೆಯಾದ ರಾಣಿ' ಎಂದರ್ಥ. ಸ್ಥಳೀಕ ಕತೆಯಂತೆ—ಅಂಥ ಒಬ್ಬಳು ರಾಣಿಯನ್ನು ಒಲಿಸಲು ಬಂದ ಒಬ್ಬ ಸಾಹಸಿ ಒಂದೇ ರಾತ್ರಿಯಲ್ಲಿ ಉಳಿದೆಲ್ಲ ದೇಗುಲಗಳನ್ನು ಕಟ್ಟಿದನಂತೆ. ಜಾವಾನೀ ಶೈವ ಧರ್ಮದಲ್ಲಿ ಸಂಕುಚಿತ ಮನೋಭಾವವಿರಲಿಲ್ಲ. ಶಿವ ದೇವಾಲಯದ ಶಿಲ್ಪಗಳಲ್ಲಿ ಬೇಕಷ್ಟು ವಿಷ್ಣು ಅವತಾರದ ಶಿಲ್ಪಗಳೂ ಇವೆ. ಇಲ್ಲಿ ರಾಮ ಒಬ್ಬ ವೀರನಂತೆ ಚಿತ್ರಿತನಾಗಿದ್ದಾನೆ. ಈ ಕಾರಣದಿಂದಲೇ ಪ್ರಾಂಬನನ್ ರಾಮಾಯಣದ ಉಬ್ಬುಗೆತ್ತನೆಗಳನ್ನು ಕುರಿತು ಹೇಳುತ್ತ ಕುಮಾರಸ್ವಾಮಿಯವರು "ಈ ಶಿಲ್ಪಗಳು ಬೋರೋಬುದುರ ಶಿಲ್ಪಗಳಿಗಿಂತ ಶ್ರೇಷ್ಠವಾಗಿವೆ. ಮಾತ್ರವಲ್ಲ ಇನ್ನಷ್ಟು ಭಾವಭರಿತವಾಗಿವೆ. ಈ ದೇಗುಲಗಳ ಒಳಮಗ್ಗುಲ ಕೀಳ ದಳಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಉಬ್ಬುಗೆತ್ತನೆಗಳಿವೆ. ಶಿವ ಮತ್ತು ಬ್ರಹ್ಮ ದೇಗುಲಗಳಲ್ಲಿ ರಾಮನ ಕಥಾನಕದ ದೃಶ್ಯಗಳಿದ್ದರೆ ವಿಷ್ಣು ದೇಗುಲದಲ್ಲಿ ಕೃಷ್ಣ ಕಥಾನಕದ ದೃಶ್ಯಗಳಿವೆ. ರಾಮನನ್ನು ಕುರಿತ ಉಬ್ಬುಗೆತ್ತನೆಗಳ ಸಂಖ್ಯೆ ೪೨ರಷ್ಟು ಇದ್ದು. ರಾಮ ಲಂಕೆಗೆ ಬರುವ ತನಕವೂ ರಾಮಾಯಣದ ಕತೆ ಸಾಗುತ್ತದೆ. ಬ್ರಹ್ಮ ದೇಗುಲದಲ್ಲಿ ಅಲ್ಲಲ್ಲಿ ಇರುವ ಉಬ್ಬುಗೆತ್ತನೆಗಳಲ್ಲಿ ಸೀತಾ ಪರಿತ್ಯಾಗದ ಕತೆಗಳೂ. ಲವಕುಶರ ಚಿತ್ರಗಳೂ ಬರುತ್ತವೆ. ಅಷ್ಟೊಂದು ವಿವರಗಳು ಕೃಷ್ಣನನ್ನು ಕುರಿತು ವಿಷ್ಣು ದೇಗುಲದಲ್ಲಿ ಬಂದಿಲ್ಲ.

ರಾಮಾಯಣದ ಉಬ್ಬುಗೆತ್ತನೆಗಳಿಗೆ ಆಧಾರವಾದಂತಹ ಸಾಹಿತ್ಯಾಂಶಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಉದಾಹರಣೆಗೆ–ವಿಷ್ಣು ಇರುವಲ್ಲಿಗೆ ದೇವತೆಗಳೂ. ಋಷಿಗಳೂ ಬರುವ ದೃಶ್ಯ. ಇದು ಕಾಳಿದಾಸನ ರಘುವಂಶದಲ್ಲಿ ಬರೆದ ಸಾಹಿತ್ಯವನ್ನು ಅವಲಂಬಿಸಿದೆ. ಫೋಗೆಲ್ ಒಂದು ಮಾತನ್ನು ಹೇಳುತ್ತಾನೆ: 'ಜಾವಾನೀ ಶಿಲ್ಪಿಗಳಿಗೆ ಜನಪ್ರಿಯವಾದ ಈ ಕತೆಗಳೆಲ್ಲವೂ ಗೊತ್ತಿತ್ತು. ಅವರು ಕಲ್ಪನೆಯಿಂದಲೇ ಅವನ್ನೆಲ್ಲ ಕೆತ್ತಬಹುದಿತ್ತು. ಆದರೆ ಹಾಗೆ ಮಾಡದೆ ಲಿಖಿತ ಸಾಹಿತ್ಯವನ್ನೇಕೆ ಅನುಸರಿಸಿ ಚಿತ್ರಿಸುತ್ತ ಹೋದರು? ಇಲ್ಲಿನ ಶಿಲ್ಪಗಳನ್ನು ಕಂಡಾಗ ಆ ಪ್ರಶ್ನೆಗೆ ಉತ್ತರ ಸಿಗುತ್ತದೆ. ಪ್ರಾಂಬನನ್ ಶಿಲ್ಪಗಳಲ್ಲಿ ಬರುವ ಭಾವಾಭಿವ್ಯಕ್ತಿ. ದೃಶ್ಯದ ಸೂಕ್ಷ್ಮವಿವರಗಳು. ಓಜಸ್ಸು. ಸಾಹಿತ್ಯ ಜ್ಞಾನದಿಂದಲೇ ಬಂದದ್ದೆಂಬುದು ಗೊತ್ತಾಗುತ್ತದೆ.

ಸ್ಟಟರ್ ಹೈಮ್ ರಾಮಾಯಣದ ಉಬ್ಬು ಶಿಲ್ಪಗಳನ್ನು ಕುರಿತು ಬರೆದ ಗ್ರಂಥದಲ್ಲಿ ಅನೇಕ ಸುಂದರ ಫೋಟೋಗಳನ್ನು ಒದಗಿಸಿದ್ದಾನೆ. ಉದಾಹರಣೆಗೆ. ಅನಂತ ಶಾಯಿ ವಿಷ್ಣು ದೇವತೆಗಳ ಮತ್ತು ಋಷಿಗಳ ಮಧ್ಯದಲ್ಲಿ ವಿರಮಿಸಿದ ದೃಶ್ಯ. ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಕರೆದುಕೊಂಡು ಹೋಗಲು ದಶರಥನನ್ನು ಭೇಟಿಯಾಗುವ ದೃಶ್ಯ: ರಾಮ ತಾಟಕನನ್ನು ಕೊಲ್ಲುವುದು: ಸುಬಾಹುವನ್ನು ಸಂಹರಿಸುವುದು. ಮಾರೀಚನನ್ನು ಕೊಲ್ಲುವುದು. ಜನಕನ ಅರಮನೆಯಲ್ಲಿ ರಾಮಲಕ್ಷ್ಮಣರು ಮತ್ತು ವಿಶ್ವಾ

ಮಿತ್ರರು. ಸೀತಾ ಸ್ವಯಂವರದಲ್ಲಿ ಧನುರ್ಭಂಗ ಮಾಡುವ ರಾಮ. ರಾಮಲಕ್ಷ್ಮಣರು ಅಯೋಧ್ಯೆಯನ್ನು ತ್ಯಜಿಸುವುದು. ದಶರಥನ ಮರಣ. ರಾಮ ಭರತರ ಭೇಟಿ. ರಾಮ ವಿರಾಧನನ್ನು ಕೊಲ್ಲುವುದು. ಶೂರ್ಪನಖಿ ರಾಮಲಕ್ಷ್ಮಣರನ್ನು ಸಮೀಪಿಸುವುದು. ಸುವರ್ಣ ಮೃಗದ ಬೇಟೆ. ಸೀತಾಪಹರಣ ಜಟಾಯು ರಾವಣರ ಯುದ್ಧ. ಹೊಟ್ಟೆಯಲ್ಲಿ ಶಿರವಿರುವ ಕಬಂಧ, ರಾಮನ ಮುಂದೆ ಶಬರಿ. ಸಪ್ತ ತಾಳಗಳಿಗೆ ಬಾಣ ಬಿಡುತ್ತಿರುವ ರಾಮ, ವಾಲಿಸುಗ್ರೀವರ ಕಾಳಗ, ಸೀತಾನ್ವೇಷಣೆ, ಅಶೋಕವನದಲ್ಲಿ ಹನುಮ ಸೀತೆಯನ್ನು ಸಂಧಿಸುವುದು. ರಾಮನ ಮುಂದೆ ವರುಣ. ಸೇತುಬಂಧನ. ಲಂಕೆಗೆ ರಾಮನ ಆಗಮನ. ರಾವಣನ ಆಸ್ಥಾನದಲ್ಲಿ ವಿಭೀಷಣ. ಮತ್ತು ಕುಂಭಕರ್ಣನೊಡನೆ ಯುದ್ಧ' ಇವೇ ಮೊದಲಾದವು.

ಫೊಗೆಲ್ ಈ ಎಲ್ಲ ದೃಶ್ಯಗಳನ್ನು ಕಂಡು. "ಭಾರತೀಯರಿಗೆ ಪ್ರಿಯವಾದ ಇಂಥ ಒಂದು ಕಥಾನಕವನ್ನು ತಮ್ಮ ದೇಶದಲ್ಲೀ ಭಾರತೀಯರು ಕೆತ್ತಿದ್ದಕ್ಕಿಂತಲೂ ಚೆನ್ನಾಗಿ ಜಾವಾದಲ್ಲಿ ಅಲ್ಲಿನವರು ಕೆತ್ತಿದ್ದಾರೆ ಎಂಬ ಸಂಗತಿ ಎಷ್ಟು ವಿಚಿತ್ರ!" ಎಂದಿದ್ದಾನೆ. "ಈ ಶಿಲ್ಪಗಳನ್ನು ನಾವು ವಿಜಯನಗರದ ಹಜಾರ ರಾಮಸ್ವಾಮಿ ದೇಗುಲದಲ್ಲಿ ಕೆತ್ತಿದ. ಮತ್ತು ವಿನ್ಸೆಂಟ್‌ಸ್ಮಿತ್ ಹೊಗಳಿದ. ಉಬ್ಬುಗೆತ್ತನೆಗಳೊಡನೆ ಹೋಲಿಸಿದಾಗ ಜಾವಾನೀ ಶಿಲ್ಪಿಗಳು ಕೆತ್ತಿದ ಆ ಭವ್ಯ ಶಿಲ್ಪಗಳ ಮುಂದೆ ವಿಜಯನಗರದ ಶಿಲ್ಪಗಳು ಶೀರ ಸಪ್ಪೆ ಮತ್ತು ಮಕ್ಕಳಾಟಿಕೆಯವು" ಎಂಬ ಅಭಿಪ್ರಾಯ ಪಟ್ಟಿದ್ದಾನೆ.

"ಜಾವ ಶಬ್ದದ ವ್ಯುತ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಯವ ಎಂಬ ಧಾನ್ಯವನ್ನು ಸೂಚಿಸುವ ಸಂಸ್ಕೃತ ಶಬ್ದದಿಂದಲೋ ಪಾಲಿನೇಷ್ಯನ್ ಸ್ಥಳನಾಮಗಳಾದ ಹವ ಮತ್ತು ಸವ ಎಂಬ ಶಬ್ದಗಳಿಂದಲೋ ಅರೇಬಿಯ ಮತ್ತಿತರ ವಿದೇಶೀ ರಾಷ್ಟ್ರಗಳನ್ನೂ ಹಾಗೂ ವೇಗವಾಗಿ ಗಮಿಸುವ ಕುದುರೆಯನ್ನೂ ಸೂಚಿಸುವ ಜವನ್ನಾ ಅಥವಾ ಯವನ ಶಬ್ದದಿಂದಲೋ ಜಾವ ಶಬ್ದರೂಪದಳೆದಿರಬೇಕೆಂದು. ಹೀಗೆ ಬಗೆ ಬಗೆಯಾಗಿ. ವಿದ್ವಾಂಸರು ವಾದಿಸಿದ್ದಾರೆ.

ಇಲ್ಲಿಯ ನಿವಾಸಿಗಳಲ್ಲಿ ಬಹುಭಾಗ ಮಲಯ ವಂಶಸ್ಥರಾಗಿದ್ದರೂ. ಇತಿಹಾಸದಲ್ಲಿ. ಇವರನ್ನು ಸುಂದನೀಯರು ಹಾಗೂ ಜಾವನರು ಎಂಬುದಾಗಿ ವರ್ಗೀಕರಿಸಲಾಗಿದೆ......................

ಜಾವನರು ಗಾಢವರ್ಣದವರು ಇವರ ವ್ಯಕ್ತಿತ್ವ. ಭಾಷೆ ಮತ್ತು ಸ್ವಭಾವದ ಬಹ್ವಂಶಗಳು ಹಿಂದುಗಳಿಂದ ದತ್ತ. ಹಿಂದುಗಳು ಇಲ್ಲಿ ಧರ್ಮ ಸಂಸ್ಕೃತಿಯೊಂದನ್ನು ಬೆಳೆಸಿದರು."

(ವಿಶ್ವಕೋಶ ಸಂಪುಟ ೮ರ ಪುಟ ೯೪-೯೬ರಲ್ಲಿನ ಪ್ರಧಾನ್ ಗುರುದತ್ತರ ಲೇಖನದಿಂದ)

ಡಿ. ವಿ. ಕೆ. ಮೂರ್ತಿ

ಭಾರತೀಯ ಸಾಹಿತ್ಯದಲ್ಲಿ ವಾಸ್ತವತೆಯ ಪ್ರಜ್ಞೆ ಮತ್ತು ಪ್ರೇಮಚಂದರು

ಮಾನವಸಮಾಜದ ಸ್ಥಿತಿಲಯಗಳನ್ನು ಮಾನವೀಯತೆಯ ಕಳಕಳಿಯಿಂದ ಜೀವನದುದ್ದಕ್ಕೂ ತಾಳೆ ಹಾಕಿ ಕೊನೆಗೆ ಐತಿಹಾಸಿಕ ಸಾಮಾಜಿಕ ಪ್ರಜ್ಞೆಯ ಮೂಲ ಆಕರಗಳಿಂದ ವಾಸ್ತವತೆಯನ್ನು ಕಂಡುಕೊಂಡ ದ್ರಷ್ಟಾರರು ಪ್ರೇಮಚಂದರು. ಭಾರತೀಯ ಸಾಹಿತ್ಯದಲ್ಲಿ ಇಂತಿಷ್ಟು ಮಾನವೀಯತೆಯ ಪ್ರಾಮಾಣಿಕ ಮಾರ್ಗದಲ್ಲಿ ಸತ್ಯವನ್ನು ಕಂಡುಕೊಂಡ ಬೇರೊಬ್ಬ ಸಾಹಿತಿಯನ್ನು ಕಾಣುವಂತಿಲ್ಲ.

ಸಮಗ್ರ ಮಾನವೇತಿಹಾಸದ ಮೂಲಭೂತ ಸಾಂಗತ್ಯದಲ್ಲಿ ಸಮಕಾಲೀನ ವಾಸ್ತವತೆಯನ್ನು ಕಂಡುಕೊಂಡ ಪ್ರೇಮಚಂದರ ಸೃಜನಶೀಲ ದ್ರಷ್ಟಾರಪ್ರಜ್ಞೆ ಅದಮ್ಯ ಮಾನವಚೇತನದ ಪ್ರತೀಕವಾಗಿ, ಕಾಲಚಕ್ರ ಉರುಳಿದಂತೆಲ್ಲಾ ಮಾನವಕೋಟಿಯ ವಿಶ್ವಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆಯುವಂಥ ಸತ್ತ್ವದಿಂದ ಕೂಡಿರುತ್ತದೆ.

ಬಹುಮಟ್ಟಿಗೆ. ಶತಮಾನಗಟ್ಟಲೆ. ಸಹಜ ಐತಿಹಾಸಿಕ ಪ್ರಭಾವಗಳಿಗೆ ಓಗೊಡದೆ, ಜಡವಾಗಿ ವಿಕೃತವಾಗಿ ಸತ್ಯವನ್ನೆ ಮರೆಮಾಚಿ ಸಾಗಿದ್ದ ಭಾರತೀಯ ಇತಿಹಾಸದ ಅಂತರ್ವಿರೋಧ ಬಹಿರ್ವಿರೋಧಗಳನ್ನು ಮಾನವೀಯತೆಯ ಏಕಮಾತ್ರ ಪ್ರೇರಣೆಯಿಂದ ಗುರುತಿಸಿ. ಅದರ ಸರ್ವತೋಮುಖ ಅಭಿವ್ಯಕ್ತಿಯನ್ನಿತ್ತ ಸೃಜನಶೀಲ ಪ್ರತಿಭೆ ಪ್ರೇಮಚಂದರದು. ಕಳಕಳಿಯಿಂದ ಸಾಗಿದ ಈ ಮಾನವೀಯ ರಸಋಷಿಯ ಸತ್ಯಶೋಧನೆಯ ಮಾರ್ಗದಲ್ಲಿ ಪೂರ್ವಗ್ರಹ ಪೀಡಿತವಾದ ಯಾವೊಂದು ತಾತ್ತ್ವಿಕ ಅವಲಂಬನೆಯಾಗಲಿ ಆರೋಪವಾಗಲಿ ಕಾಣದಿರುವುದು ಅವರ ಮುಕ್ತವಾಸ್ತವತೆಯ ಅಭಿವ್ಯಕ್ತಿಗೆ ಅನುಭವಪಾರಮ್ಯದಿಂದ ಪುಟಿದೆದ್ದ ಪ್ರಾಮಾಣಿಕತೆಯ ಕಾವೆರೆದಿದೆ.

ಪ್ರೇಮಚಂದರು ಯಾವೊಂದು ತತ್ತ್ವದ ಕ್ಲೀಷೆಗೂ ಗಂಟು ಬೀಳಲಿಲ್ಲ: ಪ್ರತ್ಯಕ್ಷವಾಗಿ ಯಾವೊಂದು ಚಳುವಳಿಯ ಮುಂಚೂಣಿಯಲ್ಲಿ ನಿಂತು ಕಾರಾಗೃಹವಾಸವನ್ನನುಭವಿಸಲಿಲ್ಲ. ಆದಾಗ್ಯೂ ಸಮಕಾಲೀನ ಇತಿಹಾಸದ ದ್ವಂದ್ವಗಳೊಂದಿಗೆ ಪ್ರೇಮಚಂದರು ನಡೆಸಿದ ಸಂಘರ್ಷ ಕ್ರಾಂತಿಯ ತಾತ್ತ್ವಿಕ ಪ್ರಜ್ಞೆಯ ವಾಸ್ತವಿಕ ದರ್ಶನವೇ ಆಗಿಹೋಯಿತು. ವಾಸ್ತವತೆಯ ಈ ಮಹಾದರ್ಶನಕ್ಕೆ ಪ್ರೇಮಚಂದರಲ್ಲಿದ್ದ ಒಂದೇ ಒಂದು ಸಾಮಗ್ರಿಯೆಂದರೆ ಮಾನವೀಯತೆಯಿಂದ ತುಂಬಿತುಳುಕುತ್ತಿದ್ದ ಆತ್ಮವಿಶ್ವಾಸ; ಯಾವೊಂದು ಸೋಗಿನಿಂದಲೂ ವಂಚಿತರಾಗದ ಸಾಧಾರಣ ಬುದ್ಧಿಯ ಸಾಮಾನ್ಯವಿವೇಕ.

ಹುಟ್ಟಿದಂದಿನಿಂದ ಜೀವನದುದ್ದಕ್ಕೂ ಅವರು ನೋವನ್ನನುಭವಿಸಿದರು. ಕಡುಬಡತನ, ಮಲತಾಯಿಯ ಆಸರೆ. ಹದಿನೈದನೆಯ ವಯಸ್ಸಿಗೆ ಅವರ ಪ್ರಕೃತಿಗೆ ಎಂತೂ ಸರಿಯೆನಿಸದ ಹೆಣ್ಣಿನೊಂದಿಗೆ ಬಲವಂತದ ಮದುವೆ. ಬಳಿಕ ತಂದೆಯ ಸಾವು. ದೊಡ್ಡ ಕುಟುಂಬದ ಹೊಣೆ. ಪುಡಿಕಾಸಿಗಾಗಿ ಜೀತ—ಹೀಗೆ ಸಾಗಿದ್ದ ಆ ಬಾಳು ನುಚ್ಚುನೂರಾಗಿಬಿಡಬೇಕಿತ್ತು. ಆದಾಗ್ಗೂ ಪ್ರೇಮಚಂದರ ನಿರ್ಮಲಾಂತಃಕರಣದಿಂದ ಸುಸಂಸ್ಕೃತವಾಗಿ ಸೆಟೆದು ನಿಂತ ಆತ್ಮವಿಶ್ವಾಸ ಇದಾವುದಕ್ಕೂ ಸೋಲಲಿಲ್ಲ,

ಮಣಿಯಲಿಲ್ಲ; ಬದಲಾಗಿ ಒಂದು ರೋಗಗ್ರಸ್ತಸಮಾಜದ ದರ್ಶನವೇ ಆಯಿತವರಿಗೆ. ಈ ಬವಣೆ ಅನುಭವಿಸುತ್ತಿರುವ ಒಂಟಿ ವ್ಯಕ್ತಿ ತಾವಲ್ಲ. ಮಾನವಕೋಟಿಯೇ ಈ ಮಹಾ ದುರಂತಕ್ಕೀಡಾಗಿ ಪರಿತಪಿಸುತ್ತಿರುವುದನ್ನವರು ಕಂಡುಕೊಂಡರು. ಉತ್ಕಂಠೆಯಿಂದ ಸಮಾಜದಲ್ಲಿ ತಮ್ಮ ದೊಡ್ಡ ಬಳಗವನ್ನು ಗುರುತಿಸಿದರು. ಮಾನವಕೋಟಿಯ ಪ್ರತಿನಿಧಿಯಾದ ಈ ಬಳಗದಲ್ಲಿ ಅವರು ಎಲ್ಲ ಮಾನವೀಯ ಮೌಲ್ಯಗಳ ಮೂರ್ತ ಸ್ವರೂಪವನ್ನು ಕಂಡರಲ್ಲದೆ. ಇಂತಿಪ್ಪ ಸತ್ತ್ವದಿಂದ ಕೂಡಿರುವ ಇವರ ಬಾಳು ಹೀಗೇಕಾಯಿತು ಎಂದು ಸತತವಾಗಿ ಚಿಂತಿಸಿದರು. ಮಾನವೇತಿಹಾಸವನ್ನು ತಿರುವಿಹಾಕಿದರು. ರಚನಾತ್ಮಕವಾಗಿ ಸಾಗಿದ ಅವರ ಚಿಂತನೆಯಲ್ಲಿ ಅನುಕಂಪದ ಆವೇಷ ಕಾಲಿಕ್ಕಲಿಲ್ಲ. ಕನಸಿನ ಭಾವುಕತೆ ಸುಳಿಯಲಿಲ್ಲ; ಬದಲಾಗಿ ಆತ್ಮವಿಶ್ವಾಸದಿಂದ. ಧೀರಸಂಕಲ್ಪದಿಂದ. ಈ ಮಾನವಕೋಟಿ ತನ್ನ ಹಿತಸಾಧನೆಗೆ ಒಗ್ಗಿಗೆ ಮಾತ್ರವಲ್ಲದೆ ಇಡೀ ಮಾನವಸಮಾಜಕಲ್ಯಾಣಕ್ಕೇ ನಾಯಕಪ್ರಜ್ಞೆಯನ್ನು ಹೊತ್ತು ಮುನ್ನಡೆವ ಭವಿಷ್ಯತ್ತನ್ನು ಕಂಡುಕೊಂಡರು.

ಈ ಶತಮಾನದ ಮೊದಲ ಮೂರು ದಶಕಗಳ ಸಾಮಾಜಿಕ-ರಾಜಕೀಯ-ಆರ್ಥಿಕ ಇತಿಹಾಸದ ಪ್ರಗತಿಪರ ಮಾನವೀಯ ವಿಶ್ಲೇಷಣೆಯನ್ನು ಪ್ರೇಮಚಂದರ ಕೃತಿಗಳಲ್ಲಿ ಕಾಣುವಂತೆ ಬೇರಾವ ಭಾರತೀಯ ಸಾಹಿತಿಯ ಕೃತಿಯಲ್ಲೂ ಕಾಣುವಂತಿಲ್ಲ. ಸಮಷ್ಟಿ ಕಲ್ಪನೆಯ ವರ್ಗರಹಿತ ಪುರಾತನ ಸಮಾಜ ಮೊದಲಿಂದಲೂ ಪ್ರೇಮಚಂದರ ಆದರ್ಶದ ಸಮಾಜವಾಗಿದ್ದು. ಅದು ಬರಬರುತ್ತ ಅವನತಿಗೊಂಡುದನ್ನು ಕಳಕಳಿಯಿಂದ ಚಿಂತಿಸುತ್ತ ಹೋದಂತೆ ಅವರು ಮಾನವೇತಿಹಾಸದ ಪರಮೋಚ್ಚ ಸೋಪಾನದಲ್ಲಿ ನಿಂತು ಪರಕೀಯತೆ ಅಮಾನವೀಕರಣಗಳ ಸಂಕೀರ್ಣಜಾಲವನ್ನು ಭೇದಿಸಿ. 'ಮಹಾಜನೀ ಸಭ್ಯತೆ'ಯ ಅವಗುಂಠನವನ್ನು ತೆರೆದು ಸಮಾಜವಾದಿ ವಾಸ್ತವತೆಯನ್ನು ಕೊನೆಗೆ ಕಂಡುಕೊಂಡರು.

ಸತ್ಯಶೋಧನೆಯ ಮಾರ್ಗದಲ್ಲಿ ಮೊದಮೊದಲು ಸುಧಾರಣಾವಾದದ ಆವೇಷ. ಆದರ್ಶವಾದದ ಮಂಪರು ಅವರ ಮೇಲೆ ಸಹಜವಾಗಿಯೆ ಪ್ರಭಾವ ಬೀರಿತಾದರೂ. ಚಲನೆಯಲ್ಲಿರುವ ವಸ್ತುಸ್ಥಿತಿಯನ್ನು ಸತತವಾಗಿ ಅವಲಂಬಿಸಿ ಸಾಗಿದ ಅವರ ಸೃಜನಶೀಲ ಸಂವೇದನೆ ಆ ಪ್ರಭಾವ ವಲಯದಲ್ಲಿ ಏನೊಂದು ಪರಿಹಾರವನ್ನೂ ಕಾಣದೆ ನಿರಾಶೆಗೊಂಡು ಮತ್ತೂ ಕಳಕಳಿಯಿಂದ ಅವರು ಸಮಕಾಲೀನ ಸಂಕೀರ್ಣವನ್ನು ಬಿಡಿಸುವುದರಲ್ಲಿ ತೊಡಗುವಂತೆ ಮಾಡಿತು.

ಆರ್ಯಸಮಾಜದ ಸುಧಾರಣಾಮಾರ್ಗ. ಗಾಂಧೀಜಿಯ ಆದರ್ಶವಾದ. ಥಿಯಾಸಫಿಯ ಅತೀಂದ್ರಿಯ ಅಂತರ್ಬೋಧೆ ಇವುಗಳಿಂದ ಅವರು ಆರಂಭದಲ್ಲಿ ಪ್ರಭಾವಿತರಾಗಿ ಕೊನೆಗೆ ಈ ಮಾರ್ಗದಲ್ಲಿ ಯಥಾಸ್ಥಿತ ಸಮಾಜದ ಪುನಃಪ್ರತಿಷ್ಠೆಯೇ ಆಗುವುದಲ್ಲದೆ ಆದರ್ಶ ಹಾಗೂ ಮಾನವೀಯ ಮೌಲ್ಯಗಳ ಅನ್ವಯಿಕ ಪ್ರಕ್ರಿಯೆಗಳಿಗೆ ತೆರವಾಗುವಂಥ ಸಮಾಜದ ಪುನರ್ರಚನೆ ಈ ದಿಸೆಯಲ್ಲಿ ಸಾಧ್ಯವಾಗಲಾರದೆಂಬುದನ್ನು ಸ್ಪಷ್ಟವಾಗಿ ಕಂಡುಕೊಂಡರು.

೧೯೧೮ರಲ್ಲಿ 'ಸೇವಾಸದನ' ಕಾದಂಬರಿಯಿಂದ ಆರಂಭವಾಗಿ. ೧೯೨೦ ರಿಂದ ೧೯೩೬ರ ವರೆವಿಗೆ. ವಿಶೇಷವಾಗಿ 'ಪ್ರೇಮಾಶ್ರಮ'. 'ರಂಗಭೂಮಿ'. 'ಕಾಯಾಕಲ್ಪ' 'ಕರ್ಮಭೂಮಿ' ಮತ್ತು 'ಗೋದಾನ' ಕಾದಂಬರಿಗಳಲ್ಲಿ ಪ್ರೇಮಚಂದರ ಮಾನವೀಯ ಸಾಮಾಜಿಕ ಸಂವೇದನೆ ಸ್ಪಷ್ಟಗೊಳ್ಳುತ್ತಾ, ಹಂತಹಂತವಾಗಿ ವಾಸ್ತವತೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು. ಮಾನವೇತಿಹಾಸದ ಪರ್ವಕಾಲದ ವಾಸ್ತವತಾ ದರ್ಶನವನ್ನು ಮುಂದೂಡಿ. ಭಾರತೀಯ ಸಾಹಿತ್ಯದಲ್ಲಿ ವಾಸ್ತವತೆಯ ಮುಹೂರ್ತವೇ ಆಯಿತು.

"ಇದು ಜೀವನ ಸಂಘರ್ಷದ ಕಾಲ. ಶಿಕ್ಷಿತರಾದ ನಾವು ತಟಸ್ಥರಾಗಿ ಕುಳಿತು ಅನ್ಯಾಯವನ್ನು ನೋಡಲಾಗದು"[1] ಎಂದು ೧೯೨೨ರಲ್ಲಿ ಸಾಹಿತ್ಯದ ಪ್ರಕ್ರಿಯೆ ಕುರಿತು ಸ್ಪಷ್ಟ ನಿರ್ದೇಶವಿತ್ತ ಪ್ರೇಮಚಂದರು ಮಾನವೀಯತೆಯ ಪಕ್ಷಪಾತದಿಂದ ತಮ್ಮ ವಿಚಾರಗಳನ್ನು. ಒಲಿವುನಲಿವುಗಳನ್ನು, 'ಹಂಸ್'. 'ಜಾಗರಣ್'. 'ಮಾಧುರಿ' ಮುಂತಾದ ಪತ್ರಿಕೆಗಳಲ್ಲಿ ಮುಕ್ತ ಮನಸ್ಸಿನಿಂದ ನಿರಂತರವಾಗಿ ಪ್ರತಿಪಾದಿಸುತ್ತ ಬಂದರು. ಅವರ ಜೀವನಾನುಭವ. ವಿಚಾರವಿಕಸನ ಮತ್ತು ಸೃಜನಶೀಲ ಸಾಹಿತ್ಯ ರಚನೆ ಒಂದಕ್ಕೊಂದು ಹಾಸುಹೊಕ್ಕಾಗಿ ತ್ರಿವೇಣಿ ಸಂಗಮವೇ ಆಯಿತು.

ತೀವ್ರ ಯಾತನೆಗೊಳಗಾದ ರೋಗಿ ಕಂಡಕಂಡ ವೈದ್ಯರನ್ನರಸುತ್ತ ಹೋಗುವಂತೆ. ಪ್ರೇಮಚಂದರು ಸಮಾಜದ ರೋಗವನ್ನೇ ಹೊತ್ತು ಹತ್ತು ಸಮಸ್ತರ ಚಿಕಿತ್ಸಕ ವಿಚಾರಗಳನ್ನೆಲ್ಲ ಶ್ರದ್ಧೆಯಿಂದ ಮನನ ಮಾಡಿಕೊಂಡು. ಮಿಥ್ಯಾಕರ್ಷೆಯ ಈ ಯಾವ ಚಿಕಿತ್ಸಾವಿಧಾನದಲ್ಲೂ ಪರಿಹಾರ ಕಾಣದೆ ತೊಳಲಾಡು ವುದನ್ನು ಅವರ ೧೯೩೬ರ ವರೆಗಿನ ಬರವಣಿಗೆಯಲ್ಲಿ ಕಾಣುತ್ತೇವೆ. ನಿಷ್ಕ್ರಿಯೆ. ನಿವೃತ್ತಿ. ಸ್ವಾನುಕಂಪಗಳ ಜಡತೆಗೊಂದೂ ಮಣಿಯದ ಅವರ ಅದಮ್ಯ ಚೇತನ ಇದರಿಂದ ವ್ಯಸ್ತವಾಗುತ್ತಾದರೂ ಅವರು ಜೀವನೋತ್ಸಾಹದಿಂದ ಹಿಮ್ಮೆಟ್ಟದೆ ಮತ್ತೆಮತ್ತೆ ಚಿಂತನೆ. ವಸ್ತುಸ್ಥಿತಿಯ ಅಂತರ್ಗತ ವಿಮರ್ಶೆ ಮತ್ತು ಜಿಜ್ಞಾಸೆ ಮಾಡುತ್ತ ಮುನ್ನಡೆಯುತ್ತಾರೆ.

ಶ್ರದ್ಧಾವಂತ ಕಾದಂಬರಿಕಾರನೊಬ್ಬ ಕಥಾವಸ್ತುವನ್ನಾಯ್ದುಕೊಂಡ ಬಳಿಕ ಅವನ ಮನೋ ಧರ್ಮ ರೂಪುಗೊಳ್ಳುವ ಬಗೆಯನ್ನು ಕುರಿತು ಪ್ರೇಮಚಂದರು ೧೯೨೨ರಲ್ಲಿ 'ಉಪನ್ಯಾಸ್-ರಚನಾ' ಎಂಬ ಲೇಖನದಲ್ಲಿ ಮಾರ್ಮಿಕವಾಗಿ ಬರೆದಿದ್ದಾರೆ: "ಅವನು ಮಲಗಿರಲಿ ಎದ್ದಿರಲಿ, ಕುಳಿತಿರಲಿ ಓಡಾಡುತ್ತಿರಲಿ ಈ ಚಿಂತೆಯಲ್ಲಿ ಸದಾ ಮುಳುಗಿಬಿಟ್ಟಿರುತ್ತಾನೆ. ಎಷ್ಟೋ ಬಾರಿ ಅವನ ಚಿಂತನೆ ತಿಂಗಳುಗಟ್ಟಲೆ ವರ್ಷಗಟ್ಟಲೆ ನಡೆಯುತ್ತಿರುತ್ತದೆ. ಈ ಚಿಂತೆಯಲ್ಲಿ ಲೇಖಕ ಎಷ್ಟೆಷ್ಟು ವ್ಯಸ್ತನಾಗು ತ್ತಾನೊ ಅಷ್ಟೂ ಅಧಿಕವಾಗಿ ಅವನ ಸಾಹಿತ್ಯರಚನೆ ಉತ್ತಮವಾಗುತ್ತದೆ. ಇದಕ್ಕೆ ಮುಖ್ಯ ಸಾಧನ ಸಾಮಗ್ರಿಗಳೆಂದರೆ: ಅವಲೋಕನ. ವ್ಯಾಸಂಗ. ಅಂತಃದೃಷ್ಟಿ. ಜಿಜ್ಞಾಸೆ ಮತ್ತು ವಿಚಾರ ಆಕಲನ."[2] ಸತ್ಯಶೋಧನೆಯ ಮಾರ್ಗದಲ್ಲಿ ತೊಳಲಾಡುತ್ತ ಸಾಗಿದ ತಮ್ಮ ಸ್ವಂತ ಅನುಭವವನ್ನೇ ಪ್ರೇಮಚಂದರು ಸೃಜನಶೀಲ ಸಾಹಿತ್ಯದ ಈ ಮಾರ್ಗದರ್ಶಕ ಸೂತ್ರಗಳಲ್ಲಿ ಹೊರಗೆಡಹಿದ್ದಾರೆ.

ಆರ್ಯ ಸಮಾಜದಿಂದ ಪ್ರಭಾವಿತರಾಗಿ ೧೯೧೮ರಲ್ಲಿ ಪ್ರೇಮಚಂದರು 'ಸೇವಾಸದನ' ಕಾದಂಬರಿ ಯನ್ನು ರಚಿಸಿದರಾದರೂ ೧೯೨೦ರ ತರುವಾಯ ಆರ್ಯಸಮಾಜ ಶುದ್ಧೀಕರಣದ ಚಳುವಳಿ ಹೂಡಿ ದಾಗ. ಅವರು ಅದನ್ನು ತೀವ್ರವಾಗಿ ಪ್ರತಿಭಟಿಸಿದರಲ್ಲದೆ ಕೇವಲ ನೈತಿಕ-ಧಾರ್ಮಿಕ ದೃಷ್ಟಿಯಿಂದ ಪಾರಲೌಕಿಕ ಲಾಂಛನದಲ್ಲಿ ಯಾವುದೇ ಸಾಮಾಜಿಕ ಸಮಸ್ಯೆಯ ಪರಿಹಾರ ಸಾಧ್ಯವಿಲ್ಲವೆಂಬುದನ್ನು ಮನಗಂಡರು.

'ಸೇವಾಸದನ' ಕಾದಂಬರಿಯಲ್ಲಿ ಪ್ರೇಮಚಂದರು ವೇಶ್ಯಾಸಮಸ್ಯೆಯನ್ನು ಕುರಿತು ನೈತಿಕ-ಧಾರ್ಮಿಕ ದೃಷ್ಟಿಯಿಂದ ಪರಿಹಾರ ನೀಡಿದ್ದಾರಾದರೂ ಈ ಕಾದಂಬರಿಯ ಅಡಿಗಡಿಗೂ ವ್ಯಕ್ತಿ-ಸಮಾಜ ಸಂಘರ್ಷ ಬಹುಮುಖವಾಗಿ ಮೂಡುತ್ತದೆ. ಪ್ರೇಮಚಂದರ ಯಾವುದೇ ಕೃತಿಯಲ್ಲೂ ವ್ಯಕ್ತಿ ಒಂಟಿಯಾಗಿ ಭಾವುಕತೆಯಲ್ಲಿ ಕರಗಿ ಸಮಾಜದ ಪರಿಸರದಿಂದ ಕಡಿದುಕೊಳ್ಳುವುದಿಲ್ಲ. 'ಸೇವಾ ಸದನ'ದ ಸುಮನಳಾದರೂ ಸಮಾಜದ ಶಾಪವಾಗಿ ವೇಶ್ಯಾವೃತ್ತಿಯನ್ನವಲಂಬಿಸುವ ಸಾವಿರಾರು ವೇಶ್ಯೆಯರಲ್ಲಿ ಒಬ್ಬಳಾಗುತ್ತಾಳೆ. ಸಮಾಜದಲ್ಲಿ ತಾಂಡವವಾಡುತ್ತಿರುವ ದುರಾಚಾರ. ವರದಕ್ಷಿಣೆಯ ಕ್ರೂರಪದ್ಧತಿ ಮತ್ತು ಲಾಭಗಡುಕತನಗಳಿಂದಾಗಿ ಈ ಸಮಸ್ಯೆ ಹುಟ್ಟಿಕೊಂಡಿರುವುದನ್ನು 'ಸೇವಾ ಸದನ'ದಲ್ಲಿ ಸೂಚ್ಯವಾಗಿ ಕಾಣುತ್ತೇವಾದರೂ ಈ ಸಮಸ್ಯೆಗೆ ಪ್ರೇಮಚಂದರು ಸೂಚಿಸಿರುವುದು ಸುಧಾರಣೆಯ ಮಾರ್ಗ.

ಸುಮನಳಂಥ ವೇಶ್ಯೆಯರ ಸಮಸ್ಯೆ ಈ ಸುಧಾರಣಾಮಾರ್ಗದಿಂದ ಪರಿಹಾರವಾಗಲು ಸಾಧ್ಯ ವಿಲ್ಲ. ಈ ಸಮಾಜವ್ಯವಸ್ಥೆಯೇ ಇನ್ನೂ ಅನೇಕ ಸಮಸ್ಯೆಗಳೊಂದಿಗೆ ಕೈಯಾರ ವೇಶ್ಯಾ ಸಮಸ್ಯೆಯನ್ನು ಸೃಷ್ಟಿಸಿದೆ ಎಂಬ ಕಟುಸತ್ಯವನ್ನು ಪ್ರೇಮಚಂದರು ತಮ್ಮ ವಿಚಾರ ಬೆಳೆದಂತೆಲ್ಲಾ ಅತೀವ ಯಾತನೆಯಿಂದ ಮನಗಾಣುತ್ತಾರೆ: "ಆರ್ಥಿಕ ಸಂಕಟವೇ ವೇಶ್ಯಾವೃತ್ತಿಗೆ ಮೂಲಕಾರಣ. ಇದೇ ಮುಂದೆ ಮಾನಸಿಕ ದೌರ್ಬಲ್ಯದ ರೂಪವನ್ನು ತಳೆಯುತ್ತದೆ."[3] ಎಂದವರು ಕಾಲಕ್ರಮೇಣ ಸ್ಪಷ್ಟವಾಗಿ ತಮ್ಮ ನಿರ್ಣಯ ವನ್ನಿತ್ತರು.

ಊಳಿಗಮಾನ್ಯ ಪದ್ಧತಿ ಐತಿಹಾಸಿಕವಾಗಿ ಹದಿನೆಂಟನೆಯ ಶತಮಾನದಲ್ಲೆ ನಶಿಸಿ ಹೋಗ ಬೇಕಾಗಿತ್ತಾದರೂ. ಇತಿಹಾಸದ ಸಹಜಗತಿಯಿಂದ ವಂಚಿತವಾದ ಭಾರತದಲ್ಲಿ ಅದು ಇನ್ನೂ ಉಳಿದು ಕೊಂಡಿತ್ತಲ್ಲದೆ ಬಂಡವಾಳಶಾಹಿಯಾದರೂ ಕ್ರಮಬದ್ಧವಾಗಿ ಬೆಳೆದಿರಲಿಲ್ಲ. ಈ ವಿಶಿಷ್ಟ ಪರಿಸ್ಥಿತಿಯಲ್ಲಿ

ಭಾರತೀಯ ಸಮಾಜ ಸಂಘಟನೆಯಲ್ಲಿ ಅಂತರ್ವಿರೋಧ ಬಹಿರ್ವಿರೋಧಗಳು ಮಿತಿಮೀರಿ ಬೆಳೆದು ಕಣ್ಣು ಕುಕ್ಕುವಂತೆ ಎದ್ದು ಕಾಣುವಂತಾಗಿತ್ತು. ವ್ಯವಸಾಯವೇ ಮುಖ್ಯ ಉತ್ಪಾದನಾ ಆಧಾರವಾಗಿದ್ದ ಆರ್ಥಿಕ ವ್ಯವಸ್ಥೆಯಲ್ಲಿ ಜಮೀನುದಾರಿ ಪದ್ಧತಿಯು ಪಟ್ಟಭದ್ರರಿಂದ ರೈತರ ಶೋಷಣೆ ಅಡೆತಡೆಯಿಲ್ಲದೆ ನಡೆಯತೊಡಗಿತ್ತು. ಪ್ರಾಮಾಣಿಕವಾಗಿ ದುಡಿದು, ಸಮಾಜಕ್ಕೆ ಅಗತ್ಯವಾದ ಆಹಾರಧಾನ್ಯಗಳನ್ನೂ ಕಚ್ಚಾ ಮಾಲುಗಳನ್ನೂ ಉತ್ಪಾದಿಸುವುದರಲ್ಲಿ ತಮ್ಮ ಜೀವ ಸವೆಸುತ್ತಿದ್ದ ರೈತಬಳಗ ಕಡುಬಡತನಕ್ಕೀಡಾಗಿ, ಜೀವ ದೇಹ ಬಿಗಿಹಿಡಿದುಕೊಂಡು ಬಾಳ್ವೆ ನಡೆಸುವುದೂ ಕಠಿಣವಾಗಿ ಅಮಾನವೀಕರಣದ ದಾರುಣ ಪರಿಸ್ಥಿತಿಯೇ ಒದಗಿ ಬಂದಿತ್ತು.

ಇಂಥ ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರೇಮಚಂದರ ಚೇತನ ಸೆಟೆದು ನಿಂತು ಈ ರೈತಬಳಗದೊಂದಿಗೆ ತಾದಾತ್ಮ್ಯಗೊಂಡಿತು. ಅವರು ಕೊನೆಯುಸಿರೆಳೆಯುವ ತನಕ ಈ ಬಳಗದಿಂದ ಬೇರೆಯಾಗಲಿಲ್ಲ. ಜೊತೆಗೆ, ಕಾಲಕ್ರಮವಾಗಿ, ಅವರ ಆಗ್ರಹಪೂರ್ವಕವಾದ ಸಂವೇದನೆ ಕಾರ್ಮಿಕವರ್ಗ ಹಾಗೂ ಕೆಳ ದರ್ಜೆಯ ಮಧ್ಯಮವರ್ಗವನ್ನೂ ತುಂಬಿಕೊಂಡಿತು.

ಈ ರೈತಬಳಗದಲ್ಲಿ ಪ್ರೇಮಚಂದರು ಸಾಮಾಜಿಕ ಅನ್ಯಾಯಕ್ಕೆ ತುತ್ತಾದ ಒಂದು ದೊಡ್ಡ ಸಮಾಜವನ್ನೇ ಕಂಡರು. ಈ ಮುಗ್ಧ ಮಕ್ಕಳು ಆತ್ಮಗೌರವ ಆತ್ಮವಿಶ್ವಾಸಗಳಿಂದ ತಮ್ಮ ಉದಾತ್ತ ಪಾತ್ರವನ್ನು ನಿರ್ವಹಿಸುತ್ತಾ ಸಮಾಜಕಲ್ಯಾಣ ನಿರ್ಮಾಣದಲ್ಲಿ ಸೃಜನಶೀಲ ಆನಂದ ಕಾಣುತ್ತಾ ತಲೆಯೆತ್ತಿ ಬಾಳಬೇಕಾದ ಜನ. ಆದರೆ ವಸ್ತುಸ್ಥಿತಿಯಾದರೂ ಏನು? ದೇವರ ಹೆಸರಿನಲ್ಲಿ, ಮತ ಧರ್ಮದ ಹೆಸರಿನಲ್ಲಿ ಏನೆಲ್ಲ ಅಪರಾಧಗಳನ್ನು ಸಾರುತ್ತಾ ಜಮೀನುದಾರರು ಲೇವಾದೇವಿಗಾರರು ಅಧಿಕಾರಶಾಹಿಯೊಂದಿಗೆ ಶಾಮೀಲಾಗಿ ರೈತರನ್ನು ಶೋಷಿಸುತ್ತಿರುವ ಕಟುಸತ್ಯ ಪ್ರೇಮಚಂದರನ್ನು ಸತತವಾಗಿ ಬಾಧಿಸತೊಡಗಿತು. ಈ ಸಮಸ್ಯೆಯನ್ನು ಅವರು ಮೊದಲು ಧಾರ್ಮಿಕ, ಬಳಿಕ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿಟ್ಟು ವಿಶ್ಲೇಷಿಸುತ್ತ ನಡೆದುದನ್ನು ಅವರ ಸೃಜನಶೀಲ ಕೃತಿಗಳಲ್ಲಿ ಹೇಗೋ ಅಂತೆಯೇ ಅವರ ವಿಚಾರಶೀಲ ಲೇಖನಗಳಲ್ಲೂ ಕಾಣುತ್ತೇವೆ.

ಶತಮಾನಗಟ್ಟಲೆ ನಮ್ಮ ಜನ ದೇವರ ಮೊರೆಹೊಕ್ಕು, ಭಕ್ತಿಪಂಥದ ಪ್ರಭಾವದಲ್ಲಿ ತಮ್ಮ ಜೀವನೋತ್ಸಾಹವನ್ನು ಕಳೆದುಕೊಂಡು, ಸ್ವಪ್ರಯತ್ನದಿಂದ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಮಾರ್ಗದಿಂದ ವಿಮುಖರಾಗಿ, ದೇವರ ಹೆಸರಿನಲ್ಲಿ ಮತಧರ್ಮದ ಹೆಸರಿನಲ್ಲಿ ಸಮಾಜದ ಪ್ರತಿಷ್ಠಿತವರ್ಗ ಎಲ್ಲ ಬಗೆಯ ಶೋಷಣೆ ಮಾಡುವಂತಾದದ್ದನ್ನು ಪ್ರೇಮಚಂದರು ತಮ್ಮದೇ ಆದ ಸರಳ ಮಾನವೀಯ ಸಂವೇದನೆಯಿಂದ ಮೊದಮೊದಲು ಮಸುಕಾಗಿ ಬರಬರುತ್ತ ಸ್ಪಷ್ಟವಾಗಿ ಕಾಣುತ್ತ ಬಂದರು. ಅವರ ಮಾತುಗಳಲ್ಲೇ ಇದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ:

"ಭಗವಂತ ಇದ್ದಾನೆಯೋ ಇಲ್ಲವೋ—ಈ ಪ್ರಶ್ನೆ ಅದೆಂದಿನಿಂದ ಮನಸ್ಸನ್ನು ಮಥಿಸುತ್ತಿದೆಯೋ ತಿಳಿಯದು. ಆದರೆ, ಈಗಂತೂ ದಿನೇದಿನೇ ಮನಸ್ಸು ನಿಷೇಧವತ್ತಲೇ ವಾಲುತ್ತಿದೆ. ಅವನು ಇಲ್ಲವೇ ಇಲ್ಲ. ಇದ್ದದ್ದೇ ಆದರೆ, ಈ ಎಲ್ಲ ಅತ್ಯಾಚಾರ ಅನಾಚಾರಗಳನ್ನೇಕೆ ತಡೆಗಟ್ಟುವುದಿಲ್ಲ? ಎಲ್ಲ ಬರಿಯ ಸುಳ್ಳು. ಇಂಥ ನಿರ್ದಯಿ ಭಗವಂತ ಇರುವುದಕ್ಕಿಂತ ಇಲ್ಲದಿರುವುದೇ ಲೇಸು." 4

ನೇಪಾಳದಲ್ಲಿ ಭೂಕಂಪವಾದಾಗ ಅನೇಕ ಮನೆಗಳು ಉರುಳಿಹೋದುವು. ಆದರೆ ದೇವಾಲಯಗಳೊಂದೂ ಉರುಳಲಿಲ್ಲ. ಆಗ ಕೆಲವರು ದೊಡ್ಡ ಮನುಷ್ಯರು ದೈವಶ್ರದ್ಧೆಯಿಲ್ಲದ ಜನಕ್ಕೆ "ದೇವರಲ್ಲಿ ಎಷ್ಟು ಶಕ್ತಿಯಿದೆ ನೋಡಿ" ಎಂದು ಈ ಪ್ರಕರಣವನ್ನು ದೃಷ್ಟಾಂತವಾಗಿ ಎತ್ತಿ ತೋರಿಸಿದರು. ಆ ಸಂದರ್ಭದಲ್ಲಿ ಪ್ರೇಮಚಂದರು ಕಳಕಳಿಯಿಂದ ನೊಂದು ತೋರಿದ ಪ್ರತಿಕ್ರಿಯೆ ಅವರ ಅದಮ್ಯ ಮಾನವೀಯ ಲೋಕದೃಷ್ಟಿಯ ಪ್ರತೀಕವೇ ಆಗಿದೆ:

"ಒಳ್ಳೆಯ ತಿಳಿವಳಿಕೆಯುಳ್ಳ ಜನರೂ ಹೀಗೆ ಹೇಳುವುದನ್ನು ಕಂಡು ನಮಗೆ ದುಃಖವಾಗುತ್ತದೆ. ಸಮಾಜದಲ್ಲಾಗಲಿ ಧರ್ಮದಲ್ಲಾಗಲಿ ಬಹುಕಾಲದಿಂದಲೂ ಲೋಕದಲ್ಲಿ ಭಯದ್ದೇ ಆಳ್ವಿಕೆಯಿದೆ. ಕದಿಯಬೇಡ, ದೊರೆಯು ನಿನ್ನನ್ನು ಶಿಕ್ಷಿಸುತ್ತಾನೆ; ಪಾಪ ಮಾಡಬೇಡ, ದೇವರು ನಿನ್ನನ್ನು ಶಿಕ್ಷಿಸುತ್ತಾನೆ—

ಹೀಗೆ ಹೇಳಿ ದೇವರನ್ನು ಶಕ್ತಿಶಾಲಿಯೂ ಭಯಂಕರನೂ ಆದ ರಾಜನೆಂಬಂತೆ ಕಲ್ಪನೆ ಮಾಡಲಾಯಿತು. ಕಳ್ಳತನ ಮಾಡಬೇಡ. ಇದರಿಂದ ನಿನ್ನ ಸೋದರ ಮಾನವನಿಗೆ ಸಂಕಟವಾಗುತ್ತದೆ; ಪಾಪ ಮಾಡಬೇಡ. ಇದರಿಂದ ನಿನ್ನ ಸಮಾಜಕ್ಕೆ ಸಂಕಟವಾಗುತ್ತದೆ ಎಂದು ಯಾವಾಗಲೂ ಹೇಳಲೇ ಇಲ್ಲ. ನಮ್ಮ ನೀತಿಬೋಧಕರು ಮಾನವೀಯ ಭಾವನೆಯನ್ನವಲಂಬಿಸದೆ ಭಯದ ಭಾವವನ್ನವಲಂಬಿಸಿದರು. ಇಂದು ಕೋಟ್ಯಂತರ ವಂಚಕರು ನರಕದ ಭಯವನ್ನು ತೋರಿಸಿ ನಮ್ಮನ್ನು ವಂಚಿಸುತ್ತಿರುವುದು ಆ ಭಾವನೆಯ ಪ್ರತಾಪವೇ ಆಗಿದೆ. ಶಾಸನವೆಂಬುದು ಮನುಷ್ಯನು ಮಾಡಿದ ವಸ್ತು. ಮನುಷ್ಯನು ಭಯದ ಮೇಲೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡರೆ ನಾವು ಅವನನ್ನು ಕ್ಷಮಿಸಬಹುದು. ಆದರೆ ತನ್ನ ಪ್ರೇಮದ ಅನಂತವಿಸ್ತಾರವನ್ನು ತೋರಿಸಬಲ್ಲ ಸರ್ವಶಕ್ತನಾದ ದೇವರೂ ಭಯದ ಆಶ್ರಯವನ್ನು ಪಡೆಯುವುದಾದರೆ ಇದು ಆ ದೇವರಿಗೆ ಗೌರವ ತರುವಂತಹ ಮಾತಲ್ಲ. ಭಗವಂತನ ಇಚ್ಛೆಯಿಲ್ಲದೆ ಒಂದು ತೃಣವೂ ಚಲಿಸದೆಂದು ಹೇಳುತ್ತಾರೆ. ಹಾಗಾದರೆ ಸಹಸ್ರಾರು ವರ್ಷಗಳಿಂದ ಹಿಂದೂ ಸಮಾಜವು ಹರಿಜನರ ಮೇಲೇಕೆ ಅತ್ಯಾಚಾರ ಮಾಡಿತು? ದೇವರು ಈ ಅನ್ಯಾಯವನ್ನೆಲ್ಲ ನೋಡಿಯೂ ಅದೇಕೆ ಸುಮ್ಮನಿದ್ದ? ಅವನು ತನ್ನ ಪ್ರೇಮಜ್ಯೋತಿಯಿಂದ ಎಲ್ಲರನ್ನೂ ವಶಮಾಡಿಕೊಳ್ಳಲಿಲ್ಲವೇಕೆ? "5

'ಬಾಸಿ ಭಾತ್ ಮೆ ಖುದಾ ಕಾ ಸಾಝಾ' ಎಂಬ ಅವರ ಕಥೆಯಲ್ಲಿ ದೀನಾನಾಥನ ಮಾತುಗಳಲ್ಲಿ ಪ್ರೇಮಚಂದರ ವಿಚಾರವಾಣಿಯನ್ನೇ ಗುರುತಿಸಬಹುದಾಗಿದೆ:

"ದೇವರಿಗಿಂತ ನಿರ್ದಯಿ ಯಾರೂ ಇಲ್ಲ. ತಾನೇ ಸೃಷ್ಟಿಸಿದ ಆಟದ ಗೊಂಬೆಗಳನ್ನು ಅವುಗಳ ತಪ್ಪು ವಾಗೂ ತಿಳಿಗೇಡಿತನಕ್ಕಾಗಿ ಅಗ್ನಿಕುಂಡಕ್ಕೆ ತಳ್ಳಿಬಿಡುವ ಅವನು ದಯಾಳುವೆನಿಸಲಾರ. ದೇವರಲ್ಲಿರುವ ದಯೆಗಿಂತ ಅಸಂಖ್ಯ ಗುಣಿತದಲ್ಲಿ ನಿರ್ದಯೆಯೇ ಅಧಿಕವಾಗಿದೆ. ಅಂಥ ದೇವರ ಕಲ್ಪನೆಯೇ ನನಗೆ ಹೇಸಿಕೆಯನ್ನುಂಟುಮಾಡುತ್ತದೆ. ಪ್ರೇಮ ಎಲ್ಲಕ್ಕಿಂತ ಮಿಗಿಲಾದ ಶಕ್ತಿಯೆಂದು ಹೇಳಲಾಗುತ್ತದೆ. ಆದರೆ ನಿಮ್ಮ ದೇವರು ದಂಡ-ಭಯದಿಂದ ಸೃಷ್ಟಿಯ ಸಂಚಾಲನ ಮಾಡುತ್ತಾನೆ. ಇಂಥ ದೇವರ ಉಪಾಸನೆಯನ್ನು ನಾನು ಮಾಡಲಿಚ್ಛಿಸುವುದಿಲ್ಲ. ಮಾಡಲಾರೆ. ತಿಂದು ಕೊಬ್ಬಿದ ಜನರ ಪಾಲಿಗೆ ದೇವರು ಮೀಸಲು. ಏಕೆಂದರೆ ಆ ಜನ ಪ್ರಪಂಚವನ್ನು ಲೂಟಿ ಮಾಡುತ್ತಾರೆ. ನಮ್ಮಂಥವರಿಗೆ ದೇವರ ದಯೆ ಕಣ್ಣಿಗೂ ಬೀಳುವುದಿಲ್ಲ.....ಪ್ರೀತಿಯಿಂದ ಆಳುವುದು ಮಾನವತೆ. ಆತಂಕ ಹೇರಿ ಆಡಳಿತ ನಡೆಸುವುದು ಬರ್ಬರತೆ. ಆತಂಕ ಹೇರುವ ದೇವರಿಗಿಂತ ದೇವರಿಲ್ಲದಿರುವುದೇ ಲೇಸು. ಅವನನ್ನು ಹೃದಯದಿಂದ ಕಿತ್ತೊಗೆದು, ನಾನು ಅವನ ದಯೆ ಮತ್ತು ಶಿಕ್ಷೆಗಳೆರಡರಿಂದಲೂ ಮುಕ್ತನಾಗಬಯಸುತ್ತೇನೆ. "6

ದೇವರ ಹೆಸರಿನಲ್ಲಿ ಅಸ್ಪೃಶ್ಯತೆಯನ್ನು ಬೆಳೆಸಿಕೊಂಡು ಬಂದ ಹಿಂದೂ ಸಮಾಜ ಅವರನ್ನು ರೊಚ್ಚಿಗೆಬ್ಬಿಸುತ್ತದೆ:

"ಅಸ್ಪೃಶ್ಯನ ಹಣವನ್ನು ನೀವು ಕಸಿವಿಸಿಯಿಲ್ಲದೆ ತೆಗೆದುಕೊಳ್ಳುತ್ತೀರಿ. ಅಸ್ಪೃಶ್ಯನೊಬ್ಬ ದೇವಸ್ಥಾನ ಕಟ್ಟಿಸಿದರೆ. ನೀವು ಕುಟುಂಬ ಪರಿವಾರ ಸಮೇತ ಅಲ್ಲಿಗೆ ಹೋಗುತ್ತೀರಿ. ದೇವಸ್ಥಾನದಲ್ಲಿ ದೇವರ ಪ್ರತಿಷ್ಠೆ ಮಾಡುತ್ತೀರಿ. ಎಲ್ಲವನ್ನೂ ಕಬಳಿಸುತ್ತೀರಿ—ಅಸ್ಪೃಶ್ಯ ಅದನ್ನು ಮುಟ್ಟದಿರದೆ ಇದ್ದಲ್ಲಿ ಮಾತ್ರ. ದಕ್ಷಿಣೆ ತೆಗೆದುಕೊಳ್ಳುತ್ತೀರಿ; ಇದರಲ್ಲಿ ಯಾವ ಪಾಪವೂ ಇಲ್ಲ; ಇರಕೂಡದು. ಆದರೆ ಅಸ್ಪೃಶ್ಯ ದೇವಾಲಯದೊಳಗೆ ಮಾತ್ರ ಕಾಲಿರಿಸುವಂತಿಲ್ಲ; ಹಾಗೆ ಮಾಡಿದರೆ ದೇವರು ಅಪವಿತ್ರನಾಗಿಬಿಡುತ್ತಾನೆ; ಇತರರ ಸ್ಪರ್ಶಮಾತ್ರದಿಂದಲೇ ಅಪವಿತ್ರನಾಗಿಬಿಡುವಷ್ಟು ನಿಮ್ಮ ದೇವರು ನಿರ್ಬಲನಾಗಿದ್ದರೆ...ಅವನಿಗೆ ದೂರದಿಂದಲೇ ನನ್ನ ನಮಸ್ಕಾರ. "7

ದೈವಭಕ್ತಿ ಎಂಬುದು ಎಂಥ ಸಮಾಜಕಂಟಕ ವಿಪರ್ಯಾಸವಾಗಿಬಿಟ್ಟಿದೆ ಎಂಬುದನ್ನು ಪ್ರೇಮಚಂದರು 'ರೂಸ್ ಮೆ ಧರ್ಮ್ ವಿರೋಧಿ ಆಂದೋಲನ್' ಎಂಬ ಲೇಖನವೊಂದರಲ್ಲಿ ಪರಿಣಾಮಕಾರಿಯಾಗಿ ಬರೆದಿದ್ದಾರೆ:

"ದೈವಭಕ್ತಿಯ ಗೀಳಿನಲ್ಲಿ ದೊಡ್ಡ ದೊಡ್ಡ ಮಹಲುಗಳನ್ನು ನಿರ್ಮಿಸುತ್ತಾರೆ. ಮೇರೆಯರಿಯದ ಅವನನ್ನು ನಾಲ್ಕು ಗೋಡೆಗಳ ನಡುವೆ ಕೂಡಿಹಾಕಿ. ಸರ್ವವ್ಯಾಪಿಯಾದ ಅವನನ್ನು ಅವರು ಅಪಮಾನಿಸು

ತ್ತಾರೆ. ಅವನ ವಿಗ್ರಹವನ್ನು ಮಾಡಿ, ಅದನ್ನು ಸಿಂಗರಿಸಿ, ಅದಕ್ಕೆ ನೈವೇದ್ಯವನ್ನಿಟ್ಟು, ಅದರ ಮದುವೆಯನ್ನೇರ್ಪಡಿಸಿ, ಅವನ ನಾಮಮಾಲೆಯನ್ನು ಜಪಿಸುವವರು ದೇವರನ್ನು ಆಟದ ವಸ್ತುವನ್ನಾಗಿಸಿ, ಪ್ರಾಯಶ್ಚಿತ್ತವೇ ಇಲ್ಲದಂಥ ಪಾಪವನ್ನೆಸಗುತ್ತಾರೆ. ದೇವರ ಉಪಾಸನೆಯ ಏಕೈಕ ಮಾರ್ಗವೆಂದರೆ ಮನಸ್ಸು, ಮಾತು ಮತ್ತು ಕಾರ್ಯದಲ್ಲಿನ ಶುದ್ಧತೆ. ಈ ಶುದ್ಧತೆಯನ್ನು ಗಳಿಸಲು ದೇವರು ನೆರವಾಗುವುದಾದರೆ ಸಂತೋಷದಿಂದ ಅವನ ಧ್ಯಾನ ಮಾಡಿ. ಆದರೆ, ಅವನ ಹೆಸರಿನಲ್ಲಿ ಪ್ರತಿಯೊಂದು ಮತಧರ್ಮದಲ್ಲಿಯೂ ನಡೆಯುತ್ತಿರುವ ಸೋಗನ್ನು ಬುಡಸಹಿತವಾಗಿ ಹೇಗಾದರೂ ಕಿತ್ತೊಗೆಯುವುದು ದೇವರಿಗೆ ಸಲ್ಲಿಸಬಹುದಾದ ಅತಿಹೆಚ್ಚಿನ ಸೇವೆ".[8]

ಲಕ್ಷ್ಮಿಯನ್ನು ಕುರಿತು ಪ್ರೇಮಚಂದರ ಮಾತುಗಳು ಅತ್ಯಂತ ಮರ್ಮಸ್ಪರ್ಶಿಯೂ ಸಾಂಕೇತಿಕವೂ ಆಗಿದೆ:

"ಲೋಕವು ಬಹುಕಾಲದಿಂದಲೂ ಲಕ್ಷ್ಮೀಪೂಜೆಯನ್ನು ಮಾಡುತ್ತ ಬಂದಿದೆ. ಯಾರ ಮೇಲೆ ಆಕೆ ಪ್ರಸನ್ನಳಾಗುತ್ತಾಳೋ ಅವರ ಭಾಗ್ಯೋದಯವೇ ಆಗುತ್ತದೆ. ಅತನ ಎಲ್ಲ ದೋಷಗಳನ್ನೂ ಕ್ಷಮಿಸಲಾಗುತ್ತದೆ. ಆದರೆ ಲೋಕಕ್ಕೆ ಲಕ್ಷ್ಮಿ ಮಾಡಿರುವಷ್ಟು ಕೇಡನ್ನು ಯಾವ ಸೈತಾನನೂ ಮಾಡಿಲ್ಲ. ಅವಳು ದೇವಿಯಲ್ಲ, ಡಾಕಿನಿ."[9]

೧೯೨೦ರ ಹೊತ್ತಿಗೆ ಪ್ರೇಮಚಂದರ ಸಮಾಜಪ್ರಜ್ಞೆ ಗಮನಾರ್ಹವಾಗಿ ಬೆಳೆಯತೊಡಗಿತು. ಗಾಂಧೀಜಿಯ ಅಸಹಕಾರ ಚಳುವಳಿಯ ಕರೆಗೆ ಓಗೊಟ್ಟು ಸಹಾಯಕ ಶಾಲಾ ಇನ್‌ಸ್ಪೆಕ್ಟರ್ ಹುದ್ದೆಗೆ ಅವರು ರಾಜೀನಾಮೆಯಿತ್ತದ್ದೂ ಆಗಲೆ. ಸ್ವರಾಜ್ಯ ಸಾಧನೆಯಾದ ಹೊರತು ಜನಸಾಮಾನ್ಯರ ಕಲ್ಯಾಣ ಸಾಧನೆಯಾಗದೆಂದು ಅವರಿಗೆ ಬೋಧೆಯಾಗತೊಡಗಿತ್ತು. ಸ್ವರಾಜ್ಯದ ಲಾಭವನ್ನು ಕುರಿತು ಅವರು "ಸ್ವರಾಜ್ಯ ಕೆ ಫಾಯದೆ"[10] ಎಂಬ ದೀರ್ಘ ಲೇಖನವನ್ನೇ ಬರೆದು ಅದರ ಔಚಿತ್ಯವನ್ನೂ ಮಹತ್ವವನ್ನೂ ಮುಕ್ತಕಂಠದಿಂದ ಸಾರಿದರು.

ಗಾಂಧೀಜಿ ಬೆಳಕಿಗೆ ಬರುವ ಮುನ್ನವೇ ಪ್ರೇಮಚಂದರು ಟಾಲ್‌ಸ್ಟಾಯ್ ಅವರ ಅನೇಕ ಕಥೆಗಳನ್ನು ಹಿಂದಿಗೆ ರೂಪಾಂತರಿಸಿದ್ದರು. ಗಾಂಧೀಜಿ ತಮ್ಮ ಆದರ್ಶವಾದವನ್ನು ಬೆಳೆಸಿಕೊಂಡ ಮೂಲ ಆಕರಗಳಿಂದಲೇ ಪ್ರೇಮಚಂದರೂ ಪ್ರಭಾವಿತರಾಗಿದ್ದರಾಗಿ ಗಾಂಧೀಜಿಯ ಕರೆ ಅವರನ್ನು ಸಹಜವಾಗಿಯೆ ಮುಟ್ಟಿತು. ಆದರೆ, ಪ್ರೇಮಚಂದರು ಜನಸಾಮಾನ್ಯರ, ವಿಶೇಷವಾಗಿ ರೈತಬಳಗದ ಯೋಗಕ್ಷೇಮ ಸಾಧನೆಗಾಗಿಯೆ ಗಾಂಧೀ ಚಳುವಳಿಯನ್ನು ನೆಚ್ಚಿ ನಡೆದರು. ಅವರ ಆ ಮಾನವತಾ ಉದ್ದೇಶಸಾಧನೆಗೆ ಗಾಂಧೀವಾದ ಅಡ್ಡಿ ಬಂದಾಗಲೆಲ್ಲಾ ಅವರು ವಸ್ತುಸ್ಥಿತಿಗನುಗುಣವಾಗಿ ಆತ್ಮವಿಮರ್ಶೆ ಮಾಡಿಕೊಂಡು ಒಂದು ಘಟ್ಟದಲ್ಲಿ ೧೯೩೦ರ ಬಳಿಕ ಗಾಂಧೀವಾದವನ್ನು ಕೈಬಿಟ್ಟು ಮುಂದೆ ನಡೆದರು.

'ಪ್ರೇಮಾಶ್ರಮ' ಕಾದಂಬರಿಯಿಂದ 'ರಂಗಭೂಮಿ' (೧೯೨೦–೩೦) ಕಾದಂಬರಿಯ ವರೆವಿಗೆ ಗಾಂಧೀವಾದದ ಪ್ರಭಾವವನ್ನೂ 'ಕರ್ಮಭೂಮಿ' (೧೯೩೨) ಕಾದಂಬರಿಯಲ್ಲಿ ಅದರೊಂದಿಗೆ ನೆಹರು ವಿಚಾರಮಾರ್ಗದ ಪ್ರಭಾವ ಸೇರಿಕೊಂಡುದನ್ನೂ ಪ್ರೇಮಚಂದರ ಕೃತಿಗಳಲ್ಲಿ ಕಾಣಬಹುದಾದರೂ ವಸ್ತುಸ್ಥಿತಿಗೆ ಒರೆಹಚ್ಚುತ್ತಾ ಸಾಗಿದ ಅವರ ವಿಮರ್ಶಾತ್ಮಕ ದೃಷ್ಟಿಯಿಂದಾಗಿ ಜಮೀನುದಾರಿ ಪದ್ಧತಿ ಹಾಗೂ ಸಾಮ್ರಾಜ್ಯಶಾಹಿ ಪಾಪಾಪತುಶಾಹಿಗಳ ಸಮಾಜಕಂಟಕ ಪಾತ್ರವನ್ನವರು ಯಥಾವತ್ತಾಗಿ ಚಿತ್ರಿಸತೊಡಗಿದರು.

ಜಮೀನುದಾರರ ಸ್ವಾರ್ಥ, ಲೇವಾದೇವಿಗಾರರ ನಿಷ್ಠುರತೆ, ಅಧಿಕಾರಶಾಹಿಯ ದಬ್ಬಾಳಿಕೆ, ಲಂಚಗುಳಿತನ, ಮತಧರ್ಮದ ಹೆಸರಿನಲ್ಲಿ ಸುಲಿಗೆ, ಸಮಾಜದಲ್ಲಿ ಸಂಭಾವಿತರೆನಿಸಿಕೊಂಡವರ ದರ್ಪ, ಸಾಮ್ರಾಜ್ಯಶಾಹಿಯ ಕುಟಿಲ ತಂತ್ರಗಳು, ಇವುಗಳಿಂದಾಗಿ ಬಡರೈತರ ಪರಿಸ್ಥಿತಿ ಅದೆಷ್ಟು ದಾರುಣವಾಗುತ್ತ ಬಂತೆಂಬುದನ್ನು ೧೯೨೦–೧೯೩೨ರ ಅವಧಿಯ ತಮ್ಮ ಕೃತಿಗಳಲ್ಲಿ ಪ್ರೇಮಚಂದರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದರು.

'ಪ್ರೇಮಾಶ್ರಮ' ಕಾದಂಬರಿಯಲ್ಲಿ ಬನಾರಸ್ ಸಮೀಪದ ಲಖನಪುರ ಗ್ರಾಮದ ಜಮೀನು ದಾರಿಗೆ ಸಂಬಂಧಿಸಿದಂತೆ ವ್ಯಕ್ತಿಗಳು, ಸನ್ನಿವೇಶಗಳು ಒಂದರ ಮೇಲೊಂದು ಹೆಣೆಸಿಕೊಳ್ಳುತ್ತಾ ದೇಶದ ಸಮಕಾಲೀನ ಭೂಸಮಸ್ಯೆಯ ಸಮಗ್ರ ವಾಸ್ತವಿಕ ಚಿತ್ರಣವೇ ಮೂಡುತ್ತದೆ. ಜ್ಞಾನಶಂಕರನ ಪಾತ್ರದಲ್ಲಿ ಜಮೀನುದಾರಿ ವರ್ಗದ ಸ್ವಾರ್ಥ, ಲೋಭ, ಕುಟಿಲ ತಂತ್ರಗಳು, ಭೋಗವಿಲಾಸಗಳು ಎದ್ದು ಕಂಡರೆ, ಅದರೊಂದಿಗೆ ಶಾಮೀಲಾಗಿ ಜಮೀನುದಾರಿ ಸಿಬ್ಬಂದಿ ಹಾಗೂ ಅಧಿಕಾರ ವರ್ಗದವರು ರೈತರನ್ನು ಬಗೆಬಗೆಯ ಸಂಕಟಕ್ಕೀಡು ಮಾಡುವುದನ್ನು ಗೌಸ್‌ಖಾನ್, ಶಾನುಭೋಗ ಮೌಜೀಲಾಲ್, ಸಕ್ಖೂ ಚೌಧರಿ, ಡಾಕ್ಟರ್ ಪ್ರಿಯನಾಥ್, ವಕೀಲ ಇರ್‌ಫಾನ್ ಅಲಿ ಮುಂತಾದ ಪಾತ್ರಗಳಲ್ಲಿ ವ್ಯಾಪಕ ವಾಗಿ ಕಾಣಬಹುದಾಗಿದೆ. ಈ ಆರಂಭದ ಕೃತಿಯಲ್ಲೇ ರೈತರ ಸಲುವಾಗಿ, ದಲಿತ ಸಮಾಜದ ಸಲುವಾಗಿ ಪ್ರೇಮಚಂದರಲ್ಲಿ ಸಹಜವಾಗಿದ್ದ ಸಾತ್ವಿಕ ಆತ್ಮವಿಶ್ವಾಸವನ್ನು ರೈತಬಳಗದ ಕಾದಿರ್‌ಖಾನ್, ಮನೋಹರ್, ಬಲರಾಜ್ ಮುಂತಾದ ಪಾತ್ರಗಳಲ್ಲಿ ಕಾಣುತ್ತೇವೆ. ಪ್ರತಿಭಟನೆ, ಸಂಘರ್ಷ, ಹೋರಾಟ ಗಳ ಸೂಚನೆಯನ್ನು ಹೊತ್ತ ಪಾತ್ರ ಬಲರಾಜನದು.

ಹತಾಶ ಪರಿಸ್ಥಿತಿಯಲ್ಲಿ ಸಿಲುಕಿದ್ದ ಕೃಷಿಕರ ಅಂಧ ವಿಶ್ವಾಸ, ಜಮೀನುದಾರಿಯ ಕುಟಿಲ ತಂತ್ರ ಗಳಿಂದಾಗಿ ಪರಸ್ಪರ ದ್ವೇಷಾಸೂಯೆಗಳು, ಇವುಗಳಿಂದ ಅವರು ಮತ್ತೂ ಕುಗ್ಗಿಹೋಗುವ ಚಿತ್ರಣ ವನ್ನೂ ಈ ಕೃತಿಯಲ್ಲಿ ಕಾಣಬಹುದಾಗಿದೆ. ಪ್ಲೇಗು, ಸಾಂಕ್ರಾಮಿಕ ರೋಗಗಳು, ಪ್ರವಾಹ, ಬಿರುಗಾಳಿ ಮುಂತಾದ ದುರ್ಘಟನೆಗಳು ಹೇಗೆ ದುರ್ಬಲರಾದ ಕೃಷಿಕರನ್ನೇ ಪ್ರಧಾನವಾಗಿ ಸಂಕಟಕ್ಕೀಡು ಮಾಡುತ್ತ ದೆಂಬುದನ್ನೂ ಈ ಕೃತಿಯಲ್ಲಿ ಪ್ರೇಮಚಂದರು ಯಥಾರ್ಥವಾಗಿ ಚಿತ್ರಿಸಿದ್ದಾರೆ. ಈ ಎಲ್ಲ ವ್ಯಕ್ತಿಚಿತ್ರಣ ಗಳೂ ಸಂದರ್ಭಗಳೂ ಪರಿಸ್ಥಿತಿಯನ್ನವಲಂಬಿಸಿ ತಮ್ಮತಮ್ಮ ನೆಲೆಗಳನ್ನು ಕಂಡುಕೊಳ್ಳುತ್ತ ನಡೆಯು ತ್ತವೆ.

'ಪ್ರೇಮಾಶ್ರಮ'ದಲ್ಲಿ ಚಿತ್ರಿತವಾಗಿರುವ ಕೃಷಿಕರ ಸಂಕಷ್ಟಗಳು 'ರಂಗಭೂಮಿ' ಕಾದಂಬರಿ ಯಲ್ಲಿ ಮತ್ತೂ ವ್ಯಾಪಕವಾಗಿ ಬೆಳೆಯುತ್ತಲ್ಲದೆ ಇದರೊಂದಿಗೆ ಜಾನ್ ಸೇವಕರ ಸಿಗರೇಟ್ ಫ್ಯಾಕ್ಟರಿ ಯಿಂದಾಗಿ ಗ್ರಾಮಜೀವನದಲ್ಲಿ ಅಮಾನವೀಕರಣದ ಅನಿಷ್ಟ ತಲೆಹಾಕಿ ಹೊಸ ಹೊಸ ಸಮಸ್ಯೆಗಳನ್ನು ತಂದೊಡ್ಡುವ ವಾಸ್ತವ ಚಿತ್ರಣವನ್ನೂ ಕಾಣಬಹುದಾಗಿದೆ.

೧೯೨೦ ರಿಂದ ೧೯೩೪ರ ವರೆವಿಗೆ 'ಪ್ರೇಮಾಶ್ರಮ', 'ರಂಗಭೂಮಿ' 'ಕಾಯಾಕಲ್ಪ' 'ಕರ್ಮಭೂಮಿ' ಕಾದಂಬರಿಗಳು ಹಾಗೂ ಅನೇಕ ಸಣ್ಣ ಕಥೆಗಳಲ್ಲಿ ಪ್ರೇಮಚಂದರ ಸಾಮಾಜಿಕ ಕಳಕಳಿ ಪರಿಹಾರಕ್ಕಾಗಿ ಚಿಂತನೆ ಮಾಡುತ್ತಾ ಸಾಗಿದ್ದನ್ನು ಅಡಿಗಡಿಗೂ ಕಾಣಬಹುದಾಗಿದೆ. ಈ ಹೊತ್ತಿಗೆ ದೇಶದಲ್ಲಿ ಪ್ರಬಲವಾಗಿ ಬೆಳೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮ, ಗಾಂಧೀಜಿಯ ಪ್ರಭಾವ ಬಳಿಕ ನೆಹರು ಪ್ರಭಾವ ಅವರನ್ನು ಬಹಳವಾಗಿ ಆಕರ್ಷಿಸಿತ್ತು. ರಾಜಕೀಯವಾಗಿ ಸ್ವರಾಜ್ಯ ಸಾಧನೆ, ಸಾಮಾಜಿಕವಾಗಿ ಹರಿಜನೋದ್ಧಾರ, ಕೋಮುವಾರು ಸಹಯೋಗ, ಗ್ರಾಮರಾಜ್ಯ ಮುಂತಾದ ಘೋಷಣೆಗಳ ಲಾಂಛನ ದಲ್ಲಿ ಬೆಳೆಯುತ್ತಿದ್ದ ಗಾಂಧೀ ಚಳುವಳಿ ಅವರನ್ನು ಸಹಜವಾಗಿಯೆ ಮುಟ್ಟಿತು. ತ್ಯಾಗ, ಪ್ರೇಮ, ಸತ್ಯ, ಅಹಿಂಸೆ ಇವುಗಳ ವೈಯಕ್ತಿಕ ಪ್ರಜ್ಞೆಯೇ ಗಾಂಧೀವಾದದ ಆಧಾರವಾಗಿತ್ತು. ಪ್ರೇಮಚಂದರು ತಮ್ಮ ವೈಯಕ್ತಿಕ ಜೀವನದಲ್ಲಿ ಈ ಎಲ್ಲ ಮೌಲ್ಯಗಳನ್ನೂ ನಿರಾಡಂಬರವಾಗಿ ಅನುಷ್ಠಾನಕ್ಕೆ ತಂದುಕೊಂಡಿದ್ದರು. ಅವರ ವೈಯಕ್ತಿಕ ಜೀವನ ಅವರ ಸಾಮಾಜಿಕ ಪ್ರಜ್ಞೆಯ ಆಕರ ಸೋಪಾನವೇ ಆಗಿತ್ತು. ಈ ಮಾರ್ಗ ದಲ್ಲಿ ಆತ್ಮವಿಶ್ವಾಸದ ದಾರ್ಢ್ಯವನ್ನವರು ಬೆಳೆಸಿಕೊಂಡಿದ್ದರು.

ಸಾಂಪ್ರದಾಯಿಕತೆಯ ಮೂಕಪ್ರಸಾದವಾಗಿ ಬಂದಿದ್ದ ಒಲ್ಲದ ಹೆಣ್ಣು ಅವರ ಜೀವನದಿಂದ ಕಣ್ಮರೆಯಾದಾಗ ಅವರು ಸಾಮಾಜಿಕ ಕರ್ತವ್ಯವೊಂದನ್ನು ತಮ್ಮ ವೈಯಕ್ತಿಕ ಜೀವನದಲ್ಲಿ ನಿರಾಡಂಬರ ವಾಗಿ ನೆರವೇರಿಸಿಕೊಂಡು ಕೃತಕೃತ್ಯರಾಗಿದ್ದರು. ಬಾಲವಿಧವೆಯ ಬವಣೆಯನ್ನು ಕ್ರೂರ ಸಮಾಜ ವ್ಯವಸ್ಥೆಯ ಕಪುಶಾಪವಾಗಿ ಅವರು 'ಪ್ರತಿಜ್ಞಾ' ಎಂಬ ತಮ್ಮ ಪ್ರಥಮ ಕಾದಂಬರಿಯಲ್ಲೇ ಚಿತ್ರಿಸಿ ದ್ದರು. ಬಾಲವಿಧವೆಯನ್ನು ಮದುವೆಯಾಗಬೇಕೆಂಬ ಅವರ ಸಂಕಲ್ಪ ದೃಢವಾಗಿತ್ತು. ೧೯೦೬ರಲ್ಲಿ ಅವರು ಶಿವರಾಣಿದೇವಿಯವರನ್ನು ಮದುವೆಯಾದದ್ದು ಹೀಗೆ. ಒಂದು ದೊಡ್ಡ ಸಾಮಾಜಿಕ ಸಮಸ್ಯೆ

ಯನ್ನು ತಮ್ಮ ವೈಯಕ್ತಿಕ ಬಾಳಿನಲ್ಲೇ ಸಾಂಕೇತಿಕವಾಗಿ ಪರಿಹರಿಸಿಕೊಂಡರೆಂಬಂತೆ ಅವರ ದಾಂಪತ್ಯ, ಎಷ್ಟೇ ಆರ್ಥಿಕ ಸಂಕಷ್ಟಗಳಿಗೀಡಾದರೂ, ಸಹಯೋಗ ಭಾವನೆಯಿಂದ ಮತ್ತೂ ದೃಢವಾಯಿತಲ್ಲದೆ ಶಿವರಾಣಿದೇವಿಯವರು ಪತಿಯೊಂದಿಗೆ ಸಾಹಿತ್ಯಕ ವಿಚಾರಗಳಲ್ಲೂ ಪಾಲುಗೊಳ್ಳುವಂತಾಯಿತು. 'ಪ್ರೇಮ್‌ಚಂದ್-ಘರ್‌ಮೆ' ಎಂಬ ಶಿವರಾಣಿದೇವಿಯವರ ಕೃತಿ ಅವರ ದಾಂಪತ್ಯ ಅದೆಷ್ಟು ಸಫಲವಾಗಿ ಪಲ್ಲವಿಸಿತೆಂಬುದಕ್ಕೆ ಜೀವಂತ ನಿದರ್ಶನವಾಗಿದೆ.

ಬಡತನದಿಂದಾಗಿ ಮೆಟ್ರಿಕ್ಯುಲೇಷನ್‌ಗೆ ಅವರ ಶಿಕ್ಷಣ ನಿಂತಿತ್ತು. ಬಳಿಕ ಅವರು ಸ್ವಪ್ರಯತ್ನದಿಂದ ಇಂಟರ್‌ಮಿಡಿಯಟ್ ಮುಗಿಸಿ ಖಾಸಗಿ ವಿದ್ಯಾರ್ಥಿಯಾಗಿ ಸ್ವಂತ ವ್ಯಾಸಂಗ ಮಾಡಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಬಿ.ಎ. ಪದವಿ ಪಡೆದುಕೊಂಡರು. ಹೀಗೆ ಅವರು ಸ್ವಪ್ರಯತ್ನದಿಂದ, ದುಡಿಮೆಯಿಂದ ಆತ್ಮವಿಶ್ವಾಸ ಆತ್ಮದಾರ್ಢ್ಯಗಳನ್ನು ಬೆಳೆಸಿಕೊಂಡಿದ್ದರು. ತ್ಯಾಗವೂ ಅಷ್ಟೇ ಸಹಜವಾಗಿ ಅವರಿಗೆ ಸಾಧಿಸಿತ್ತು. ೧೯೨೦ರಲ್ಲಿ ಅಸಹಕಾರ ಚಳುವಳಿಗೆ ಓಗೊಟ್ಟು ತಮ್ಮ ಸಹಾಯಕ ಶಾಲಾ ಇನ್‌ಸ್ಪೆಕ್ಟರ್ ಹುದ್ದೆಗೆ ನಿರಾತಂಕರವಾಗಿ ರಾಜೀನಾಮೆಯಿತ್ತು ಜೀವನಪರ್ಯಂತ ಲೇಖನಿ ಹಿಡಿದ ದಲಿತ ಸಮಾಜದ ಸಿಪಾಯಿಯೇ ಆದರು. ೧೯೨೮ರಲ್ಲಿ ಅಲವರದ ದೇಶೀ ಮಹಾರಾಜರು ಬಂಗ್ಲೆ, ಸಿಬ್ಬಂದಿ, ಕಾರು ಸಮೇತ ೪೦೦ ರೂಪಾಯಿ ವೇತನದ ನೌಕರಿಗೆ ಪ್ರೇಮಚಂದರನ್ನು ಆಹ್ವಾನಿಸಿದಾಗ ಅಷ್ಟೇ ಸರಳವಾಗಿ ಅವರು ಅದಕ್ಕೆ ಕೈಮುಗಿದುಬಿಟ್ಟರು. ೧೯೩೪ರ ಬಳಿಕ ಮುಂಬಯಿಯ ಚಲನಚಿತ್ರ ಸಂಸ್ಥೆಯೊಂದು ಅವರಿಗೆ ವರ್ಷಕ್ಕೆ ಆರು ಕಥೆಗಳನ್ನು ಬರೆದುಕೊಡಲು ೮೦೦೦ ರೂಪಾಯಿಗಳ ಸಂಭಾವನೆಯ ಕರಾರಿನ ಮೇರೆ ನೇಮಕ ಮಾಡಿಕೊಂಡಿತ್ತು. ಆದರೆ, ಚಲನಚಿತ್ರ ಮಾಧ್ಯಮದಲ್ಲಿ ಮಾರುಕಟ್ಟೆಯ ಒತ್ತಡಕ್ಕೆ ಕಲೆಯು ಅವನತಿಯೇ ಆಗುತ್ತದೆಂದು ಪ್ರೇಮಚಂದರಿಗೆ ಮನವರಿಕೆಯಾಗುತ್ತಲೇ, ಸಂಭಾವನೆಯ ಆಮಿಷಕ್ಕೆ ಮಣಿಯದೆ ಅದನ್ನು ಪರಿತ್ಯಜಿಸಿ ಅವರು ಬನಾರಸ್‌ಗೆ ಬಂದುಬಿಟ್ಟರು. ಹೀಗೆ ಸತ್ಯಸಂಧತೆ, ಪ್ರಾಮಾಣಿಕತೆ, ತ್ಯಾಗ, ದಲಿತ ಸಮಾಜಪ್ರಜ್ಞೆ ಅವರಲ್ಲಿ ಸಹಜ ಗುಣಗಳೇ ಆಗಿದ್ದಾಗ ಗಾಂಧೀಜಿಯ ಕರೆ ಅವರನ್ನು ಸೆಳೆದದ್ದರಲ್ಲಿ ಏನೂ ಅಚ್ಚರಿಯಿಲ್ಲ.

'ಪ್ರೇಮಾಶ್ರಮ' ಕಾದಂಬರಿಯಲ್ಲಿ ವಸ್ತುನಿಷ್ಠೆಯಿಂದ ಕೃಷಿಕರ ಸಮಸ್ಯೆಗಳನ್ನು ಚಿತ್ರಿಸಿದ ಪ್ರೇಮಚಂದರು, ಆ ಸಮಸ್ಯೆಗಳಿಗೆ ಗಾಂಧೀವಾದದ ಸರ್ವೋದಯ ಸೂತ್ರವಾದ ಹೃದಯ ಪರಿವರ್ತನೆಯನ್ನು ಪರಿಹಾರವಾಗಿ ಸೂಚಿಸಿರುತ್ತಾರೆ. ಪ್ರೇಮಶಂಕರರ ಪಾತ್ರ ಗಾಂಧೀಜಿಯನ್ನು ಬಹುಮಟ್ಟಿಗೆ ಹೋಲುತ್ತದೆ; ಕಾದಂಬರಿಯ ಆದರ್ಶಮಾಧ್ಯಮವಾಗುತ್ತದೆ. ಜ್ಞಾನಶಂಕರನ ಅಣ್ಣ ಪ್ರೇಮಶಂಕರರು ಸಮಾಜಸೇವೆ ಸುಧಾರಣೆಗಳ ಕನಸನ್ನು ಹೊತ್ತು ಅಮೆರಿಕದಿಂದ ಆಗಮಿಸುತ್ತಾರೆ. ಪಿತ್ರಾರ್ಜಿತ ಆಸ್ತಿಯನ್ನವರು ಪರಿತ್ಯಜಿಸಿ ಸೇವಾಕಾರ್ಯದಲ್ಲಿ ತೊಡಗುತ್ತಾರೆ. ಹಾಜೀಗಂಜ್‌ನಲ್ಲಿ ಪ್ರವಾಹದಿಂದಾಗಿ ಎಷ್ಟೋ ಹಳ್ಳಿಗಳು ಮುಳುಗಿಹೋದಾಗ ಹಳ್ಳಿಗರ ಸಹಾಯದಿಂದ ಅವರು ಅಣೆಕಟ್ಟು ನಿರ್ಮಿಸುತ್ತಾರೆ. ತ್ಯಾಗ, ಪ್ರೇಮ, ಸೇವೆಗಳಿಂದ ಪ್ರೇಮಶಂಕರರು ಹಳ್ಳಿಗರ ಆರಾಧ್ಯಮೂರ್ತಿಯಾಗುತ್ತಾರೆ. ಅವರಿಗಾಗಿ ಹಳ್ಳಿಗರು ಒಂದು ಕುಟೀರವನ್ನು ನಿರ್ಮಿಸುತ್ತಾರೆ. ಗಾಂಧೀಜಿಯ ಸಬರ್ಮತಿ ಆಶ್ರಮವೇ ಇಲ್ಲಿ ಸಾಂಕೇತಿಕವಾಗಿ ಪ್ರತಿಫಲಿಸಿದೆ ಎನ್ನಬಹುದು.

ಕ್ರಮೇಣ ಜ್ಞಾನಶಂಕರನ ಮಗ ಮಾಯಾಶಂಕರನೂ ಪ್ರೇಮಶಂಕರರ ಪ್ರಭಾವಕ್ಕೊಳಗಾಗಿ ತನ್ನ ಜಮೀನ್ದಾರಿಯನ್ನು ಪರಿತ್ಯಾಗ ಮಾಡಿ ಎಲ್ಲವನ್ನೂ ಕೃಷಿಕರಿಗೇ ಹಂಚಿ ಅವರೊಡನೆ ತಾನೂ ಸೇವಾಭಾವದಿಂದ ದುಡಿಯುತ್ತಾ ಸರಳ ಜೀವನವನ್ನು ನಡೆಸತೊಡಗುತ್ತಾನೆ. ಲಖನಪುರ ರಾಮರಾಜ್ಯವೇ ಆಗಿಬಿಡುತ್ತದೆ. ಮಗನಿಂದಾದ ಈ ವಜ್ರಾಘಾತವನ್ನು ತಾಳಲಾರದೆ ಜ್ಞಾನಶಂಕರ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

'ರಂಗಭೂಮಿ' ಕಾದಂಬರಿಯಲ್ಲಾದರೂ ಗಾಂಧೀ ಚಳುವಳಿಯ ಮತ್ತೊಂದು ಮುಖವಾದ ಸತ್ಯಾಗ್ರಹವನ್ನೇ ಪರಿಹಾರಸೂತ್ರವನ್ನಾಗಿ ಪ್ರೇಮಚಂದರು ಅಂಧ ಭಿಕ್ಷುಕ ಸೂರದಾಸನ ಪಾತ್ರದಲ್ಲಿ ಸೂಚಿಸುವ ಪ್ರಯತ್ನ ಮಾಡಿದ್ದಾರೆ. ಔದ್ಯೋಗೀಕರಣದ ವಿರುದ್ಧ ಗಾಂಧೀಜಿ ನಡೆಸಿದ ಚಳುವಳಿಯ ಪ್ರತಿಧ್ವನಿಯನ್ನೂ ಈ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಈ ಪ್ರಕರಣದಲ್ಲಿ ನಾಟಕೀಯ ಘಟನೆಗಳೇ

ಪ್ರಧಾನವಾಗಿ ಬೆಳೆದು ವಿನಯ ಮತ್ತು ಸೋಫಿಯಾರ ಆತ್ಮಹತ್ಯೆ ಹಾಗೂ ಸೂರದಾಸನ ಸಾವು ವಾಸ್ತವಿಕ ಸಮಸ್ಯೆಗಳನ್ನು ಇದ್ದಂತೆಯೇ ಬಿಟ್ಟು ಕಾಲ್ಪನಿಕ ಸಮಾಧಾನದ ಭ್ರಮೆಯನ್ನು ಮಾತ್ರ ನೀಡುತ್ತದೆ.

ಹೀಗಾಗಿ ಈ ಕೃತಿಗಳಲ್ಲಿ ವಸ್ತುಸ್ಥಿತಿಯ ದ್ವಂದ್ವಗಳನ್ನು ಚಿತ್ರಿಸುವಲ್ಲಿ ಪ್ರೇಮಚಂದರು ತೋರಿದ ಸಜೀವ ಅಭಿವ್ಯಕ್ತಿ ಪರಿಹಾರ ಸೂಚಿಸುವ ಆದರ್ಶ ಮಾಧ್ಯಮಗಳಲ್ಲಿ ಕಾಣುವಂತಿರಲಿಲ್ಲ. ತಮ್ಮ ವಾಂಛಿತ ಸಮಾಧಾನಕ್ಕೆ ಸಮಸ್ಯೆಯನ್ನು ಸಂತೈಸಿದಂತಾಯಿತೇ ಹೊರತು ವಸ್ತುಸ್ಥಿತಿಯಲ್ಲಿ ಅದನ್ನು ತರಲಾಗದೆಂಬ ಅರಿವೊಂದು ಕಡೆಯಾದರೆ ಬೆಳೆಯುತ್ತ ಹೋಗುತ್ತಿದ್ದ ಸಮಾಜದ ರೋಗದ ಬಾಧೆ ಅವರನ್ನು ಮತ್ತೂ ವ್ಯಸ್ತರನ್ನಾಗಿಸಿ ಚಿಂತನೆಗೀಡುಮಾಡಿತು. ಈ ಅವಧಿಯ ಲೇಖನಗಳಲ್ಲಿ ಅವರ ತುಮುಲ, ತೊಳಲಾಟ, ಆತ್ಮವಿಮರ್ಶೆಗಳು ಮಾನವತಾವಾದಿ ಚೇತನದ ದಾರ್ಶನಿಕ ದಾಖಲೆಗಳೇ ಆಗಿವೆ:

"ಕತ್ತಲ ಕೋಣೆಯಲ್ಲಿ ದುಡಿದು, ಬಳಲಿ ಬೆಂಡಾದಾಗ ಮಾನವ ಹೊಸತೊಂದು ನಿರ್ಮಲ ವಾತಾವರಣದ ಪರಿಶುದ್ಧ ಹವೆಯಲ್ಲಿ ಆನಂದವನ್ನನುಭವಿಸಲು ಹವಣಿಸುತ್ತಾನೆ. ಆದರ್ಶವಾದವು ಉತ್ತಮ ಚಾರಿತ್ರ್ಯದ, ಪವಿತ್ರ ಹೃದಯದ, ನಿಃಸ್ವಾರ್ಥತೆಯ, ವಾಸನಾರಹಿತವಾದ ಸಾಧುಪ್ರಕೃತಿಯ ಸಜ್ಜನರನ್ನು ದರ್ಶನ ಮಾಡಿಸುತ್ತದೆ. ಹೀಗಿದ್ದರೂ ಈ ಸಚ್ಚಾರಿತ್ರ್ಯವುಳ್ಳ ವ್ಯಕ್ತಿಗಳು ವ್ಯವಹಾರಕುಶಲರೆನಿಸದೆ. ಈ ಸರಳ ವ್ಯವಹಾರದಲ್ಲಿ ಅವರಿಗೆ ಮೋಸವೇ ಆಗಬಹುದು...ಈ ಸಂದರ್ಭದಲ್ಲಿ ವಾಸ್ತವತೆ ನಮ್ಮ ಕಣ್ತೆರೆಯುತ್ತದೆ. ಆದರ್ಶವಾದವಾದರೋ ಬೇರೊಂದು ಲೋಕಕ್ಕೆ ಕರೆದೊಯ್ಯುತ್ತದೆ. ಆದರೆ, ಆದರ್ಶವಾದದಲ್ಲಿ ಈ ಗುಣವುಳ್ಳ ಸಚ್ಚಾರಿತ್ರ್ಯವನ್ನು ಚಿತ್ರಿಸುವುದರಿಂದ ಕೇವಲ ಸಿದ್ಧಾಂತ ಪೂರೈಸಿದಷ್ಟೇ ಸಾಧಿಸಿದಲ್ಲಿ ಅದು ಸಾರ್ಥಕವಾಗುವುದಿಲ್ಲ."[11]

೧೯೩೦ರಲ್ಲಿ ಋಷಭ್‌ಚರಣ್ ಎಂಬುವರಿಗೆ ಬರೆದ ಪತ್ರದಲ್ಲಿ ಪ್ರೇಮಚಂದರು ತಮ್ಮ ತೊಳಲಾಟವನ್ನು ಬಹು ಮಾರ್ಮಿಕವಾಗಿ ನಿರೂಪಿಸಿದ್ದಾರೆ:

"ನಮ್ಮಲ್ಲಿ ಯಾರೂ ವಾಸ್ತವತಾವಾದಿಗಳಲ್ಲ. ನಮ್ಮಲ್ಲಿ ಯಾರೂ ಜೀವನವನ್ನು ಅದರ ಯಥಾರ್ಥ ಅಥವಾ ವಾಸ್ತವ ರೂಪದಲ್ಲಿ ತೋರಿಸುವುದಿಲ್ಲ. ಅದನ್ನು ಅದರ ವಾಂಛಿತ ರೂಪದಲ್ಲೇ ತೋರಿಸುತ್ತೇವೆ. ನಾನು ನಗ್ನ ಯಥಾರ್ಥವಾದದ ಪ್ರೇಮಿಯೂ ಅಲ್ಲ".[12]

೧೯೨೯ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯೊಂದಿಗೆ ನೆಹರು ಪ್ರಭಾವದಲ್ಲಿ ಪ್ರಜಾಪ್ರಭುತ್ವದ ಸುಖೀರಾಜ್ಯ ಕಲ್ಪನೆಯ ಉದಾತ್ತ ವಿಚಾರಗಳು ಕಾಣಿಸಿಕೊಂಡವು. ೧೯೩೨ರಲ್ಲಿ ಪ್ರಕಟವಾದ ಪ್ರೇಮಚಂದರ ಕಾದಂಬರಿ 'ಕರ್ಮಭೂಮಿ' ಈ ಪ್ರಭಾವದಲ್ಲಿ ಮೂಡಿದ ಕೃತಿಯೆನ್ನಬಹುದು. ಅಮರಕಾಂತನ ಪಾತ್ರದಲ್ಲಿ ನೆಹರು ಪ್ರತೀಕವನ್ನೆ ಕಾಣಬಹುದಾಗಿದೆ.

ಇದೇ ಅವಧಿಯಲ್ಲಿ ಪ್ರೇಮಚಂದರು ತಮ್ಮ ಆದರ್ಶಮಾಧ್ಯಮಗಳನ್ನು ವಸ್ತುಸ್ಥಿತಿಗೆ ಒರೆ ಹಚ್ಚುತ್ತಾ ಸಾಗಿದರು. ರಾಜಕೀಯ ಘಟನೆಗಳನ್ನು ವಿಶ್ಲೇಷಿಸತೊಡಗಿದರು. ಪ್ರಚಲಿತ ಸಮಾಜ ಸಂಘಟನೆಯ ಮೂಲಭೂತ ಸ್ವರೂಪವನ್ನು ತೀಕ್ಷ್ಣವಾಗಿ ಅರಿಯುತ್ತ ಹೋದರು.

ಸ್ವರಾಜ್ಯ ಸಾಧನೆಯಲ್ಲಿ ತುಂಬ ಭರವಸೆಯಿಟ್ಟಿದ್ದ ಪ್ರೇಮಚಂದರು ಗಾಂಧೀ ನೆಹರು ಪ್ರಭಾವದಲ್ಲಿ ಬೆಳೆಯುತ್ತಿದ್ದ ಸ್ವಾತಂತ್ರ್ಯಸಂಗ್ರಾಮವನ್ನೂ ಕಾಂಗ್ರೆಸ್ಸಿನ ರಾಜಕೀಯ ಘಟನೆಗಳನ್ನೂ ಸೂಕ್ಷ್ಮಾತಿಸೂಕ್ಷ್ಮವಾಗಿ ಗಮನಿಸುತ್ತ ವಿಶ್ಲೇಷಿಸುತ್ತ ವಿಮರ್ಶಿಸುತ್ತ ಬಂದರು.

ತಿಲಕರ ಉಗ್ರಪಂಥ ಗೋಖಲೆಯವರ ಸೌಮ್ಯ ಪಂಥಕ್ಕಿಂತ ಹೆಚ್ಚಾಗಿ ಪ್ರೇಮಚಂದರಿಗೆ ಒಡಿಸಿತ್ತು. ತಮ್ಮ ಕಾದಿರ್‌ಖಾನ್, ಮನೋಹರ್, ಬಲರಾಜ್, ಹಲ್ಕೂ, ಮುನ್ನೀ, ಶಂಕರರ ಬಳಗಕ್ಕೆ ತಿಲಕರು ಸಮೀಪವಾಗಿದ್ದರೆಂತಲೇ ಪ್ರೇಮಚಂದರು ಅವರನ್ನು ಒಲಿದದ್ದು.

"ವರ್ತಮಾನ ಸಂವಿಧಾನವನ್ನು ಸುಧಾರಣೆ ಮಾಡುವುದು ಗೋಖಲೆಯವರ ಯೋಜನೆ, ಅದರ ಪುನರ್ನಿರ್ಮಾಣ ಮಾಡುವುದು ತಿಲಕರ ಯೋಜನೆ. ತಮ್ಮ ಕಾರ್ಯಸಾಧನೆಗೆ ನೌಕರಶಾಹಿ ಯೊಂದಿಗೆ ಬೆಸೆದುಕೊಳ್ಳುವುದು ಗೋಖಲೆಯವರಿಗೆ ಅನಿವಾರ್ಯವಾಗಿದ್ದರೆ. ನೌಕರಶಾಹಿಯೊಂದಿಗೆ ಹೋರಾಟ ನಡೆಸುವುದು ತಿಲಕರ ಅನಿವಾರ್ಯ...ಗೋಖಲೆ ಎರಡನೆಯವರ ಸಹಾಯದ ಮೇಲೆ ತಮ್ಮ ಭರವಸೆ ಇಡುತ್ತಾರೆ. ತಿಲಕರು ಕೇವಲ ತಮ್ಮ (ಜನ) ಶಕ್ತಿಯನ್ನೇ ನೆಚ್ಚುತ್ತಾರೆ...ಗೋಖಲೆ ತಮ್ಮ ಯುಗದೊಂದಿಗಿದ್ದರು. ತಿಲಕರು ಅದಕ್ಕಿಂತ ಬಹು ಮುಂದೆ (ಹೋಗಿದ್ದರು.)"[13] ಆದರೆ, ಗಾಂಧೀಜಿ ಗೋಖಲೆಯವರ ನಾಯಕತ್ವವನ್ನೇ ಆಯ್ದುಕೊಂಡಾಗ ಪ್ರೇಮಚಂದರಿಗೆ ತುಂಬ ನಿರಾಶೆಯೇ ಆಯಿತು.

ಕಾಂಗ್ರೆಸ್ಸಿನಲ್ಲಿ ನಿಮ್ಮ ಪಕ್ಷ ಯಾವುದು–ಎಂದು ಮಿತ್ರರಾದ ದಯಾನಾರಾಯಣ್ ನಿಗಂ ಪ್ರಶ್ನೆಗೆ ಉತ್ತರವಾಗಿ ಪ್ರೇಮಚಂದರು ತಮ್ಮ ಚಿತ್ತಕ್ಷೋಭೆಯನ್ನೆ ಹೊರಗೆಡಹಿದರು:

"ನಾನು ಯಾವ ಪಕ್ಷದಲ್ಲಿದ್ದೇನೆ ಎಂದು ನೀವು ಕೇಳಿದ್ದೀರಿ. ನಾನು ಯಾವ ಪಕ್ಷದಲ್ಲಿಯೂ ಇಲ್ಲ. ಏಕೆಂದರೆ. ಎರಡು ಪಕ್ಷಗಳೂ ಕಾರ್ಯತಃ ಕೆಲಸ ಮಾಡುತ್ತಿಲ್ಲ. ಜನಸಾಮಾನ್ಯರ ರಾಜಕೀಯ ಶಿಕ್ಷಣ ವನ್ನು ತನ್ನ ನಿಯಮಬದ್ಧ ಕಾರ್ಯಾನ್ವಯ ನೀತಿಯನ್ನಾಗಿ ಹೊಂದಿರುವಂಥ ಮುಂಬರುವ ಪಕ್ಷದ ಸದಸ್ಯ ನಾನು."[14]

ಚೌರಿಚೌರ ಪ್ರಕರಣದಲ್ಲಿ ನಡೆದ ಹಿಂಸಾಕೃತ್ಯಗಳಿಂದಾಗಿ ಗಾಂಧೀಜಿ ಕಂದಾಯ ಸತ್ಯಾಗ್ರಹವನ್ನು ದೇವರ ಸೂಚನೆಯಂತೆ ಹಿಂತೆಗೆದುಕೊಂಡುದಾಗಿ ಘೋಷಿಸಿದರು. ಮುಂದೆ. ಮೇಲಿಂದ ಮೇಲೆ. ಅವರಿಂದ ಈ ದೇವರ ಸೂಚನೆಗಳ ಮಾತು ಕೇಳತೊಡಗಿತು. ರಾಜಕೀಯದೊಂದಿಗೆ ಭ್ರಾಮಕ ಅಧ್ಯಾತ್ಮದ ಕಲಬೆರಕೆಯಾಗತೊಡಗಿತು. ಇದರಿಂದ. ಪ್ರೇಮಚಂದರಿಗೆ ಕಣ್ಣು ತೆರೆದಂತಾಗಿ ಅವರು 'ಶೇಲಮ್ ತಾಲಾ' ಎಂಬ ಲೇಖನದಲ್ಲಿ ಗಾಂಧೀಜಿಯ ನಾಯಕತ್ವವನ್ನು ಕರಾರುವಾಕ್ಕಾಗಿ ಟೀಕಿಸಿದರು:

"ರಾಜನೀತಿಯನ್ನು ಅಧ್ಯಾತ್ಮದ ಮೂಲದಿಂದೆತ್ತಿಕೊಂಡು. ಅಧ್ಯಾತ್ಮದ ಸಿದ್ಧಾಂತಗಳಿಂದ ಅದನ್ನು ನಡೆಸಿಕೊಂಡು ಹೋಗುವುದು ಪ್ರಪಂಚಕ್ಕೆ ಒಂದು ಹೊಸ ಅನುಭವ. ಅದು ಫಲಕಾರಿ ಯಾಗುವ ಆಶೆಗಿಂತ ಅಸಫಲವಾಗುವ ಭಯವೇ ಅಧಿಕ. ಇಂದಿಗೆ ಹದಿಮೂರು ವರ್ಷಗಳ ಹಿಂದೆಯೆ ಈ ಅಮೋಘ ಅಸ್ತ್ರ (ಸತ್ಯಾಗ್ರಹ) ವನ್ನು ಗಾಂಧೀಜಿ ಜನರ ಕೈಗೆ ಕೊಟ್ಟಾಗ ಅದನ್ನು ಅವರು ಬಳಸ ಬಲ್ಲರೆ ಇಲ್ಲವೆ ಎಂಬುದನ್ನು ಆಲೋಚಿಸಬೇಕಿತ್ತು. ಆ ಹೊತ್ತಿನಲ್ಲಿ ಅವರು ಕಾರ್ಯಕರ್ತರನ್ನು ಅರ್ಥ ಮಾಡಿಕೊಳ್ಳದೆ ಹೋಗಿದ್ದರೆ ಅದರ ಹೊಣೆಗಾರಿಕೆಯನ್ನು ಹದಿನಾರಾಣೆ ಕಾರ್ಯಕರ್ತರ ಮೇಲೆ ಹೊರಿಸು ವಂತಿಲ್ಲ. ಕಾರ್ಯಕರ್ತರು ತಮ್ಮ ಬುದ್ಧಿಸಾಮರ್ಥ್ಯಗಳಿಗನುಸಾರವಾಗಿ ಈ ಅಸ್ತ್ರವನ್ನು ಬಳಸಲು ಪ್ರಯತ್ನಿಸಿದರು. ಆ ಹೊತ್ತಿನಲ್ಲಿ ಗಾಂಧೀಜಿ ಇವರನ್ನೆಲ್ಲಾ ದೇವತೆಗಳೆಂದು ಭಾವಿಸಿದ್ದರೆ? ಅವರು ಮಾನವಸ್ವಭಾವವನ್ನು ಇಷ್ಟರವಟ್ಟಿಗೂ ಅರಿಯದಿದ್ದರೆ ಅದು ಅವರ ದೋಷ. ರಾಷ್ಟ್ರದ ನಾಯಕ ನೊಬ್ಬನಲ್ಲಿ ಇದು ಬಹಳ ದೊಡ್ಡ ದೋಷವಾಗಿರುತ್ತದೆ. ಇನ್ನು ಮುಂದೆ ನಾವು ರಾಜನೀತಿಯನ್ನು ರಾಷ್ಟ್ರಹಿತ ದೃಷ್ಟಿಯಿಂದಷ್ಟೆ ನೋಡಬೇಕಾಗುತ್ತದೆ."[15]

ಗಾಂಧೀಜಿಯ ಆದರ್ಶವಾದವನ್ನು ಕುರಿತು ಭ್ರಮನಿರಸನವಾಗತೊಡಗಿದ್ದ ಪ್ರೇಮಚಂದರು 'ಬೇಕಾರ್ ಬೈಠ್‌ನೆಸೆ ಕಾನ್ಸಿಲ್ ಮೆ ಜಾನಾ ಅಚ್ಛಾ ಹೈ.' ಎಂಬ ಲೇಖನದಲ್ಲಿ ಸಕ್ರಿಯ ಮಾನವತಾ ವಾದದ ಸೂತ್ರವನ್ನೇ ಪ್ರತಿಪಾದಿಸಿದರು:

"ಗಾಂಧೀಜಿಯ ಆದರ್ಶವಾದ ವ್ಯಾವಹಾರಿಕ ಆದರ್ಶವಾದ. ಎಲ್ಲ ವಾದಗಳೂ ಮನುಷ್ಯರಿಗೆ ಸೇವಕರಾಗಬೇಕೇ ಹೊರತು ಒಡೆಯರಾಗಬಾರದು ಎಂದು ಅವರಿಗೆ ತಿಳಿದಿರಲಿಕ್ಕೆ ಸಾಕು. ಯಾವುದೇ ವಾದದ ವಿಗ್ರಹವನ್ನು ನಿರ್ಮಿಸಿ ಅದನ್ನು ಪೂಜಿಸುವುದು ಹಾಗೂ ವಸ್ತುಸ್ಥಿತಿಯ ಕಡೆ ಕಣ್ಣು ಮುಚ್ಚಿ ಕೊಂಡುಬಿಡುವುದು ಪ್ರಗತಿಶೀಲ ಸಮಾಜದ ಧರ್ಮವಲ್ಲ. ಆದರೆ ಸಂಪ್ರದಾಯಗಳಂತೆಯೇ ಪ್ರತಿ ಯೊಂದು ನೀತಿ ಅಥವಾ ಕಾರ್ಯಕ್ರಮವೂ ಬಿಡಿಸಿಕೊಳ್ಳಲಾಗದಂಥ ಬಂಧನಕ್ಕೆ ಒಳಗಾಗಿಬಿಡುತ್ತ

ದೆಂಬುದೇ ಒಂದು ಅಪಾಯ. ಆ ಪರಂಪರೆಗಳನ್ನು ಪಾಲಿಸಿಕೊಂಡು ಬಂದು, ಅದಕ್ಕಾಗಿ ತ್ಯಾಗಮಾಡಿರುವಂಥವರು, ಕಷ್ಟಗಳನ್ನು ಎದುರಿಸಿರುವಂಥವರು, ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿರುವಂಥವರು ಸಂಪ್ರದಾಯದ ಮಹಂತರಂತೆ ತಮ್ಮ ನೇತೃತ್ವದ ಬಗ್ಗೆ ತಾವೇ ಮೋಹಕ್ಕೊಳಗಾಗುತ್ತಾರೆ."[16]

'ಕಾಂಗ್ರೆಸ್ ಕೀ ವಿಧಾಯಕ್ ಯೋಜನಾ' ಎಂಬ ಲೇಖನದಲ್ಲಿ, "ಸ್ವರಾಜ್ಯವನ್ನು ನಾವು ಬಯಸುವುದಾದರೂ ಏಕೆ? ರಾಷ್ಟ್ರವನ್ನು ಹೆಚ್ಚು ಹೆಚ್ಚು ಸುಖಮಯ ಸುಂದರಮಯವಾಗಿ ಮಾಡುವುದಕ್ಕಾಗಿ"[17] ಎಂದು ನಿರೂಪಿಸಿದ ಪ್ರೇಮಚಂದರ ಸರಳ ಮಾನವತಾ ಆಶಯ, ಕಾಂಗ್ರೆಸ್ ಪಕ್ಷದಲ್ಲಿ ಸೇರಿಕೊಂಡಿದ್ದ ವಿಭಿನ್ನ ಹಿತಾಸಕ್ತಿಗಳ ಜನರನ್ನು ಕಂಡು ಶಂಕೆಯಿಂದ ಮುದುಡಿತು.

'ಕಾಂಗ್ರೆಸ್ ಕೀ ಆರ್ಥಿಕ್ ಯೋಜನಾ' ಎಂಬ ಲೇಖನದಲ್ಲಿ ಅವರು ಕಳವಳದಿಂದ ಬರೆದರು:

"ಈಗ ಕಾಂಗ್ರೆಸ್ ಪಕ್ಷದಲ್ಲಿ ಎಲ್ಲ ಬಗೆಯ ಆಲೋಚನೆಗಳುಳ್ಳ ಜನರು ಸೇರಿಕೊಂಡಿದ್ದಾರೆ. ಅವರಲ್ಲಿ ಸ್ವರಾಜ್ಯದ ಅಪೇಕ್ಷೆಯೊಂದನ್ನು ಬಿಟ್ಟರೆ, ಉಳಿದಂತೆ ಸಾಮಾಜಿಕ, ಆರ್ಥಿಕ ಮುಂತಾದ ಸಿದ್ಧಾಂತಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಕಾಂಗ್ರೆಸ್ಸಿನಲ್ಲಿ ದೊಡ್ಡ ದೊಡ್ಡ ತಾಲೂಕುದಾರರು, ಜಮೀನುದಾರರು, ಭಾರಿಭಾರಿ ವ್ಯಾಪಾರಿಗಳು ಮತ್ತು ಬಂಡವಾಳಿಗರು ಸೇರಿಬಿಟ್ಟಿದ್ದಾರೆ. ಎಲ್ಲರೂ ಸ್ವರಾಜ್ಯವನ್ನು ತಮ್ಮ ತಮ್ಮ ಸ್ವಾರ್ಥದ ಕಣ್ಣಿನಿಂದ ನೋಡುತ್ತಿದ್ದಾರೆ. ಇದುವರೆಗೆ ಕಾಂಗ್ರೆಸ್ಸಿನ ರಾಜಕೀಯ ಮುಖ ಮಾತ್ರ ನಮ್ಮ ಮುಂದೆ ಇತ್ತು. ಅದರ ಸಾಮಾಜಿಕ ಮತ್ತು ಆರ್ಥಿಕ ಮುಖಗಳ ಬಗ್ಗೆ ಆಲೋಚಿಸಲೂ ನಮಗೆ ಸಮಯವಿರಲಿಲ್ಲ".[18]

'ಹೃದಯ ಪರಿವರ್ತನ'ವನ್ನು ಮುಗ್ಧ ಮಾನವತೆಯ ಹಿತೋತ್ಸಾಹದಿಂದ 'ಪ್ರೇಮಾಶ್ರಮ' ಕಾದಂಬರಿಯಲ್ಲಿ ಚಿತ್ರಿಸಿದ್ದ ಪ್ರೇಮಚಂದರು ಇದೀಗ ವಸ್ತುಸ್ಥಿತಿಯಲ್ಲಿ ಅದರ ವೈಫಲ್ಯವನ್ನು ಸಂಪೂರ್ಣವಾಗಿ ಮನಗಂಡು 'ಅಂಧಾ ಪೂಂಜೀವಾದ್' ಎಂಬ ಲೇಖನದಲ್ಲಿ ಸ್ಪಷ್ಟವಾಗಿ ಬರೆದರು:

"ಧನಿಕರು ರೈತರ ಹೀನಸ್ಥಿತಿಯ ಮೂಲಕ ಲಾಭ ಮಾಡಿಕೊಳ್ಳುವುದನ್ನು ಬಿಟ್ಟುಬಿಡುತ್ತಾರೆಂದು ಆಶಿಸುವುದು ನಾಯಿಯು ಚರ್ಮವನ್ನು ಕಾಯುತ್ತದೆಂದು ಆಶಿಸಿದಂತೆಯೇ ಸರಿ".[19]

ಕಾಂಗ್ರೆಸ್ಸಿನಲ್ಲಿ ಶರೀಕಾಗಿರುವ ಜಮೀನುದಾರರು ಹಾಗೂ 'ಪೂಂಜೀಪತಿ'ಗಳು ನಾಳೆ ಸ್ವರಾಜ್ಯ ಸಿಕ್ಕರೆ ಕಾದಿರ್‌ಖಾನ್, ಮನೋಹರ್, ಬಲರಾಜ್, ಹಲ್ಕೂ, ಮುನ್ನೀ, ಶಂಕರ ಮುಂತಾದ ತಮ್ಮ ದಲಿತ ಬಳಗವನ್ನು ಹುರಿದು ತಿಂದುಬಿಡುತ್ತಾರೆಂಬ ಅಪಾಯವನ್ನು ಕಂಡುಕೊಂಡು ಉದ್ವಿಗ್ನರಾದ ಪ್ರೇಮಚಂದರ ವಿಚಾರ ಸಹಯೋಗದಿಂದ ಸಂಘರ್ಷದತ್ತ ಸಾಗಿತು. 'ಸಹಯೋಗ್ ಯಾ ಸಂಘರ್ಷ್' ಎಂಬ ಲೇಖನದಲ್ಲಿ ಅವರು ಸಂಘರ್ಷದ ಕಹಳೆಯನ್ನೂದಿದರು. :

"ಬಾಳಿನಲ್ಲಿ ಸಹಯೋಗಕ್ಕೆ ಎಷ್ಟು ಮಹತ್ವವಿದೆಯೋ ಸಂಘರ್ಷಕ್ಕೂ ಅಷ್ಟೇ ಮಹತ್ವವಿದೆ. ಎಷ್ಟೋ ಸಂದರ್ಭಗಳಲ್ಲಿ ಸಹಯೋಗಕ್ಕಿಂತ ಸಂಘರ್ಷವೇ ಹೆಚ್ಚು ಫಲಕಾರಿಯಾಗುತ್ತದೆ. ಆದರೆ, ನಾವು ಪರಿಶೀಲಿಸಬೇಕಾಗಿರುವುದು, ಮಾನವತೆಗೆ ಯಾವ ನೀತಿ ಅನುಕೂಲಕರವಾಗಿದೆ, ಯಾವುದು ಪ್ರತಿಕೂಲಕರವಾಗಿದೆ ಎಂಬುದನ್ನು."[20]

ಈ ತನಕ ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ ನಿಟ್ಟಿನಲ್ಲೇ ತಮ್ಮ ದಲಿತ ಬಳಗದ ಸಮಸ್ಯೆಗಳನ್ನು ಬಿಡಿಸುತ್ತ ಬಂದ ಪ್ರೇಮಚಂದರು, ಇದೀಗ ತಮ್ಮ ಪಾತ್ರಗಳನ್ನೇ ಹಿಂಬಾಲಿಸುತ್ತಾ ಆರ್ಥಿಕ ರಂಗದ ನಿಷ್ಠುರ ಸೀಮೆಯನ್ನು ಪ್ರವೇಶಿಸಿದರು.

"ಇದು ಇಪ್ಪತ್ತನೆಯ ಶತಮಾನ ಎಂಬುದನ್ನು ನಾವು ಮರೆಯಲಾಗದು. ಸಾಂಪ್ರದಾಯಿಕತೆ ಇಲ್ಲಿ ಕೆಲವೇ ದಿನಗಳ ಅತಿಥಿಯಾಗಿರುತ್ತದೆ. ಭಾರತವನ್ನು ಬಿಟ್ಟರೆ ಬೇರೆಲ್ಲಿಯೂ ಅದಕ್ಕೆ ಶರಣು ದೊರೆಯಲಾರದು...ಮುಂಬರುವ ಯುಗ ಆರ್ಥಿಕ ಸಂಗ್ರಾಮದ ಯುಗ"[21] ಎಂಬ ಘೋಷಣೆಯೊಂದಿಗೆ ಮುನ್ನಡೆದ ಪ್ರೇಮಚಂದರಿಗೆ ಸಮಾಜದ ಪೂರ್ಣದರ್ಶನವೇ ಆಗತೊಡಗಿತು. ಅವರು ನೆಚ್ಚಿದ್ದ ಸ್ವರಾಜ್ಯ ಪ್ರಜಾಪ್ರಭುತ್ವ ಇನ್ನೂ ಅನೇಕ ಕಲ್ಪನೆಗಳೊಂದಿಗೆ ಕಳಚಿಬಿದ್ದುವು. ಈ ಸಮಾಜ ವ್ಯವಸ್ಥೆ ಉಕ್ಕಿನ ಕೋಟೆಯೇ ಆಗಿದೆ, ಇಲ್ಲಿ ಮೌಲ್ಯಗಳೂ ಆದರ್ಶಗಳೂ 'ಪೂಂಜೀಪತಿ'ಗಳ

ವೈಯಕ್ತಿಕ ಹಿತಾಸಕ್ತಿಯು ಜೇಡಜಾಲದ ಜೊಲ್ಲಿನ ಎಳೆಗಳೇ ಆಗಿಬಿಟ್ಟಿವೆ. ಇಲ್ಲಿ ಆದರ್ಶವಾದವು ಆದರ್ಶಗಳನ್ನು ಶುಷ್ಕ ಮಂತ್ರಪಠನವಾಗಿಸಿ ಮೌಲ್ಯಗಳನ್ನೇ ನುಂಗಿಹಾಕಿಬಿಡುತ್ತಿದೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ವ್ಯಕ್ತಿ ಸಮಾಜವನ್ನೇ ಬೇಟೆಯಾಡುತ್ತಿದ್ದಾನೆ. ಸಂಪನ್ಮೂಲಗಳೊಂದಿಗೆ ದ್ಯೂತವಾಡುತ್ತಿದ್ದಾನೆ. ಅಂತರರಾಷ್ಟ್ರೀಯ ವ್ಯವಹಾರದಲ್ಲಿ ನಿಷ್ಠುರವಾದ ಈ ಆರ್ಥಿಕ ಸೂತ್ರ ವಸಾಹತುಶಾಹಿಯನ್ನು ಬೆಳೆಸಿದೆ. ಮದ್ದುಗುಂಡುಗಳ ಬೃಹತ್ ಪ್ರಮಾಣದ ಕೈಗಾರಿಕೆಯು ಅಮಾನುಷ ಮಾಧ್ಯಮದಿಂದ ಪ್ರಬಲ ರಾಷ್ಟ್ರಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ, ಸ್ವಾತಂತ್ರ್ಯದ ಹೆಸರಿನಲ್ಲಿ ದುರ್ಬಲ ರಾಷ್ಟ್ರಗಳ ಸಂಪತ್ತನ್ನು ದೋಚಿ ಮುಕ್ಕಿಬಿಡುತ್ತಿವೆ.

ಭಾರತೀಯ ಸಾಮಾಯಿಕತೆಯ ಹೊಸ್ತಿಲ ಮೇಲೆ ನಿಂತು ಸಮಕಾಲೀನ ವಿಶ್ವವನ್ನವರು ದ್ರಷ್ಟಾರರಂತೆ ನೋಡತೊಡಗಿದರು.

"ಪ್ರಜಾಸತ್ತೆ ಸೋತುಹೋಗಿದೆ. ಒಂದು ನೂರ ಐವತ್ತು ವರ್ಷಗಳ ಬಳಿಕ ಇದು ನಡೆಯುವಂಥದಲ್ಲ ಎಂಬುದು ಗೊತ್ತಾಗಿದೆ."22 ಎಂದು ಘೋಷಿಸಿದ ಪ್ರೇಮಚಂದರು "ಜನ್ ಸತ್ತಾ ಕಾ ಪತನ್" ಎಂಬ ಲೇಖನದಲ್ಲಿ ಮಾನವತೆಯ ಮಾನದಂಡದಿಂದ ಪ್ರಜಾಪ್ರಭುತ್ವದ ವೈಫಲ್ಯವನ್ನು ಸಾರಿದರು:

"ಪ್ರಜಾಸತ್ತೆಯನ್ನು ಲೋಕ ಬಹಳ ಬೇಗ ಬಹಿಷ್ಕರಿಸುತ್ತಿದೆ...ಯಾರ ಬಳಿಯಲ್ಲಿ ಸಾಕಷ್ಟು ಹಣವಿರುತ್ತದೆಯೋ ಅವರು ಮತದಾರರ ಮೇಲೆ ಒಂದಲ್ಲ ಒಂದು ಬಗೆಯ ಒತ್ತಡವನ್ನು ಹಾಕಿ ನುಗ್ಗಿಬಿಡುತ್ತಾರೆ. ಕ್ರಮೇಣ ಬಂಡವಾಳಿಗರು ಅವರ ಮೇಲೆ ಪ್ರಭುತ್ವ ಸ್ಥಾಪಿಸಿಬಿಡುತ್ತಾರೆ. ಈ ಕಾರಣದಿಂದಲೇ ಒಂದು ಶತಮಾನದವರೆಗೆ ಪ್ರಜಾಸತ್ತೆ ಅಸ್ತಿತ್ವದಲ್ಲಿದ್ದರೂ ಲೋಕದಲ್ಲಿ ಸಂಘರ್ಷದ ಮನೋವೃತ್ತಿಯೇ ದಿನೇ ದಿನೇ ಹೆಚ್ಚುತ್ತಿದೆ".23

'ಸಂಗ್ರಾಮ್' ನಾಟಕದಲ್ಲಿ ಅವರ ಈ ವಿಚಾರವಾಣಿಯೇ ಪರಿಣಾಮಕಾರಿಯಾಗಿ ಧ್ವನಿಸಿರುವುದನ್ನು ಕಾಣಬಹುದು:

"ನಾವಿನ್ನೂ ಪ್ರಜಾಸತ್ತೆಯ ಆಡಳಿತ ವ್ಯವಸ್ಥೆಗೆ ಅರ್ಹರಾಗಿಲ್ಲ. ಖಂಡಿತವಾಗಿಯೂ ಇಲ್ಲ. ಅಮೆರಿಕ, ಫ್ರಾನ್ಸ್, ದಕ್ಷಿಣ ಅಮೆರಿಕ ಮೊದಲಾದ ದೇಶಗಳು ಬಹು ಆಡಂಬರದಿಂದ ಅದನ್ನು ವ್ಯವಸ್ಥೆಗೊಳಿಸಿದುವು. ಆದರೆ, ಅವುಗಳಲ್ಲಿ ಯಾವುದಕ್ಕೂ ಯಶಸ್ಸು ದೊರೆತಿಲ್ಲ. ಅಲ್ಲಿ ಇನ್ನೂ ಅಧಿಕಾರವೆಂಬುದು ಹಣದ ಹಾಗೂ ಆಸ್ತಿವಂತರ ಕೈಯಲ್ಲೇ ಕೇಂದ್ರೀಕೃತವಾಗಿದೆ. ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಎಷ್ಟೇ ಎಚ್ಚರಿಕೆಯಿಂದ ಚುನಾಯಿಸಿದರೂ, ಕೊನೆಗೆ ಅಧಿಕಾರ ಬೆರಳೆಣಿಕೆಯ ವ್ಯಕ್ತಿಗಳ ಕೈಗೇ ಹೋಗಿ ಸೇರುತ್ತದೆ. ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳು ಅದೆಷ್ಟು ದೂಷಿತವಾಗಿವೆಯೆಂದರೆ, ಜನತೆಯ ಬಹುಭಾಗ ಹಿಡಿಮಂದಿಯ ವಶಕ್ಕೊಳಗಾಗಿಬಿಟ್ಟಿದ್ದಾರೆ. ಜನತೆ ಅದೆಷ್ಟು ನಿರ್ಬಲವೂ ಅಶಕ್ತವೂ ಆಗಿದೆಯೆಂದರೆ ಶಕ್ತಿಶಾಲಿಯಾದ ವ್ಯಕ್ತಿಯ ಎದುರಿಗೆ ತಲೆಯೆತ್ತಿ ನಿಲ್ಲಲಾರದು...ಎಲ್ಲರಿಗೂ ಸಮಾನವಾದ ಅಧಿಕಾರಗಳು ಇರುವ, ಯಾವನೊಬ್ಬನೇ ಆಗಲಿ ಜಮೀನುದಾರನಾಗಿ, ಲೇವಾದೇವಿಗಾರನಾಗಿ ಜನರ ಮೇಲೆ ದರ್ಪ ಚಲಾಯಿಸಲು ಆಗದೇ ಇರುವ ವ್ಯವಸ್ಥೆಯೇ ಆದರ್ಶ ವ್ಯವಸ್ಥೆ. ಈ ಮೇಲು ಕೀಳು ಎಂಬ ಜುಗುಪ್ಸಾದಾಯಕ ವ್ಯತ್ಯಾಸ ಇಲ್ಲವಾಗಬೇಕು..."24

ಹೀಗೆ ತಾವು ಈ ವರೆವಿಗೆ ನೆಚ್ಚಿದ್ದ ಆದರ್ಶ ಮಾಧ್ಯಮಗಳಲ್ಲಿ ವೈಫಲ್ಯವನ್ನೇ ಕಂಡು, ಕೊನೆಗೆ ಆರ್ಥಿಕರಂಗ ಪ್ರವೇಶಿಸುತ್ತಲೇ ಸಮಗ್ರ ವಿಶ್ವದ ಮಾನವಸಮಾಜದ ಸಂಕೀರ್ಣಜಾಲದ ರಹಸ್ಯವನ್ನು ಭೇದಿಸಿ, ಮಾನವತಾ ಹಿತೋತ್ಸಾಹದಿಂದ ಹೊಸ ಹೊಸ ಸತ್ಯಗಳನ್ನೇ ಕಂಡುಕೊಳ್ಳುತ್ತಾ ಪ್ರೇಮಚಂದರು ಮುನ್ನಡೆಯತೊಡಗಿದರು. ಇದೇ ಕಾಲದಲ್ಲಿ ಪ್ರೇಮಚಂದರಷ್ಟೇ ಪ್ರಾಮಾಣಿಕವಾಗಿ ಸತ್ಯಶೋಧನೆಯ ಮಾರ್ಗದಲ್ಲಿ ನಡೆದು ಉದ್ವಿಗ್ನರಾಗಿದ್ದ ವಂಗ ಸಾಹಿತಿ ರವೀಂದ್ರನಾಥ ಠಾಕೂರರು, ಸಮಾಜದ ನಡುವೆಯಿದ್ದುಕೊಂಡು ಬೆಳಕು ಕಾಣಲಾಗದೆ, ಆತ್ಮಾನುಸಂಧಾನ ಮಾಡಿಕೊಳ್ಳಲು ಅಂತರ್ಮುಖಿಯಾಗಿ ಏಕಾಂತದ ತಪಸ್ಸನ್ನೇ ಮಾಡಿ, ಉದಾತ್ತ ಧಾರ್ಮಿಕ ಧ್ಯೇಯವಾದಿ ಮಾನವತಾವಾದವನ್ನು ತಮ್ಮ ತಪಸ್ಸಿನ ಫಲವಾಗಿ ನೀಡಿದರು. ಅನುಕಂಪವನ್ನು ವಿಶ್ವಕರ್ಮವನ್ನಾಗಿ ನಿರೂಪಿಸಿ,

ವೈಯಕ್ತಿಕ ಧಾರ್ಮಿಕ ಪ್ರಜ್ಞೆಯಿಂದ ಸಮಾಜದ ತಾಕಲಾಟಗಳನ್ನೂ ದ್ವಂದ್ವಗಳನ್ನೂ ಪರಿಹರಿಸಿಕೊಳ್ಳುವ ಮಾರ್ಗವನ್ನು ಅವರು ಪ್ರತಿಪಾದಿಸಿದರು. ಕುಸಿಯುತ್ತಿದ್ದ ಆದರ್ಶವಾದಕ್ಕೆ ರವೀಂದ್ರರು ಕಾಯಕಲ್ಪವನ್ನೇ ಮಾಡಿದರೆನ್ನಬಹುದು. ರವೀಂದ್ರರಿಂದ ಆರಂಭದಲ್ಲಿ ಪ್ರಭಾವಿತರಾಗಿದ್ದ ಪ್ರೇಮಚಂದರು ಇದೀಗ ರವೀಂದ್ರರ ಮಾನವತಾವಾದದಲ್ಲಿ ಆದರ್ಶವಾದದ ವಾಂಛಿತ ಭಾವುಕತೆಯನ್ನೇ ಕಂಡರು. ಜೈನೇಂದ್ರ ಕುಮಾರರೊಂದಿಗೆ ನಡೆದ ಸಂಭಾಷಣೆಯೊಂದರಲ್ಲಿ ಅವರು ವಂಗಸಾಹಿತ್ಯ ಕುರಿತು: " ಅದರಲ್ಲಿ ಸ್ತ್ರೀತ್ವ ಭಾವನೆ ಹೆಚ್ಚಾಗಿದೆ. ನನ್ನಲ್ಲಿ ಅದು ಸಾಕಷ್ಟಿಲ್ಲ...ಅದು ಅಲ್ಲಲ್ಲಿ ನೆನಪಿನಲ್ಲಿ ಮುಳುಗಿಹೋಗುತ್ತದೆ. ನೆನಪಿನಲ್ಲಿ ಭಾವನೆಯ ತರಲತೆ ಹೆಚ್ಚಾಗುತ್ತದೆ; ಸಂಕಲ್ಪದಲ್ಲಿ ಭಾವನೆಯ ಕಾಠಿನ್ಯ ಹೆಚ್ಚಾಗುತ್ತದೆ. ವಿಧಾಯಕ ಸ್ವರೂಪಕ್ಕೆ ಎರಡೂ ಬೇಕಾಗುತ್ತದೆ. ಜೈನೇಂದ್ರ. ನನಗೆ ಸರಿಯಾಗಿ ಯಾವುದೂ ಗೊತ್ತಿಲ್ಲ...ಅವರು ಭಾವುಕರು. ಭಾವುಕತೆಯಿಂದ ಯಾವ ಎತ್ತರಕ್ಕೆ ಏರಬಹುದೋ ಅದು ನನ್ನ ಕೈ ಅಳವಿಗೆ ಮೀರಿದೆ...ರವೀಂದ್ರರು. ಶರತ್‌ಚಂದ್ರರು—ಇಬ್ಬರೂ ದೊಡ್ಡವರು. ಆದರೆ ...ನನಗಂತೂ ಅದು ದಾರಿಯಾಗಲಾರದು ".[25] ಎಂದವರು ತಮ್ಮದೇ ಆದ ಸರಳ ಸಜ್ಜನಿಕೆಯ ಮಾತುಗಳಲ್ಲಿ ನುಡಿದರು.

ರವೀಂದ್ರರ ಮಾನವತಾವಾದ ಅನುಕಂಪನ್ನವಲಂಬಿಸಿತ್ತು; ಪ್ರೇಮಚಂದರದು ಆತ್ಮವಿಶ್ವಾಸ ಆತ್ಮದಾರ್ಢ್ಯಗಳಿಂದ ವಸ್ತುಸ್ಥಿತಿಯನ್ನು ಪುನರ್ನಿರ್ಮಾಣ ಮಾಡುವ ಸಕ್ರಿಯ ಮಾನವತಾಗತಿಶೀಲವನ್ನು ಅವಲಂಬಿಸಿತ್ತು.

೧೯೩೩ರ ಹೊತ್ತಿಗೆ ಪ್ರೇಮಚಂದರು ಸಮಾಜವಾದಿ ಮಾನವತೆಯ ಬೆಳಕಿನಲ್ಲಿ ವಸ್ತುಸ್ಥಿತಿಯ ಗತಿಶೀಲವನ್ನು ನಿಚ್ಚಳವಾಗಿ ಕಾಣುತ್ತ ಬಂದರು. ' ಗೋದಾನ ' ಕಾದಂಬರಿಯನ್ನು ಅವರು ಬರೆಯತೊಡಗಿದ್ದ ಕಾಲ ಅದು. ಮೂರು ವರುಷಗಳ ದೀರ್ಘ ಮಾನವತಾ ಸಂವೇದನೆಯ ಉತ್ತುಂಗ ಅಭಿವ್ಯಕ್ತಿಯ ಈ ಮೇರುಕೃತಿ ೧೯೩೬ರಲ್ಲಿ. ಅವರು ನಿಧನರಾಗುವುದಕ್ಕೆ ಕೆಲವೇ ತಿಂಗಳುಗಳ ಮುನ್ನ. ಪ್ರಕಟವಾಯಿತು. ತಮ್ಮ ಕಥೆ ಕಾದಂಬರಿಗಳಲ್ಲಿ. ಬೇರಾವ ಸಾಹಿತಿಯೂ ಕಂಡುಕೇಳಿ ಚಿತ್ರಿಸಿರದಷ್ಟು ರೈತರ ಬಹುಮುಖ ಜೀವನದರ್ಶನವನ್ನು. ತಮ್ಮ ಸಾವಿರಾರು ಕೃಷಿಕ ಪಾತ್ರಗಳ ಬದುಕು ಬವಣೆಗಳಲ್ಲಿ ಜೀವಂತವಾಗಿ ಪ್ರಾಮಾಣಿಕವಾಗಿ ಅವರು ಪ್ರತಿಫಲಿಸಿದ್ದರು. ಆ ಎಲ್ಲ ಪಾತ್ರಗಳು ಇದೀಗ ' ಗೋದಾನ ' ಕಾದಂಬರಿಯಲ್ಲಿ ಹೋರಿರಾಮ. ಧನಿಯ. ರಘುನಿಯ. ಗೋಬರ ಮುಂತಾದ ಪಾತ್ರಗಳಲ್ಲಿ ಬೆಳೆದು ಪರಿವರ್ತನೆಯಾಗಿ. ಸಕ್ರಿಯ ಸಮಕಾಲೀನ ಕ್ರಾಂತಿಕಾರಿ ಸೋಪಾನದಲ್ಲಿ ನಿಲ್ಲುತ್ತವೆ. ಹೋರಿರಾಮನ ಪಾತ್ರ ಮಾನವತಾಪ್ರಜ್ಞೆಯ ಪರಮೋಚ್ಚ ಗತಿಯನ್ನು ಮುಟ್ಟಿ. ಸಮಗ್ರ ಮಾನವಸಮಾಜಕಲ್ಯಾಣವನ್ನು ಸಾಧಿಸುವಂಥ ಜಾಗತಿಕ ಶಕ್ತಿಯಾಗಬಲ್ಲ ದಾರ್ಢ್ಯದಿಂದ ಭವಿಷ್ಯತ್ತನ್ನು ನಿರೀಕ್ಷಣೆ ಮಾಡುವ ಸಾಕ್ಷಿಪ್ರಜ್ಞೆಯೇ ಆಗುತ್ತದೆ. ಗೋಬರನ ಪಾತ್ರದಲ್ಲಿ ಇಂಥ ಪ್ರಜ್ಞೆ ಸಕ್ರಿಯ ಸಂಘರ್ಷದ ವಿದ್ಯುಲ್ಲತೆಯಂತೆ ಚಾಲಕಶಕ್ತಿಯಾಗುವುದನ್ನು ಕಾಣುತ್ತೇವೆ. ಸಮಕಾಲೀನ ದಲಿತ ಸಮಾಜದ ಮಹಾಗರ್ಭದ ಪ್ರಸವವೇದನೆಯನ್ನೇ ' ಗೋದಾನ 'ದಲ್ಲಿ ಕಾಣಬಹುದಾಗಿದೆ. ' ಮಹಾಜನೀ ಸಭ್ಯತೆ 'ಯನ್ನು ಭೇದಿಸಿ. ನವಸಮಾಜನಿರ್ಮಾಣದ ಹೊಸ್ತಿಲ ಮೇಲೆ ನಿಂತು ' ಗೋದಾನ 'ದ ಪಾತ್ರಗಳು ಈ ಶತಮಾನದ ಮಹಾಕಾವ್ಯಸದೃಶವಾದ ಗಂಭೀರ ಗತಿಶೀಲವನ್ನು ಧ್ವನಿಸುತ್ತವೆ.

ಪ್ರೇಮಚಂದರ ಸೃಜನಶೀಲ ಸಂವೇದನೆ ' ಗೋದಾನ 'ದಲ್ಲಿ ತನ್ನ ಪೂರ್ಣ ಅಭಿವ್ಯಕ್ತಿಯನ್ನು ಪಡೆದುಕೊಂಡ ಅವಧಿಯಲ್ಲೇ. ಅದಕ್ಕೆ ಸಂವಾದಿಯಾಗಿ ಅವರ ವಿಚಾರಶೀಲ ಸಂವೇದನೆ ಎಲ್ಲ ಪ್ರತಿಬಂಧಕಗಳಿಂದಲೂ ಪಾರಾಗಿ ಬೆಳೆಯತೊಡಗಿ. ' ಮಹಾಜನೀಸಭ್ಯತೆ 'ಯಲ್ಲಿ ಈ ಶತಮಾನದ ಮಾನವತಾ ಸಾಂಗತ್ಯದ ದ್ವಾರ ಮಹಾದರ್ಶನವೇ ಆಗಿ, ಹೊಸ ಮಾನವ ಹೊಸ ಸಮಾಜ ಹೊಸ ಯುಗದ ಬಾಗಿಲನ್ನೇ ತೆರೆದು ತೋರಿತು. ತಮ್ಮ ಮರಣಶಾಸನವೆಂದೇ ಈ ಮಹಾಪ್ರಬಂಧ ರಚಿಸಿದರೋ ಎಂಬಂತೆ. ಹಸ್ತಪ್ರತಿಯ ದೆಸೆಯಲ್ಲೇ ಅದನ್ನವರು ಬಿಟ್ಟು ಅಕ್ಟೋಬರ್ ೮. ೧೯೩೬ ರಂದು ನಿಧನರಾದರು. ಅವರ ನಿಧನದ ಬಳಿಕ ಅದರ ಪ್ರಕಟಣೆಯಾಯಿತು.

'ಮಹಾಜನೀ ಸಭ್ಯತೆ'ಯ ಬೀಜಾಂಕುರವನ್ನು ೧೯೩೩ರಲ್ಲೆ ಪ್ರೇಮಚಂದರು ಬರೆದ 'ರಾಷ್ಟ್ರೀಯತಾ ಔರ್ ಅಂತರ್‌ರಾಷ್ಟ್ರೀಯತಾ' ಎಂಬ ಲೇಖನದಲ್ಲಿ ಕಾಣಬಹುದಾಗಿದೆ.

"ಎಲ್ಲಿಯವರೆಗೆ ಸಂಪತ್ತು ಮಾನವಸಮಾಜ ಸಂಘಟನೆಯ ಆಧಾರವಾಗಿರುತ್ತದೊ ಅಲ್ಲಿಯ ವರೆಗೆ ಲೋಕದಲ್ಲಿ ಅಂತರರಾಷ್ಟ್ರೀಯತೆ ಸಾಧಿಸುವುದಿಲ್ಲ. ರಾಷ್ಟ್ರ ರಾಷ್ಟ್ರಗಳ ನಡುವೆ. ಸೋದರ ಸೋದರರ ನಡುವೆ. ಸ್ತ್ರೀಪುರುಷರ ನಡುವಣ ಹೋರಾಟಕ್ಕೆ ಈ ಸಂಪತ್ತೇ ಕಾರಣವಾಗಿದೆ. ಲೋಕ ದಲ್ಲಿ ಕಾಣುವ ಎಲ್ಲ ಅನ್ಯಾಯ. ಅನಾಚಾರ. ದ್ವೇಷ. ಮಾಲಿನ್ಯ. ಮೌಢ್ಯ. ಅಜ್ಞಾನಗಳಿಗೆಲ್ಲ ಈ ಸಂಪತ್ತೆಂಬ ವಿಷಮಯ ಕಗ್ಗಂಟೇ ಮೂಲ. ಸಂಪತ್ತಿನ ಮೇಲೆ ವ್ಯಕ್ತಿಗಳ ಅಧಿಕಾರ ಎಲ್ಲಿಯ ತನಕ ಇರುವುದೋ ಅಲ್ಲಿಯವರೆಗೆ ಮಾನವ ಸಮಾಜದ ಉದ್ಧಾರ ಸಾಧ್ಯವಿಲ್ಲ. ಕೂಲಿಗಾರರ ಕೆಲಸದ ವೇಳೆ ಕಡಿಮೆ ಮಾಡುವುದು. ನಿರುದ್ಯೋಗಿಗಳಿಗೆ ಜೀವನಾಧಾರ ಕಲ್ಪಿಸುವುದು. ಜಮೀನುದಾರರ ಮತ್ತು ಬಂಡವಾಳಿ ಗರ ಅಧಿಕಾರ ಕಡಿಮೆ ಮಾಡುವುದು. ಕೂಲಿಗಾರರ ಮತ್ತು ರೈತರ ಸ್ವಾಮ್ಯವನ್ನು ಹೆಚ್ಚಿಸುವುದು. ಹಣದ ಮೌಲ್ಯಗಳನ್ನಿಳಿಸುವುದು. ಹೀಗೇ ಮುಂತಾಗಿ ಯಾವುದೇ ಸುಧಾರಣೆ ಮಾಡಿದರೂ ಶಿಥಿಲವಾಗಿ ಹೋಗಿರುವ ಈ ಗೋಡೆ ನಿಲ್ಲಲು ಸಾಧ್ಯವಿಲ್ಲ; ಇದನ್ನು ಸಂಪೂರ್ಣವಾಗಿ ಕೆಡವಿ ಹೊಸ ಗೋಡೆಯನ್ನೇ ನಿರ್ಮಿಸಬೇಕಾಗುತ್ತದೆ.....

"ಸಂಪತ್ತು ಮನುಷ್ಯನನ್ನು ಕ್ರೀತದಾಸನನ್ನಾಗಿಸಿದೆ. ಅವನ ಎಲ್ಲ ಮಾನಸಿಕ. ಆತ್ಮಿಕ ಹಾಗೂ ದೈಹಿಕ ಶಕ್ತಿ ಆಸ್ತಿಯ ಸಂಚಯನದಲ್ಲಿಯೇ ಕಳೆದುಹೋಗುತ್ತದೆ. ಕೊನೆಯುಸಿರೆಳೆಯುವಾಗಲೂ ಈ ಆಸ್ತಿಯ ಗತಿ ಏನಾಗುತ್ತದೆ ಎಂಬ ಚಿಂತೆಯೇ ನಮ್ಮನ್ನು ಕಾಡುತ್ತಿರುತ್ತದೆ. ನಾವು ಆಸ್ತಿಗಾಗಿ ಬದುಕು ತ್ತೇವೆ. ಅದಕ್ಕಾಗಿಯೇ ಸಾಯುತ್ತೇವೆ. ನಾವು ವಿದ್ವಾಂಸರಾಗುವುದು ಆಸ್ತಿಗಾಗಿ. ಕಾವಿ ಬಟ್ಟೆ ಧರಿಸು ವುದೂ ಆಸ್ತಿಗಾಗಿ. ತುಪ್ಪದಲ್ಲಿ ಆಲೂಗೆಡ್ಡೆ ಬೆರೆಸಿ ನಾವು ಮಾರುವುದಾದರೂ ಏಕೆ? ಹಾಲಿಗೆ ನೀರು ಬೆರೆಸುವುದೇಕೆ? ಬಗೆಬಗೆಯ ವೈಜ್ಞಾನಿಕ ಹಿಂಸಾಯಂತ್ರಗಳನ್ನು ನಿರ್ಮಿಸುವುದೇಕೆ? ವೇಶ್ಯೆಯರಾಗು ವುದೇಕೆ? ದರೋಡೆ ಮಾಡುವುದೇಕೆ? ಇದಕ್ಕೆಲ್ಲಾ ಒಂದೇ ಒಂದು ಕಾರಣವೆಂದರೆ ಆಸ್ತಿ. ಎಲ್ಲಿಯ ತನಕ ಆಸ್ತಿಹೀನ ಸಮಾಜದ ಸಂಘಟನೆಯಾಗುವುದಿಲ್ಲವೋ ಎಲ್ಲಿಯತನಕ ಆಸ್ತಿ-ವ್ಯಕ್ತಿವಾದ ಕೊನೆಗೊಳ್ಳು ವುದಿಲ್ಲವೋ. ಅಲ್ಲಿಯತನಕ ಲೋಕಕ್ಕೆ ಶಾಂತಿ ದೊರೆಯುವುದಿಲ್ಲ."[26]

'ಮಹಾಜನೀ ಸಭ್ಯತೆ'ಯಲ್ಲಿ ಪ್ರೇಮಚಂದರು ಹೊಸ ಸಂಸ್ಕೃತಿಯ ಸೂರ್ಯನನ್ನು ಕಾಣುತ್ತಾ ಅದನ್ನು ಮಾನವಜೀವನದ ವಿಸ್ತವಿಸ್ತಾರವನ್ನು ಸೇರುತ್ತಾರೆ:

"ಈ ಬಂಡವಾಳಶಾಹಿ ಸಂಸ್ಕೃತಿಯಲ್ಲಿ ಎಲ್ಲ ಕಾರ್ಯಗಳ ಪ್ರಮುಖ ಉದ್ದೇಶ ಹಣವೇ ಆಗಿರು ತ್ತದೆ. ಯಾವುದಾದರೂ ಒಂದು ದೇಶದ ಮೇಲೆ ಪ್ರಭುತ್ವವನ್ನು ಸ್ಥಾಪಿಸುವುದಾದರೂ. ಲೇವಾದೇವಿ ಗಾರರಿಗೆ ಬಂಡವಾಳಿಗರಿಗೆ ಹೆಚ್ಚು ಹೆಚ್ಚಿನ ಲಾಭ ದೊರೆಯಬೇಕೆಂಬ ಕಾರಣದಿಂದಲೇ. ಈ ದೃಷ್ಟಿ ಯಲ್ಲಿ. ಇಂದು ಲೋಕದಲ್ಲಿ ಬಂಡವಾಳಿಗರ ಆಳ್ವಿಕೆಯೇ ಇರುವಂತೆ ತೋರುತ್ತದೆ. ಮಾನವಸಮಾಜ ಎರಡು ಭಾಗಗಳಲ್ಲಿ ಹಂಚಿಹೋಗಿದೆ. ದೊಡ್ಡ ಭಾಗ ಸಾಯುವವರದ್ದು. ನಾಶ ಹೊಂದುವವರದ್ದು. ಚಿಕ್ಕ ಭಾಗ ತಮ್ಮ ಶಕ್ತಿ ಮತ್ತು ಪ್ರಭಾವದಿಂದ ದೊಡ್ಡ ಸಮುದಾಯವನ್ನು ತಮ್ಮ ವಶದಲ್ಲಿರಿಸಿ ಕೊಂಡಿರುವವರದ್ದು. ಇವರಿಗೆ ಆ ದೊಡ್ಡ ಭಾಗದ ಸಲುವಾಗಿ ಯಾವುದೇ ಸಹಾನುಭೂತಿಯೂ ಇಲ್ಲ. ಅನುಕಂಪವೂ ಇಲ್ಲ. ಅವರು ಇರುವುದೆಲ್ಲ ತಮ್ಮ ಮಾಲೀಕರಿಗಾಗಿ ಬೆವರು ಸುರಿಸಲು. ರಕ್ತ ಬಸಿಯಲು ಹಾಗೂ ಸದ್ದಿಲ್ಲದೆ ಒಂದು ದಿನ ಈ ಲೋಕವನ್ನು ಬಿಟ್ಟು ಹೋಗಲು...

"ಕುಲೀನತೆ. ಸಭ್ಯತೆ. ಗುಣ ಮತ್ತು ಕೌಶಲಗಳಿಗೆಲ್ಲ ಹಣ. ಹಣ ಮಾತ್ರವೇ ಒರೆಗಲ್ಲಾಗಿದೆ. ಅವರ ಅಂತಃಕರಣ ಎಷ್ಟೇ ಕೆಟ್ಟದಾಗಿದ್ದರೂ. ಅದು ದೇವತಾಸ್ವರೂಪದ್ದು. ಸಾಹಿತ್ಯ. ಸಂಗೀತ. ಕಲೆ—ಇವೆಲ್ಲ ಹಣದ ಹೊಸ್ತಿಲಿನಲ್ಲಿ ತಲೆಯುಜ್ಜುವಂಥವು. ಈ ಗಾಳಿ ಅದೆಷ್ಟು ವಿಷಮಯವಾಗಿ ಬಿಟ್ಟಿದೆ ಎಂದರೆ ಅದರಲ್ಲಿ ಬದುಕಿರುವುದೇ ಕಷ್ಟವಾಗಿಬಿಟ್ಟಿದೆ. ಡಾಕ್ಟರು-ಹಕೀಮರು ಭಾರೀ ಫೀಸನ್ನು ಪಡೆಯದೆ ಮಾತನಾಡುವುದೇ ಇಲ್ಲ. ವಕೀಲ ಈಗ ಬ್ಯಾರಿಸ್ಟರ್ ಆಗಿರುವುದರಿಂದ ನಿಮಿಷಗಳನ್ನು ಚಿನ್ನದ ನಾಣ್ಯಗಳ ಲೆಕ್ಕದಲ್ಲಿ ತೂಗುತ್ತಾನೆ. ಗುಣ ಮತ್ತು ಯೋಗ್ಯತೆಯ ಯಶಸ್ಸನ್ನು ಅದರ ಆರ್ಥಿಕ

ಮೌಲ್ಯದ ಆಧಾರದ ಮೇಲೆ ಮಾನ್ಯ ಮಾಡಲಾಗುತ್ತದೆ. ಮೌಲ್ವಿಗಳು ಮತ್ತು ಪಂಡಿತರು ಸಹ ಹಣವಂತರ ವೇತನರಹಿತ ಗುಲಾಮರೇ ಆಗಿಬಿಟ್ಟಿದ್ದಾರೆ. ಪತ್ರಿಕೆಗಳೂ ಅವರ ರಾಗವನ್ನೇ ಆಲಾಪಿಸುತ್ತವೆ. ಹಣ ಮನುಷ್ಯನ ಬುದ್ಧಿ ಮತ್ತು ಹೃದಯಗಳ ಮೇಲೆ ಅದೆಂಥ ಆಧಿಪತ್ಯವನ್ನು ನಡೆಸಿದೆ ಎಂದರೆ ಅದರ ರಾಜ್ಯದ ಮೇಲೆ ಯಾವ ದಿಕ್ಕಿನಿಂದ ಆಕ್ರಮಣ ಮಾಡುವುದೂ ಕಷ್ಟವಾಗಿ ತೋರುತ್ತಿದೆ. ದಯೆ ಮತ್ತು ಸ್ನೇಹ, ಸತ್ಯ ಮತ್ತು ಸೌಜನ್ಯಗಳ ಮೂರ್ತಿಯಾಗಿದ್ದ ಮಾನವ ದಯೆ-ಮಮತೆಗಳಿಲ್ಲದ ಜಡಯಂತ್ರವಾಗಿಬಿಟ್ಟಿದ್ದಾನೆ. ಈ ಬಂಡವಾಳಶಾಹಿ ಸಂಸ್ಕೃತಿ ಹೊಸ ಹೊಸ ನೀತಿನಿಯಮಗಳನ್ನು ಸೃಷ್ಟಿಸಿಕೊಂಡಿದೆ. ಅವುಗಳ ಮೇಲೆಯೇ ಇಂದು ಸಾಮಾಜಿಕ ವ್ಯವಸ್ಥೆ ನಡೆಯುತ್ತಿದೆ. ಅವುಗಳಲ್ಲಿ ಒಂದು ನಿಯಮ ಇದು: ಕಾಲವೇ ಹಣ. ಒಂದೆ ಕಾಲವೇ ಜೀವನವಾಗಿತ್ತು; ವಿದ್ಯೆ-ಕಲೆಗಳ ಅರ್ಜನೆಯಲ್ಲಿ ಅಥವಾ ದೀನ-ದುಃಖಿಗಳ ಸೇವೆಯಲ್ಲಿ ಅದನ್ನು ವ್ಯಯಿಸುವುದೇ ಅದರ ಸರ್ವೋತ್ತಮ ಉಪಯೋಗವೆಂದು ಭಾವಿಸಲಾಗಿತ್ತು. ಈಗ ಅದರ ಎಲ್ಲಕ್ಕಿಂತಲೂ ಹಿರಿದಾದ ಸದುಪಯೋಗವೆಂದರೆ ಹಣವನ್ನು ಸಂಪಾದಿಸುವುದು...

“ಈ ಬಂಡವಾಳಶಾಹಿ ಸಂಸ್ಕೃತಿ ಲೋಕದಲ್ಲಿ ಜಾರಿಗೆ ಕೊಟ್ಟಿರುವ ಹೊಸ ರೀತಿನೀತಿಗಳಲ್ಲಿ ಅತ್ಯಂತ ಹೆಚ್ಚು ಘಾತಕವೂ, ಹಿಪಾಸುವೂ ಆಗಿರುವುದೆಂದರೆ ಈ ವ್ಯವಹಾರ-ಸಿದ್ಧಾಂತ. ಗಂಡ-ಹೆಂಡಿರಲ್ಲಿ ವ್ಯವಹಾರ; ತಂದೆ-ಮಕ್ಕಳಲ್ಲಿ ವ್ಯವಹಾರ; ಗುರು-ಶಿಷ್ಯರಲ್ಲಿ ವ್ಯವಹಾರ; ಮಾನವೀಯವಾದ ಎಲ್ಲ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸ್ನೇಹ-ಸಂಬಂಧಗಳೆಲ್ಲ ಕೊನೆಗೊಂಡಿವೆ. ಮಾನವ-ಮಾನವರ ನಡುವೆ ಯಾವುದಾದರೂ ಸಂಪರ್ಕ ಉಳಿದುಕೊಂಡು ಬಂದಿದ್ದರೆ ಅದು ವ್ಯವಹಾರದ್ದು. ಈ ‘ವ್ಯವಹಾರ’ಕ್ಕೆ ಧಿಕ್ಕಾರವಿರಲಿ!...

“ಆದರೆ ಈಗ ಒಂದು ಹೊಸ ಸಂಸ್ಕೃತಿಯ ಸೂರ್ಯ ದೂರ ಪಶ್ಚಿಮದಲ್ಲಿ ಉದಯಿಸುತ್ತಿದ್ದಾನೆ. ಅದು ಈ ನಾಟಕೀಯ ಲೇವಾದೇವಿತನವನ್ನು ಅಥವಾ ಬಂಡವಾಳಶಾಹಿಯನ್ನು ಬುಡಸಹಿತ ಕಿತ್ತೊಗೆದಿದೆ. ತನ್ನ ದೈಹಿಕ ಅಥವಾ ಬೌದ್ಧಿಕ ದುಡಿಮೆಯಿಂದ ಏನನ್ನಾದರೂ ಉತ್ಪಾದಿಸಬಲ್ಲ ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಹಾಗೂ ಸಮಾಜದ ಪರಮ ಗೌರವಾನ್ವಿತ ಸದಸ್ಯನಾಗಬಹುದು; ಹಾಗೂ ಇತರರ ದುಡಿಮೆಯ ಅಥವಾ ತಂದೆತಾತಂದಿರು ಕೂಡಿಹಾಕಿದ ಹಣದ ಆಧಾರದ ಮೇಲೆ ಶ್ರೀಮಂತನೆಂಬಂತೆ ಮೆರೆಯುವವನು ತುಂಬ ಪತಿತನಾದ ವ್ಯಕ್ತಿ ಎಂಬುದು ಇದರ ಮೂಲಸಿದ್ಧಾಂತ. ...ಬಂಡವಾಳವಾದಿ ಈ ಹೊಸ ಅಲೆಯನ್ನು ಕಂಡು ಉದ್ವಿಗ್ನನಾಗಿ ತಳಮಳದಿಂದ ಅಲೆದಾಡುತ್ತಿದ್ದಾನೆ. ಇಡೀ ಜಗತ್ತಿನ ಬಂಡವಾಳವಾದಿಗಳು ಒಕ್ಕೊರಲಿನಿಂದ ಈ ಹೊಸ ಸಂಸ್ಕೃತಿಯನ್ನು ಹಿಯ್ಯಾಳಿಸುತ್ತಿದ್ದಾರೆ: ಅದಕ್ಕೆ ಶಾಪ ಹಾಕುತ್ತಿದ್ದಾರೆ. ಅದು ವ್ಯಕ್ತಿಸ್ವಾತಂತ್ರ್ಯ, ಧಾರ್ಮಿಕ (ವಿಶ್ವಾಸದ) ಸ್ವಾತಂತ್ರ್ಯ ಹಾಗೂ ಅಂತರಾತ್ಮನ ಆದೇಶಕ್ಕನುಗುಣವಾಗಿ ನಡೆದುಕೊಳ್ಳುವ ಸ್ವಾತಂತ್ರ್ಯ—ಇವುಗಳಿಗೆಲ್ಲ ಘಾತಕವಾಗುತ್ತದೆ. ಇವುಗಳ ಕತ್ತು ಹಿಸುಕಿಬಿಡುತ್ತದೆ ಎಂದೆಲ್ಲ ಹೇಳಲಾಗಿದೆ. ಇದರ ಮೇಲೆ ಹೊಸ ಹೊಸ ಕಳಂಕಗಳನ್ನು ಹೊರಿಸಲಾಗುತ್ತಿದೆ. ಅದಕ್ಕೆ ಅತಿ ಕಪ್ಪು ಬಣ್ಣವನ್ನೆ ಬಳಿಯಲಾಗುತ್ತಿದೆ: ತೀರ ಕುತ್ಸಿತ ರೂಪದಲ್ಲಿ ಅದನ್ನು ಚಿತ್ರಿಸಲಾಗುತ್ತಿದೆ.....

“ಈ ಹೊಸ ಸಂಸ್ಕೃತಿ ವ್ಯಕ್ತಿಸ್ವಾತಂತ್ರ್ಯದ ಪಂಜ, ಉಗುರು ಮತ್ತು ಹಲ್ಲುಗಳನ್ನು ಮುರಿದು ಹಾಕಿದೆ ಎಂಬುದರಲ್ಲಿ ಅನುಮಾನವಿಲ್ಲ. ಅದರ ರಾಜ್ಯದಲ್ಲಿ ಈಗ ಒಬ್ಬ ಬಂಡವಾಳಿಗ ಲಕ್ಷಾಂತರ ಕಾರ್ಮಿಕರ ರಕ್ತವನ್ನು ಕುಡಿದು ದಪ್ಪನಾಗಲಾರ. ತನ್ನ ಲಾಭಕ್ಕಾಗಿ ನಿತ್ಯಬಳಕೆಯ ವಸ್ತುಗಳ ಬೆಲೆಯನ್ನು ಏರಿಸುವ ಅಥವಾ ತಾನು ನಿರ್ಮಿಸಿದ ವಸ್ತುಗಳ ಬಳಕೆಗಾಗಿ ಯುದ್ಧವನ್ನು ನಡೆಸುವ, ಮದ್ದು-ಗುಂಡು ಹಾಗೂ ಯುದ್ಧಸಾಮಗ್ರಿಗಳನ್ನು ನಿರ್ಮಿಸಿ ದುರ್ಬಲ ರಾಷ್ಟ್ರಗಳನ್ನು ತುಳಿದು ಹಾಕುವ ಸ್ವಾತಂತ್ರ್ಯ ಈಗ ಅವನಿಗೆ ದೊರೆಯುವುದಿಲ್ಲ. ಇದೇ ಸ್ವಾತಂತ್ರ್ಯ ಎಂದಾದರೆ, ಖಂಡಿತವಾಗಿಯೂ ಈ ಹೊಸ ಸಂಸ್ಕೃತಿಯಲ್ಲಿ ಅಂಥ ಸ್ವಾತಂತ್ರ್ಯಕ್ಕೆ ಎಡೆ ಇಲ್ಲ; ಆದರೆ, ಜನಸಾಮಾನ್ಯರಿಗೆ ಗಾಳಿ ಬೆಳಕಿನಿಂದ ಕೂಡಿದ ಮನೆ, ಪುಷ್ಟಿಕರವಾದ ಆಹಾರ, ಚೊಕ್ಕಟವಾಗಿರುವ ಹಳ್ಳಿಗಳು, ಮನರಂಜನೆ ಮತ್ತು ವ್ಯಾಯಾಮ ಸೌಲಭ್ಯಗಳು, ವಿದ್ಯುತ್-ಪಂಕಗಳು ಹಾಗೂ ವಿದ್ಯುದ್ದೀಪ, ಸುಲಭವಾಗಿ ಹಾಗೂ

ಶೀಘ್ರವಾಗಿ ನ್ಯಾಯ ದೊರೆಯುವುದು—ಇವನ್ನು ನಾವು ಸ್ವಾತಂತ್ರ್ಯ ಎಂದು ಅರ್ಥೈಸುವುದಾದರೆ, ಈ ಸಾಮಾಜಿಕ ವ್ಯವಸ್ಥೆಯಲ್ಲಿ ಲಭ್ಯವಾಗುವ ಸ್ವಾತಂತ್ರ್ಯ ಅತ್ಯಂತ ನಾಗರಿಕವಾದುದೆಂದು ಕರೆದುಕೊಳ್ಳುವ ಯಾವುದೇ ಸಮುದಾಯದಲ್ಲಿಯೂ ದೊರೆಯುವುದಿಲ್ಲ.

"ಎಲ್ಲಿ ಹಣದ ಹೆಚ್ಚುಕಡಿಮೆ ಪ್ರಮಾಣದ ಆಧಾರದ ಮೇಲೆ ಅಸಮಾನತೆಗೆ ಎಡೆ ದೊರೆತಿರುತ್ತದೆಯೋ ಅಲ್ಲಿ ಈರ್ಷ್ಯೆ, ದರ್ಪ, ಅನ್ಯಾಯ, ಮೋಸ, ಸುಳ್ಳು, ವಂಚನೆ, ಆರೋಪ, ವೇಶ್ಯಾವೃತ್ತಿ, ವ್ಯಭಿಚಾರ ಹಾಗೂ ಇಡೀ ಲೋಕದ ಕೆಡಕುಗಳೆಲ್ಲ ಅನಿವಾರ್ಯವಾಗಿ ಬೀಡುಬಿಟ್ಟಿರುತ್ತವೆ. ಎಲ್ಲಿ ಹಣದ ಹೆಚ್ಚಳ ಇಲ್ಲವೋ ಬಹುಪಾಲು ಜನರು ಒಂದೇ ಸ್ಥಿತಿಯಲ್ಲಿ ಇರುತ್ತಾರೋ ಅಲ್ಲಿ ಈರ್ಷ್ಯೆಗಾಗಲೀ ದರ್ಪಕ್ಕಾಗಲೀ ಅವಕಾಶವೆಲ್ಲಿಯದು? ಸತೀತ್ವದ ಮಾರಾಟ ಏಕಾದೀತು? ವ್ಯಭಿಚಾರ ಏಕೆ ನಡೆದೀತು? ಸುಳ್ಳು ಮೊಕದ್ದಮೆಗಳು ಹೇಗೆ ಬಂದಾವು? ಕಳ್ಳತನ-ದರೋಡೆಗಳಂಥ ದುರ್ಘಟನೆಗಳು ಹೇಗೆ ನಡೆದಾವು? ಈ ಎಲ್ಲ ಕೆಡಕುಗಳೂ ದೌಲತ್ತಿನ ಕಾಣಿಕೆಗಳು; ಹಣದ ಪ್ರಸಾದಗಳು. ಬಂಡವಾಳಶಾಹಿ ಸಂಸ್ಕೃತಿ ಇವುಗಳನ್ನು ಸೃಷ್ಟಿಸಿದೆ....

"ಸರಕು ಹಾಗೂ ವ್ಯಕ್ತಿಗತ ಸಂಪತ್ತನ್ನು ತೊಡೆದು ಹಾಕುವ ನಾಗರಿಕತೆ ಧನ್ಯವಾದುದು. ಶೀಘ್ರವಾಗಿಯಾಗಲೀ, ತಡವಾಗಿಯಾಗಲೀ ಪ್ರಪಂಚವು ಅದರ ಹೆಜ್ಜೆಯನ್ನು ಅಗತ್ಯವಾಗಿ ಅನುಸರಿಸಬೇಕಾಗುತ್ತದೆ. ಈ ನಾಗರಿಕತೆ ಯಾವುದೇ ಒಂದು ದೇಶದ ಸಾಮಾಜಿಕ ವ್ಯವಸ್ಥೆಗೆ ಅಥವಾ ಧಾರ್ಮಿಕ ವ್ಯವಸ್ಥೆಗೆ ಹೊಂದುವುದಿಲ್ಲ ಅಥವಾ ಆ ವಾತಾವರಣಕ್ಕೆ ಅನುಕೂಲಕರವಾಗಿಲ್ಲ ಎಂಬ ತರ್ಕ ಸಂಪೂರ್ಣವಾಗಿ ಅಸಂಗತವಾದುದು. ಕ್ರೈಸ್ತಧರ್ಮದ ಸಸಿ ಉಗಮಿಸಿದ್ದು ಜೆರೂಸಲೆಮ್ಮಿನಲ್ಲಿ; ಸಮಗ್ರ ವಿಶ್ವದಲ್ಲಿ ಅದರ ಸೌರಭ ವ್ಯಾಪಿಸಿತು. ಬೌದ್ಧ ಧರ್ಮ ಉತ್ತರ ಭಾರತದಲ್ಲಿ ಜನ್ಮ ತಳೆಯಿತು; ಅರ್ಧ ಪ್ರಪಂಚವೇ ಅದಕ್ಕೆ ಗುರುಭಕ್ತಿಗೌರವನ್ನರ್ಪಿಸಿತು. ಮಾನವಸ್ವಭಾವ ಸಮಗ್ರ ವಿಶ್ವದಲ್ಲಿ ಒಂದೇ ಆಗಿದೆ. ಸಣ್ಣಪುಟ್ಟ ಸಂಗತಿಗಳಲ್ಲಿ ವ್ಯತ್ಯಾಸವಿರಬಹುದು. ಆದರೆ, ಮೂಲಸ್ವರೂಪದ ದೃಷ್ಟಿಯಿಂದ ಇಡೀ ಮಾನವಸಮುದಾಯದಲ್ಲಿ ಯಾವ ಭೇದವೂ ಇಲ್ಲ. ಒಂದು ದೇಶಕ್ಕೆ ಕಲ್ಯಾಣಕಾರಿಯಾಗುವ ಶಾಸನ-ವಿಧಾನ ಹಾಗೂ ಸಮಾಜ-ವ್ಯವಸ್ಥೆ ಇತರ ದೇಶಗಳಿಗೂ ಹಿತಕಾರಿಯೇ ಆಗುತ್ತದೆ. ಹೌದು, ಬಂಡವಾಳಶಾಹಿ ಸಂಸ್ಕೃತಿ ಹಾಗೂ ಅದರ ಅನುಯಾಯಿಗಳು ತಮ್ಮ ಕೈಲಾದಷ್ಟೂ ಅದನ್ನು ವಿರೋಧಿಸುತ್ತಾರೆ. ಅದರ ಬಗ್ಗೆ ತಪ್ಪು ಕಲ್ಪನೆಯುಂಟು ಮಾಡುವಂಥ ಸಂಗತಿಗಳನ್ನು ಹರಡುತ್ತಾರೆ. ಜನಸಾಮಾನ್ಯರನ್ನು ಪ್ರಚೋದಿಸುತ್ತಾರೆ. ಅವರ ಕಣ್ಣಿಗೆ ಮಣ್ಣೆರಚುತ್ತಾರೆ. ಆದರೆ ಸತ್ಯಕ್ಕೆ ಒಂದಲ್ಲ ಒಂದು ದಿನ ಗೆಲುವು ದೊರೆಯುತ್ತದೆ; ಖಂಡಿತವಾಗಿಯೂ ದೊರೆಯುತ್ತದೆ".[27]

ಸಾವಿನೊಂದಿಗೆ ಸೆಣಸುತ್ತಿದ್ದ ಕೊನೆ ಗಳಿಗೆಯಲ್ಲೂ ಪ್ರೇಮಚಂದರ ಧೀರಚೇತನ ಲೋಕಕ್ಕೆ ತನ್ನ ಅಮರ ಸಂದೇಶವನ್ನು ಜೈನೇಂದ್ರ ಕುಮಾರರ ಮುಖಾಂತರ ಇತ್ತಿತ್ತೋ ಎಂಬಂತೆ. "ಆದರ್ಶದಿಂದ ಏನೂ ಆಗುವುದಿಲ್ಲ"[28] ಎಂದವರು ನುಡಿದರಷ್ಟೇ ಅಲ್ಲದೆ ಜೈನೇಂದ್ರರು ನಡುವೆ ಬಾಯಿಹಾಕಲೆತ್ನಿಸಿದಾಗ "ಚರ್ಚೆ ಮಾಡಬೇಡ"[29] ಎಂದು ತಮ್ಮ ಅಂತಿಮ ನಿರ್ಣಯವನ್ನೇ ಇತ್ತು "ಮಗ್ಗುಲು ಬದಲಾಯಿಸಿ ಕಣ್ಣುಮುಚ್ಚಿಕೊಂಡರು."[30]

ಸಾಯುವ ಮುನ್ನ ಕುಟುಂಬವರ್ಗಕ್ಕೆ, ಇಷ್ಟಮಿತ್ರರಿಗೆ ಆಸ್ತಿಯ ವಿತರಣೆ ಮಾಡಿ ಉಯಿಲು ಬರೆಯುವುದು ಲೋಕದಲ್ಲಿ ರೂಢಿಯಾದರೆ, ಸಮಗ್ರ ಮಾನವಸಮಾಜವನ್ನೇ ಕುಟುಂಬವಾಗಿಸಿಕೊಂಡಿದ್ದ ಪ್ರೇಮಚಂದರು 'ಗೋದಾನ'ದಂಥ ಶತಮಾನದ ಮಹಾಕಾವ್ಯದೊಂದಿಗೆ 'ಮಹಾಜನೀ ಸಭ್ಯತಾ' ಮಹಾದರ್ಶನವನ್ನು ಮಾನವಸಮಾಜಕ್ಕೆರೆದು, ಅದಮ್ಯ ಮಾನವಚೇತನದ ಮಹಾಚಲನೆಯಲ್ಲಿ ಲೀನರಾದರು.

ಈಶಾವಾಸ್ಯದ ಉಪನಿಷನ್ಮಂತ್ರ ನಿಜಕ್ಕೂ ಪ್ರೇಮಚಂದರ ಪಾಲಿಗೆ ಸಫಲವೇ ಆಯಿತು:

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಮ್
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ ॥[31]

ಅಡಿ ಟಿಪ್ಪಣಿಗಳು

1. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’ ಸಂಪುಟ ೩. ಹಂಸ್ ಪ್ರಕಾಶನ್, ಅಲಹಾಬಾದ್, ೧೯೬೨, ಪು. ೨೫.
2. ಅದೇ: ಪು. ೧೯.
3. ಅಮೃತ್‌ರಾಯ್: ‘ಕಲಮ್ ಕಾ ಸಿಪಾಹೀ’ ಹಂಸ್ ಪ್ರಕಾಶನ್, ಅಲಹಾಬಾದ್, ೧೯೭೬, ಪು. ೫೧೮.
4. ಅದೇ: ಪು. ೫೨೭.
5. ಪ್ರೇಮ್‌ಚಂದ್: ವಿವಿಧ್ ಪ್ರಸಂಗ್—ಸಂಪುಟ ೨. ಹಂಸ್ ಪ್ರಕಾಶನ್, ಅಲಹಾಬಾದ್ ೧೯೬೨, ಪು. ೨೪೨–೩.
6. ಅಮೃತ್‌ರಾಯ್: ‘ಕಲಮ್ ಕಾ ಸಿಪಾಹೀ’, ೧೯೭೬, ಪು. ೫೨೭.
7. ಅದೇ: ಪು. ೪೭೯.
8. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’, ಸಂಪುಟ ೩, ಪು. ೧೫೪.
9. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’—ಸಂಪುಟ ೨, ಪು. ೩೩೫.
10. ಅದೇ: ಪು. ೨೭೦–೮೩.
11. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’—ಸಂಪುಟ ೩, ಪು. ೩೫.
12. ಅಮೃತ್‌ರಾಯ್: ‘ಕಲಮ್ ಕಾ ಸಿಪಾಹೀ’, ಪು. ೪೫೯.
13. ಅದೇ: ಪು. ೮೧.
14. ಅದೇ: ಪು. ೩೦೮.
15. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’—ಸಂಪುಟ ೨, ಪು. ೨೫೭–೮.
16. ಅದೇ: ಪು. ೨೨೫.
17. ಅದೇ: ಪು. ೨೬೨.
18. ಅದೇ: ಪು. ೨೬೩–೪.
19. ಅದೇ: ಪು. ೩೩೩.
20. ಅದೇ: ಪು. ೩೦೨.
21. ಅದೇ: ಪು. ೩೯೪.
22. ಅದೇ: ಪು. ೩೦೧
23. ಅದೇ: ಪು. ೩೦೯.
24. ಪ್ರೇಮ್‌ಚಂದ್: ‘ಸಂಗ್ರಾಮ್’-ಸರಸ್ವತಿ ಪ್ರೆಸ್ ಬನಾರಸ್, ೧೯೫೬, ಪು. ೬೨–೬೩.
25. ಅಮೃತ್‌ರಾಯ್: ‘ಕಲಮ್ ಕಾ ಸಿಪಾಹೀ’, ಪು. ೪೨೬–೭.
26. ಪ್ರೇಮ್‌ಚಂದ್: ‘ವಿವಿಧ್ ಪ್ರಸಂಗ್’— ಸಂಪುಟ ೨. ಪು. ೩೩೫.
27. ಪ್ರೇಮ್‌ಚಂದ್: ‘ಮಹಾಜನೀ ಸಭ್ಯತಾ’ (ಹಿಂದೀ ಮಾಧುರಿ ಭಾಗ ೩, ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ, ಮದ್ರಾಸು, ೧೯೪೨, ಪು. ೧೯೪–೨೦೭.

28–29–30. ಅಮೃತ್‌ರಾಯ್: ‘ಕಲಮ್ ಕಾ ಸಿಪಾಹೀ’. ಪು. ೬೧೪.

31. ಈಶಾವಾಸ್ಯೋಪನಿಷತ್: ಮಂತ್ರ ೧೫.



ಪ್ರೇಮ್‌ಚಂದ್
(1880–1936)

ಒ. ಡಿ. ಹೆಗ್ಗಡೆ

ಕೊಳಚೆ ಪ್ರದೇಶಗಳು-ನಗರೀಕರಣದ ಶಾಪವೇ ?

ನಗರ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ತಲೆಯೆತ್ತುವ ಕೊಳಚೆ ಪ್ರದೇಶಗಳು ನಗರೀಕರಣದ ಅನಿವಾರ್ಯ ಶಾಪವೇ? ಯೋಜಿತ ನಗರೀಕರಣ ಕಾರ್ಯಕ್ರಮಗಳಿಲ್ಲದಿರುವಿಕೆಯಿಂದ ಕೊಳಚೆ ಪ್ರದೇಶಗಳು ಉದ್ಭವವಾಗುವುವು ಎಂಬುದು ಸಾಮಾನ್ಯ ನಂಬಿಕೆ. ಆದರೆ ಇದೊಂದೇ ಕೊಳಚೆಪ್ರದೇಶಗಳ ಅಸ್ತಿತ್ವಕ್ಕೆ ಕಾರಣವಲ್ಲ. ಕೊಳಚೆ ಪ್ರದೇಶಗಳ ಸಮಸ್ಯೆಯು ವಿಶ್ವವ್ಯಾಪಿ. ಅಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳೆರಡೂ ಸಹ ಕೊಳಚೆ ಪ್ರದೇಶಗಳು ಹುಟ್ಟುಹಾಕುವ ಹಲವು ಬಗೆಯ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅಮೆರಿಕ ಸಂಯುಕ್ತ ಸಂಸ್ಥಾನದಂತಹ ತೀವ್ರ ಅಭಿವೃದ್ಧ ಮತ್ತು ಹೆಚ್ಚು ಸಂಪದ್ಭರಿತ ದೇಶ ಡೆಟ್ರಾಯಿಟ್. ನ್ಯೂಯಾರ್ಕ್. ಪಿಟ್ಸ್‌ಬರ್ಗ್ ಚಿಕಾಗೋ ಮತ್ತು ಮತ್ತು ಫಿಲಡೆಲ್ಫಿಯಾ ಮುಂತಾದ ಬೃಹತ್ ನಗರಗಳಲ್ಲಿ ಕೊಳಚೆಪ್ರದೇಶಗಳು ಅಲ್ಲಿನ ರಾಜ್ಯ ಮತ್ತು ಸಂಯುಕ್ತ ಸರ್ಕಾರಗಳಿಗೆ ಆತಂಕಕಾರಿಯಾಗಿವೆ. ಹೆಚ್ಚು ಸ್ಪರ್ಧಾತ್ಮಕವಾಗಿ ಅಮೇರಿಕದಂತಹ ಆರ್ಥಿಕತೆಯಲ್ಲಿ ಸಂಪತ್ತು ಮತ್ತು ವರಮಾನದ ವಿಷಮಹಂಚಿಕೆಯಿಂದಾಗಿ ಕೊಳಚೆಪ್ರದೇಶಗಳು ಅಸ್ತಿತ್ವದಲ್ಲಿವೆ. ಇಂದು ಅಮೇರಿಕೆಯಂತಹ ಅಭಿವೃದ್ಧ ದೇಶಗಳು ನಗರ ಪುನರ್ ಅಭಿವೃದ್ಧಿ ಕಾರ್ಯಕ್ರಮಗಳನ್ನಾಯ ಕೊಳಚೆಪ್ರದೇಶಗಳ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ನಿವಾರಿಸಲು ಯತ್ನಿಸುತ್ತಿವೆ. ಅಮೇರಿಕದ ಕೊಳಚೆ ಪ್ರದೇಶಗಳ ನಿವಾಸಿಗಳಲ್ಲಿ ನಿಗ್ರೋಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಬ್ರಿಟನ್ನಿನ ಕೊಳಚೆಪ್ರದೇಶಗಳಲ್ಲಿ ಭಾರತೀಯರು ಮತ್ತು ಇತರೇ ವರ್ಧಮಾನ ದೇಶಗಳ ಜನರೇ ಅಧಿಕವಾಗಿದ್ದಾರೆ. ಈ ಎಲ್ಲಾ ಕೊಳಚೆಪ್ರದೇಶ ನಿವಾಸಿಗಳು ಅಧಿಕವೆಚ್ಚ ಆರ್ಥಿಕತೆಗಳಾಗಿರುವ ಅಮೇರಿಕ ಮತ್ತು ಬ್ರಿಟನ್‌ಗಳಿಗೆ ಅಗತ್ಯವಾದ ಮಾನವಶ್ರಮ ಪೂರೈಕೆ ಮೂಲಗಳಾಗಿದ್ದಾರೆ. ಇವರುಗಳೆಲ್ಲರೂ ಕಡಿಮೆ ಆದಾಯ ನೀಡುವ ವೃತ್ತಿಗಳನ್ನು ಅವಲಂಬಿಸಿದವರಾಗಿರುತ್ತಾರೆ. ಅಭಿವೃದ್ಧ ದೇಶಗಳ ಒಟ್ಟು ಜನಸಂಖ್ಯೆಯ ಶೇಕಡ ೬೦ ರಿಂದ ೭೦ ರಷ್ಟು ಜನತೆಯು ನಗರ ಪ್ರದೇಶಗಳಲ್ಲಿ ವಾಸಿಸುವುದು. ಬಹುತೇಕ ಅಭಿವೃದ್ಧ ದೇಶಗಳಲ್ಲಿ ನಗರೀಕರಣವು ಕೈಗಾರಿಕಾಭಿವೃದ್ಧಿಯ ನೇರ ಪರಿಣಾಮವೇ ಆಗಿದೆ.

ಭಾರತ. ಪಾಕಿಸ್ತಾನ. ನೈಜೀರಿಯಾ. ಉಗಾಂಡ. ದಕ್ಷಿಣ ಆಫ್ರಿಕಾ. ಸಿಂಗಾಪುರ. ಮಲೇಷ್ಯ ಅರ್ಜೆಂಟೈನಾ. ಬ್ರೆಜಿಲ್ ಮತ್ತು ಈಜಿಪ್ಟ್ ಮುಂತಾದ ವರ್ಧಮಾನ ದೇಶಗಳಲ್ಲಿ ನಗರೀಕರಣವು ಕೈಗಾರಿಕಾಕರಣದ ನಂತರ ಕಂಡುಬರುವುದಾಗಿಲ್ಲ. ನೈಜ ಆರ್ಥಿಕ ಅನುಕೂಲತೆಗಳನ್ನು ಹೊಂದಿದ್ದ ಕೆಲವು ಪ್ರದೇಶಗಳು ವರ್ಧಮಾನ ದೇಶಗಳಲ್ಲಿ ಕ್ರಮೇಣವಾಗಿ ಆರ್ಥಿಕ ಆಕರ್ಷಣ ಕೇಂದ್ರಗಳಾಗಿ ಮಾರ್ಪಟ್ಟವು. ಭಾರತದಂತಹ ದೇಶದಲ್ಲಿ ಯೋಜಿತ ಆರ್ಥಿಕಾಭಿವೃದ್ಧಿ ಕಾರಣದಿಂದಾಗಿ ಕೈಗಾರಿಕೀಕರಣ ಉತ್ತೇಜಿಸಲ್ಪಟ್ಟದ್ದರಿಂದ ಗ್ರಾಮೀಣ ಜನತೆ ಉತ್ತಮ ಉದ್ಯೋಗಾವಕಾಶಗಳನ್ನು ಹುಡುಕಿಕೊಂಡು ನಗರಾಭಿಮುಖವಾಗಿ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ. ಶೀಘ್ರಗತಿಯ ಆರ್ಥಿಕ ಬೆಳವಣಿಗೆಯ ಸಂಪನ್ಮೂಲ ಸುಪ್ತತೆಯಿರಲಿ ಇಲ್ಲದಿರಲಿ ನಗರ ಪ್ರದೇಶಗಳು ವಿಪುಲ ಉದ್ಯೋಗಾವಕಾಶಗಳ ಆಶೆಕಟ್ಟುಗಳು ಎಂಬ ಭ್ರಮೆಯಲ್ಲಿ ದೀರ್ಘಕಾಲದಿಂದ ಬಡತನದ ವಿಷವೃತ್ತದಲ್ಲೇ ನರಳಿದ ಗ್ರಾಮೀಣ ಜನತೆ ಗ್ರಾಮಾಂತರ—ಸಣ್ಣ ಮತ್ತು ಮಧ್ಯಮ ದರ್ಜೆ ಪಟ್ಟಣಗಳಿಗೆ, ಸಣ್ಣ ಮತ್ತು

ಮಧ್ಯಮದರ್ಜೆ ಪಟ್ಟಣಗಳಿಂದ, ಬೃಹತ್ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಇದನ್ನು ಆಂತರಿಕವಲಸೆ ಎನ್ನಲಾಗುತ್ತದೆ. ಸಂಪನ್ಮೂಲಗಳ ಸ್ವಾಮ್ಯದ ಅಗಾಧ ಅಸಮತೋಲನ, ಆರ್ಥಿಕವಾಗಿ ಕ್ಷೀಣಿಸುತ್ತಿರುವ ಗ್ರಾಮೀಣ ಅರ್ಥವ್ಯವಸ್ಥೆ ಅವುಗಳ ನೇರ ಪರಿಣಾಮವಾದ ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳು ಆಂತರಿಕ ವಲಸೆಗೆ ತೀವ್ರ ಪ್ರಚೋದನೆಗಳಾಗಿವೆ. ಪರಿಸರಮಾಲಿನ್ಯ, ಅಧಿಕ ಜನಸಾಂದ್ರತೆ, ಸಂಪನ್ಮೂಲ ಕೊರತೆ, ಏರಿಕೆ ಯಾ ಉತ್ಪಾದನಾಪೇಕ್ಷೆ ಮುಂತಾದವುಗಳಿಂದಾಗಿ ವರ್ಧಮಾನ ದೇಶಗಳ ನಗರಪ್ರದೇಶಗಳು ಹೆಚ್ಚು ಕಡಿಮೆ ಆರ್ಥಿಕವಾಗಿ ಸ್ಥಗಿತಗೊಂಡಿವೆ. ಪರಿಣಾಮವಾಗಿ ಬಡತನ, ನಿರಕ್ಷರತೆ, ಅರೆ ಉದ್ಯೋಗ, ನಿರುದ್ಯೋಗಗಳು ಇಂದಿನ ನಮ್ಮ ನಗರ ಪ್ರದೇಶಗಳನ್ನು ನಿರಂತರ ಕಾಡುತ್ತಿವೆ. ಅಭಿವೃದ್ಧಿ ಶೀಲತೆಯ ಕೊರತೆ, ಬಡತನ, ನಿರುದ್ಯೋಗ, ನಗರ ಪ್ರದೇಶಗಳು ಪೂರೈಸುವ ಕಡಿಮೆಕೂಲಿಯ ಸುತುಮಾನ ಆಧರಿತ ಅರೆ ಉದ್ಯೋಗ, ಕಾಲಾನುಕ್ರಮದಲ್ಲಿ ಉದ್ಯೋಗ ದೊರಕೀತೆಂಬ ಆಶೆ, ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳ ಅಸಮಾನ ವಿತರಣೆ ಮುಂತಾದವುಗಳೆಲ್ಲವೂ ನಗರ ಪ್ರದೇಶಗಳಲ್ಲಿ ಜನಸಾಂದ್ರತೆ, ಪ್ರಮುಖವಾಗಿ ಕೊಳಚೆಪ್ರದೇಶಗಳು ಅಧಿಕಗೊಳ್ಳಲು ಕಾರಣವಾಗಿವೆ. ಇಂದು ಭಾರತದ ಶೇಕಡ ೨೦ ರಷ್ಟು ಜನತೆ ನಗರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಬಹುತೇಕಮಂದಿ ಕೊಳಚೆಪ್ರದೇಶಗಳ ನಿವಾಸಿಗಳಾಗಿದ್ದಾರೆ.

ಹೀಗೆ ಅಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳೆರಡರಲ್ಲೂ ಬೇರೆ ಬೇರೆ ಕಾರಣಗಳಿಂದಾಗಿ ಅವುಗಳ ನಗರಪ್ರದೇಶಗಳಲ್ಲಿ ಕೊಳಚೆಪ್ರದೇಶಗಳು ಮತ್ತು ಅವುಗಳ ನಿವಾಸಿಗಳ ಸಂಖ್ಯೆಯಲ್ಲಿ ನಿರಂತರ ಹೆಚ್ಚಳ ಕಂಡುಬಂದಿದೆ. ನಗರಗಳ ಹಲವು ಬಗೆಯ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಲು ಕೊಳಚೆ ಪ್ರದೇಶಗಳ ಸಮಸ್ಯೆಯೂ ಸೇರಿದಂತೆ ಇಂದು ಅಭಿವೃದ್ಧ ಮತ್ತು ವರ್ಧಮಾನ ದೇಶಗಳೆರಡೂ ಸಹ ನಗರ ಯೋಜನೆ ಕಾರ್ಯಕ್ರಮಗಳನ್ನು ಅನುಸರಿಸುತ್ತಿವೆ.

ಕೊಳಚೆ ಪ್ರದೇಶಗಳ ಸಮಸ್ಯೆಯ ವ್ಯಾಪ್ತಿ ಮತ್ತು ಸ್ವರೂಪ

ಕೊಳಚೆಪ್ರದೇಶಗಳ ಅಸ್ತಿತ್ವವು ಸಾಮಾಜಿಕ ಪಿಡುಗು ಆಗಿದೆ. ಕೊಳಚೆಪ್ರದೇಶಗಳ ಹುಟ್ಟು ಕೈಗಾರಿಕೀಕರಣ ಮತ್ತು ನಗರೀಕರಣಗಳ ಅನಿವಾರ್ಯ ಶಾಪವಲ್ಲದಿದ್ದರೂ ಅವುಗಳೊಡನೆ ಮಿಳಿತಗೊಂಡ ಪ್ರಮುಖ ಸಾಮಾಜಿಕ ವೆಚ್ಚ ಅಥವಾ ಸಂಕಷ್ಟ (social cost)ವಾಗಿದೆ.

ಭಾರತದ ಬೃಹತ್ ನಗರಗಳಾದ ಮುಂಬಾಯಿ, ದೆಹಲಿ, ಮದರಾಸು, ಕಲ್ಕತ್ತ, ಬೆಂಗಳೂರು ಕಾನ್ಪುರ ಮತ್ತು ಮಧ್ಯಮ ದರ್ಜೆಯ ಅನೇಕಾನೇಕ ನಗರಪ್ರದೇಶಗಳಲ್ಲಿ ಈ ಶತಮಾನದ ಆದಿಯಿಂದಲೂ ಕೊಳಚೆ ಪ್ರದೇಶಗಳು ಅಣಬೆಗಳಂತೆ ಹುಟ್ಟಿಕೊಳ್ಳಲಾರಂಭಿಸಿದವು. ವಿವಿಧ ನಗರಗಳಲ್ಲಿ ಕೊಳಚೆಪ್ರದೇಶಗಳನ್ನು ಬಗೆಬಗೆಯ ಹೆಸರುಗಳಿಂದ ಕರೆಯಲಾಗುವುದು . ಮದರಾಸಿನಲ್ಲಿ 'ಚೆರಿಸ್' ಕಲ್ಕತ್ತಾದಲ್ಲಿ 'ಬಸ್ತಿ'ಗಳು, ನವದೆಹಲಿಯಲ್ಲಿ 'ಜುಗ್ಗಿ'ಗಳೆಂದೂ ಅವುಗಳು ಕರೆಯಲ್ಪಡುವುವು. ಕೊಳಚೆ ಪ್ರದೇಶಗಳ ಸಾಮಾಜಿಕ ಮತ್ತು ಆರ್ಥಿಕ ದುಃಸ್ಥಿತಿಯ ತೀವ್ರತೆ ವಿವಿಧ ನಗರಗಳಲ್ಲಿ ಭಿನ್ನವಾಗಿದ್ದರೂ ಅವುಗಳ ಸ್ವರೂಪದಲ್ಲಿ ಸಾಮ್ಯವಿದೆ. ಸಮಸ್ಯೆಗಳ ತೀವ್ರತೆಯಲ್ಲಿನ ಭೇದವು ಸಂಬಂಧಪಟ್ಟ ನಗರಗಳ ಅಭಿವೃದ್ಧಿಮಟ್ಟಕ್ಕನುಗುಣವಾಗಿ ವ್ಯತ್ಯಾಸಗೊಳ್ಳುವುದು. ನಗರೀಕರಣ ಮತ್ತು ಕೈಗಾರಿಕೀಕರಣಗಳಲ್ಲಿ ಹೆಚ್ಚಳವುಂಟಾದಂತೆಲ್ಲಾ ಕೊಳಚೆ ಪ್ರದೇಶಗಳ ಸಮಸ್ಯೆಗಳು, ಸಂಖ್ಯೆ, ನಿವಾಸಿಗಳ ಪ್ರಮಾಣ ತೀವ್ರಗೊಳ್ಳುವುವು.

ನಮ್ಮ ದೇಶದ ರಾಜಧಾನಿ ನಗರ ದೆಹಲಿಯಲ್ಲಿ ೧೯೫೧ರಲ್ಲಿ ೧೯೯ ಜುಗ್ಗಿಗಳ ಸಮೂಹವಿದ್ದಿತು. ಇಂತಹ ಜುಗ್ಗಿಗಳಲ್ಲಿ ಸುಮಾರು ೧೨.೦೦೦ ಕುಟುಂಬಗಳು ಅಂದು ವಾಸಿಸುತ್ತಿದ್ದವು. ೧೯೬೧ಕ್ಕೆ ಇಂತಹ ಜುಗ್ಗಿಗಳ ಸಂಖ್ಯೆ ೧೯೯ ರಿಂದ ೫೪೪ಕ್ಕೆ ಏರಿಕೆಯಾಗಿ ಸುಮಾರು ೪೨.೦೦೦ ಕುಟುಂಬಗಳು ಅವುಗಳಲ್ಲಿ ವಾಸಿಸುತ್ತಿದ್ದವು. ೧೯೭೧ಕ್ಕೆ ದೆಹಲಿಯ ಕೊಳಚೆಪ್ರದೇಶಗಳ ಜುಗ್ಗಿ ಸಮೂಹ ಸಂಖ್ಯೆಯು ೫೪೪ ರಿಂದ ೧೧೨೪ಕ್ಕೆ ಏರಿಕೆಯಾದದ್ದಲ್ಲದೆ ಅವುಗಳಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ ೪೨.೦೦೦ ದಿಂದ ೧.೬೦.೦೦೦ಕ್ಕೆ ಹೆಚ್ಚಳವಾಯಿತು.

೧೯೬೧ರಲ್ಲಿ ತಮಿಳುನಾಡಿನಲ್ಲಿ ಒಟ್ಟು ೫೪೮ ಕೊಳಚೆ ಪ್ರದೇಶಗಳಿದ್ದು, ಅವುಗಳಲ್ಲಿ ಸುಮಾರು ೪ ಲಕ್ಷ ಜನಸಂಖ್ಯೆಯನ್ನೊಳಗೊಂಡ ೯೮.೦೦೦ ಕುಟುಂಬಗಳು ವಾಸಿಸುತ್ತಿದ್ದವು. ತಮಿಳುನಾಡಿನ ಕೊಳಚೆಪ್ರದೇಶಗಳ ಸಂಖ್ಯೆಯು ೧೯೭೧ಕ್ಕೆ ೧೨೦೨ಕ್ಕೆ ಹೆಚ್ಚಳವಾಗಿ ಅವುಗಳಲ್ಲಿ ಸುಮಾರು ೭.೪೦,೦೦೦ ಜನಸಂಖ್ಯೆಯನ್ನೊಳಗೊಂಡ ೧.೬೦.೦೦೦ ಕುಟುಂಬಗಳು ವಾಸಿಸುತ್ತಿದ್ದವು. ೧೯೬೧–೭೧ರ ದಶಕದಲ್ಲಿ ಮದರಾಸು ನಗರದ ಜನಸಂಖ್ಯಾ ಹೆಚ್ಚಳ ಶೇಕಡ ೪೨ ಆಗಿದ್ದರೆ, ಕೊಳಚೆಪ್ರದೇಶ ನಿವಾಸಿಗಳ ಸಂಖ್ಯೆಯು ಶೇಕಡ ೮೪ ರಷ್ಟು ಹೆಚ್ಚಿದ್ದಿತು.

೧೯೬೬ರಲ್ಲಿ ಪ್ರಕಟಿಸಲಾದ ಮೂಲಭೂತ ಅಭಿವೃದ್ಧಿ ಯೋಜನೆ ಕಲ್ಕತ್ತ ವರದಿಪ್ರಕಾರ, ಅಂದು ಕಲ್ಕತ್ತ ನಗರದ ಒಟ್ಟು ಜನಸಂಖ್ಯೆಯ ೧/೪ ಭಾಗದಷ್ಟು ಹಾಗೂ ಹೌರಾ ಮತ್ತು ಬಾಲಿ ಪ್ರದೇಶಗಳ ಒಟ್ಟು ಜನಸಂಖ್ಯೆಯ ೧/೩ ಭಾಗದಷ್ಟು ಜನರು ಕೊಳಚೆಪ್ರದೇಶಗಳಲ್ಲಿ ವಾಸಿಸುತ್ತಿದ್ದರು.

೧೯೭೫ರ ಸಮಯಕ್ಕೆ ಕರ್ನಾಟಕ ರಾಜ್ಯದಲ್ಲಿ ಒಟ್ಟು ೬೩೦ ಕೊಳಚೆಪ್ರದೇಶಗಳಿದ್ದು, ಅವುಗಳು ಸುಮಾರು ೧೬೫೧ ಎಕರೆಗಳಷ್ಟು ಭೂಪ್ರದೇಶವನ್ನು ಆವರಿಸಿದ್ದವು. ೧೯೦೧ರಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆಯ ಶೇಕಡ ೧೨.೬ ರಷ್ಟು ೧೯೭೧ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೨೪.೩ ರಷ್ಟು ಜನರು ನಗರಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ೧೯೦೧ರಲ್ಲಿ ಕರ್ನಾಟಕದಲ್ಲಿ ೨೦೬ ನಗರಗಳಿದ್ದು ೧೯೭೧ರ ಸಮಯಕ್ಕೆ ೫ ಬೃಹತ್ ನಗರಗಳು ಮತ್ತು ೨೨೫ ಇತರೇ ನಗರಪ್ರದೇಶಗಳು ಅಸ್ತಿತ್ವಕ್ಕೆ ಬಂದವು. ಕರ್ನಾಟಕದ ನಗರಗಳ ಕೊಳಚೆಪ್ರದೇಶಗಳ ನಿವಾಸಿಗಳ ಸಂಖ್ಯೆ ಲಭ್ಯವಿಲ್ಲ. ಆದರೆ ೧೯೦೧–೧೯೭೧ರ ನಡುವೆ ಕರ್ನಾಟಕ ರಾಜ್ಯದ ನಗರ ಜನಸಂಖ್ಯೆ ಸುಮಾರು ನಾಲ್ಕುಪಟ್ಟು ಹೆಚ್ಚಳವಾಗಿದೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡಾಗ ಕೊಳಚೆ ಪ್ರದೇಶಗಳ ನಿವಾಸಿಗಳ ಸಂಖ್ಯೆಯಲ್ಲಿಯೂ ಗಣನೀಯ ಏರಿಕೆ ಉಂಟಾಗಿದೆ ಎಂದು ಹೇಳಬಹುದಾಗಿದೆ.

ಕೊಳಚೆಗೇರಿಗಳ ಅಸ್ತಿತ್ವದಿಂದಾಗುವ ಸಾಮಾಜಿಕ ಆರ್ಥಿಕ ಪರಿಣಾಮಗಳು

ನಮ್ಮ ನಗರಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಎಲ್ಲಾ ಬಗೆಯ ಮುನಿಸಿಪಲ್ ಸೇವಾ ಸೌಲಭ್ಯಗಳು ಲಭ್ಯವಿಲ್ಲ. ಪ್ರತ್ಯೇಕವಾದ ಖಾಸಗಿ ಸ್ನಾನಗೃಹ, ಶೌಚಗೃಹಗಳು ಬಹುತೇಕ ಕುಟುಂಬಗಳಿಗಿಲ್ಲ. ಇವರಿಗೆಲ್ಲಾ ದೂರದ ಬಯಲು ಪ್ರದೇಶವೇ ಶೌಚಗೃಹಗಳು. ಮನೆಯ ಮುಂದಿನ ಅಥವಾ ಹಿಂದಿನ ಅಲ್ಪಸ್ವಲ್ಪ ಸ್ಥಳವೇ ಸ್ನಾನಮಾಡುವ ಸ್ಥಳಗಳು. ಜೋಪಡಿಗಳೇ ವಾಸಗೃಹಗಳು. ನಗರ ಪ್ರದೇಶಗಳ ಬಹುತೇಕ ಕೊಳಚೆಪ್ರದೇಶಗಳಲ್ಲಿ ಸಾರ್ವಜನಿಕ ಶೌಚಗೃಹಗಳನ್ನು ಕಾಣುವುದು ದುರ್ಲಭ. ಕೊಳಚೆ ಪ್ರದೇಶ ನಿವಾಸಿಗಳು ತಮ್ಮ ತಮ್ಮ ಮಕ್ಕಳನ್ನು ವಾಸಗೃಹಗಳ ಎದುರೇ ಅಥವಾ ಹಿಂಬದಿ ಅಥವಾ ಅಕ್ಕಪಕ್ಕದ ಸ್ಥಳಗಳಲ್ಲೇ ಶೌಚಕ್ಕೆ ಕೂರಿಸುವುದು ಸರ್ವೇಸಾಮಾನ್ಯ ನೋಟ. ಇದರಿಂದ ಸುತ್ತಲಿನ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮದ ಅರಿವು ಇಲ್ಲದ ಜನರಿವರು.

- ಅಸ್ತವ್ಯಸ್ತಗೊಂಡ ಬೀದಿ ದೀಪ, ಚರಂಡಿ ವ್ಯವಸ್ಥೆಯೇ ಇಲ್ಲದಿರುವಿಕೆ ಅಥವಾ ಇದ್ದರೂ ಚೊಕ್ಕಟವಾಗಿಲ್ಲದಿರುವುದು, ಗುಡಿಸಲುಗಳ ಅಕ್ಕಪಕ್ಕದಲ್ಲೇ ಇರುವ ತಿಪ್ಪೆಗುಂಡಿಗಳಿಂದ ಹೊರಹೊಮ್ಮುವ ಅಸಹನೀಯ ಗಬ್ಬುವಾಸನೆಗಳಿಂದಾಗಿ ಕೊಳಚೆ ಪ್ರದೇಶಗಳು ಸೊಳ್ಳೆಗಳ ನೆಲೆವೀಡುಗಳಾಗಿವೆ. ಸ್ವಚ್ಛ ಗಾಳಿ, ಬೆಳಕು ಇಲ್ಲಿನ ಜೋಪಡಿಗಳೊಳಗೆ ಪ್ರವೇಶಿಸುವುದೇ ಇಲ್ಲವೇನೋ ಎಂಬಂತೆ ಇರುವ ಕಿಟಕಿಗಳು ಅಥವಾ ಕಿಟಕಿಗಳೇ ಇಲ್ಲದಿರುವಿಕೆ ಇಲ್ಲಿನ ಸಾಮಾನ್ಯ ನೋಟ. ಈ ಹಲವು ಅಂಶಗಳಿಂದ ಕೊಳಚೆ ಪ್ರದೇಶಗಳ ಜನರು ತೀವ್ರತರನಾದ ಕಾಲರಾ, ಕ್ಷಯ, ಮಲೇರಿಯಾ ಮುಂತಾದ ರೋಗಗಳಿಗೆ ತುತ್ತಾಗುವುದು ಸರ್ವೇ ಸಾಮಾನ್ಯ. ಇಂತಹ ಮಲಿನ ಪರಿಸರದ ಜೀವನವು ತಮ್ಮ ಆರೋಗ್ಯಕ್ಕೆ ಮಾರಕ ಎಂಬ ಪರಿವೆಯೇ ಇವರುಗಳಿಗಿಲ್ಲ.

ನಿರಕ್ಷರತೆ, ಅರೆ-ಉದ್ಯೋಗ, ನಿರುದ್ಯೋಗ ಮುಂತಾದವುಗಳಿಗೆ ಗುರಿಯಾದ ಇಲ್ಲಿನ ನಿವಾಸಿಗಳ ಅಲ್ಪ ಆದಾಯ ಹೆಚ್ಚು ಅಸ್ಥಿರತೆಯಿಂದಲೂ ಕೂಡಿರುತ್ತದೆ. ಪರಿಣಾಮವಾಗಿ ಅವರುಗಳ ಅನುಭೋಗ

ಮಟ್ಟ ಅತ್ಯಂತ ಕಡಿಮೆ ಪ್ರಮಾಣದ್ದಾಗಿರುತ್ತದೆ. ದೇಶದ ಸಾಮಾಜಿಕ ಮತ್ತು ಆರ್ಥಿಕ ಸಂಕ್ರಮಣ ಪ್ರಕ್ರಿಯೆಗಳಿಂದ ದೂರವಾಗುಳಿದ ವರ್ಗವಿದು. ಪರಿಣಾಮವಾಗಿ ಅಧಿಕ ಸಂಖ್ಯೆಯ ಅವಲಂಬಿತ ಜನಸಂಖ್ಯೆ ಅಲ್ಪ ಆದಾಯಮಟ್ಟ, ಅತ್ಯಂತ ಕನಿಷ್ಠ ಅನುಭವಗಳಿಗೆ ಸಂಬಂಧಪಟ್ಟ ವಿಷವೃತ್ತ ದೊಳಗೇ ಚಲಿಸುವ ಮಾನವರೂಪದ ನಿಷ್ಕ್ರಿಯ ಜನರಿವರು.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇಂತಹ ಹೀನಾಯ ಬದುಕನ್ನು ಸಾಗಿಸುತ್ತಿರುವ ಕೊಳಚೆಪ್ರದೇಶಗಳ ನಿವಾಸಿಗಳಲ್ಲಿ ಕೆಲವರಾದರೂ ನಗರಪ್ರದೇಶಗಳಲ್ಲಿ ನಡೆಯುವ ಕಾಳಸಂತೆ, ಜೂಗಾರಿ, ವೇಶ್ಯಾವಾಟಿಕೆ ಮುಂತಾದ ಖದೀಮ ವೃತ್ತಿಗಳನ್ನು ಪೋಷಿಸಿಕೊಂಡು ಬರುತ್ತಿರುವವರಾಗಿರುತ್ತಾರೆ. ಈ ಕೆಲವು ಸಮಸ್ಯೆಗಳು ಸಾಮಾಜಿಕವಾಗಿ ಅಪೇಕ್ಷಣೀಯವಲ್ಲ. ಉತ್ತಮ ಬದುಕನ್ನು ನಡೆಸುವ ಆಶೆಯೇ ಬತ್ತಿಹೋಗಿರುವ ಇವರುಗಳಲ್ಲಿ ಜೀಪರಸ ತುಂಬುವುದೇ ನಗರ ಯೋಜನೆ ಮತ್ತು ನಗರಾಭಿವೃದ್ಧಿ ನೀತಿಗಳ ಪ್ರಮುಖ ಉದ್ದೇಶಗಳಾಗಿರಬೇಕು.

ಕೊಳಚೆಗೇರಿಗಳ ಉತ್ತಮ ಪಡಿಸುವಿಕೆ ಮತ್ತು ನಿವಾರಣೆಗಾಗಿ ಕೈಗೊಂಡ ಕ್ರಮಗಳು

ಸಮರ್ಪಕ ನಗರ ಬೆಳವಣಿಗೆಯು ಆರ್ಥಿಕ ಅಭಿವೃದ್ಧಿಯ ಅವಶ್ಯಕತೆಗಳಲ್ಲೊಂದು ಎಂಬ ಅಂಶವನ್ನೇ ನಮ್ಮ ಯೋಜನೆಗಳಲ್ಲಿ ತೀರಾ ಇತ್ತೀಚಿನ ವರ್ಷಗಳವರೆಗೂ ಅಳವಡಿಸಿಕೊಂಡಿರಲಿಲ್ಲವೆಂಬುದು ದುರದೃಷ್ಟಕರ ಸಂಗತಿ. ಪರಿಣಾಮವಾಗಿ ನಾಲ್ಕನೇ ಯೋಜನೆಯ ಆರಂಭದವರೆಗೂ (೧೯೬೯) ನಿರ್ದಿಷ್ಟವಾದ ಯಾವುದೇ ನಗರಾಭಿವೃದ್ಧಿ ಯೋಜನೆಗಳಿರಲಿಲ್ಲ. ನಗರಗಳ ಸ್ಥಳೀಯ ಸರ್ಕಾರಗಳಾದ ಮುನಿಸಿಪಲ್ ಸಂಸ್ಥೆಗಳು ನಗರಾಭಿವೃದ್ಧಿಯ ಯೋಜನೆ, ನಿರ್ದೇಶನ, ತಮ್ಮ ಪಾತ್ರ ಮತ್ತು ಹೊಣೆ ಮುಂತಾದವುಗಳನ್ನೇ ಅರಿತಿರಲಿಲ್ಲ. ೧೯೭೦ರ ದಶಕದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವ್ಯವಸ್ಥಿತ, ಯೋಜನಾಬದ್ಧ ನಗರೀಕರಣದ ಅಗತ್ಯತೆ, ಮಹತ್ವ, ಇಂದಿನ ಅನೇಕ ದೊಡ್ಡ ಪ್ರಮಾಣದ ಮತ್ತು ಮಾಧ್ಯಮದರ್ಜೆ ನಗರಗಳು ಸೃಷ್ಟಿಸಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಮನನಮಾಡಿಕೊಳ್ಳಲು ಯತ್ನಿಸುತ್ತಿವೆ. ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆಗಳ ವಿಕೇಂದ್ರೀಕರಣ, ಹಿಂದುಳಿದ ಪ್ರದೇಶಗಳಿಗಾಗಿ ವಿಶೇಷ ಯೋಜನೆಗಳು, ಹಲವು ಬಗೆಯ ಪರಿಹಾರಗಳು, ಉತ್ತೇಜಕಗಳ ಅನುಸರಣೆ ಮುಂತಾದ ಆರ್ಥಿಕ ಕಾರ್ಯಕ್ರಮಗಳು ಇಂದಿನ ನಗರಪ್ರದೇಶಗಳ ಮೇಲಿನ ಒತ್ತಡವನ್ನು ಕಡಿಮೆಮಾಡುವ ಉದ್ದೇಶವನ್ನೂ ಹೊಂದಿವೆ. ಅಂತೆಯೇ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಕೈಗೊಳ್ಳುತ್ತಿರುವ ವಾಸಗೃಹಯೋಜನೆ, ಕುಡಿಯುವ ನೀರು ಪೂರೈಕೆ ಸಂಸ್ಥೆಗಳು, ನಗರ ಅಭಿವೃದ್ಧಿ ಸಂಸ್ಥೆಗಳು, ನಗರ ಉತ್ತಮಪಡಿಸುವಿಕೆ ಟ್ರಸ್ಟ್‌ಗಳು, ಹುಡ್ಕೊ, ಮುಂತಾದ ಸಂಸ್ಥೆಗಳನ್ನು ವಿಶೇಷವಾಗಿ ನಗರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉತ್ತೇಜಿಸಲು ಮತ್ತು ಅನುಸರಣೆಯಲ್ಲಿ ತರಲು ಸ್ಥಾಪಿಸಲಾಗಿದೆ. ನಗರಗಳ ಕೊಳಚೆಪ್ರದೇಶಗಳನ್ನು ನಿವಾರಿಸಲು ಕೊಳಚೆನಿವಾರಣ ಬೋರ್ಡ್‌ಗಳನ್ನು ಸಹ ಬಹುತೇಕ ರಾಜ್ಯಗಳಲ್ಲಿ ಇಂದು ಸ್ಥಾಪಿಸಲಾಗಿದೆ.

ಯೋಜನೆಯನ್ವಯ ಜಾರಿಗೆ ತರಲಾಗುತ್ತಿರುವ ರಾಷ್ಟ್ರೀಯ ಕನಿಷ್ಠ ಅಗತ್ಯ ಪೂರೈಕೆ ಕಾರ್ಯಕ್ರಮದ ಪ್ರಕಾರ, ೧೯೭೨–೭೩ ರಿಂದೀಚೆಗೆ ದೇಶದಲ್ಲಿನ ಕೊಳಚೆಪ್ರದೇಶಗಳ ಪರಿಸರವನ್ನು ಆರೋಗ್ಯ ಸಂರಕ್ಷಣೆ ದಿತದೃಷ್ಟಿಯಿಂದ ಉತ್ತಮಪಡಿಸಲು ಕಾರ್ಯಕ್ರಮವೊಂದನ್ನು ಆಚರಣೆಗೆ ತರಲಾಯಿತು. ಮುಂದಿನ ಕೆಲವೇ ಕೆಲವು ವರ್ಷಗಳ ಅವಧಿಯಲ್ಲಿ ನಿವಾರಿಸಲು ಆಗದ ಆದರೆ ಉತ್ತಮ ಪಡಿಸುವಿಕೆಗೆ ಸೂಕ್ತವಿರುವಂತಹ ಬಗೆಯ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆ, ರಸ್ತೆ, ಸಾರ್ವತ್ರಿಕ ಶೌಚಗೃಹ ವ್ಯವಸ್ಥೆ, ಬೀದಿದೀಪ ಮುಂತಾದ ಸೌಲಭ್ಯಗಳನ್ನು ಕಲ್ಪಿಸುವ ರಾಜ್ಯಸರ್ಕಾರಗಳ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರಸರ್ಕಾರವು ಧನಸಹಾಯ ನೀಡಲಾರಂಭಿಸಿತು. ಆರಂಭದಲ್ಲಿ ೮ ಲಕ್ಷಕ್ಕೂ ಮಿಗಿಲಾದ ಜನಸಂಖ್ಯೆ ಹೊಂದಿದ್ದ ೧೧ ನಗರಪ್ರದೇಶಗಳಿಗೆ ಈ ಯೋಜನೆಯನ್ನು ಅನ್ವಯಿಸಲಾಯಿತು. ಎಂಟು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯಿರುವ ಇತರೇ ೯ ನಗರಗಳಿಗೂ ಇದೇ ಯೋಜನೆಯನ್ನು ನಂತರ ಅನ್ವಯಿಸಲಾಯಿತು. ೧೯೭೩–೭೪ ಅವಧಿಯಲ್ಲಿ ಈ ಯೋಜನೆಯನ್ವಯ ಸುಮಾರು ೩೦ ಕೋಟಿ

ರೂಪಾಯಿಗಳನ್ನು ಹಲವು ಸೌಲಭ್ಯ ಕಲ್ಪಿಸಲು ವಿನಿಯೋಗಿಸಲಾಯಿತು. ಇದರಿಂದ ಸುಮಾರು ೩೦ ಲಕ್ಷ ಕೊಳಚೆಪ್ರದೇಶ ನಿವಾಸಿಗಳಿಗೆ ಅನುಕೂಲತೆಗಳು ಲಭಿಸಿವೆ.

ಐದನೇ ಪಂಚವಾರ್ಷಿಕ ಯೋಜನೆಯಲ್ಲೂ ಸಹ ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಕನಿಷ್ಠ ಆವಶ್ಯಕತೆ ಪೂರೈಕೆ ಅಂಶವಾಗಿ ಪರಿಗಣಿಸಿ ಅನುಸರಿಸಲಾಯಿತು. ಈ ಕಾರ್ಯಕ್ರಮವನ್ನು ೩ ಲಕ್ಷ ಜನಸಂಖ್ಯೆಯಿರುವ ಎಲ್ಲಾ ನಗರಗಳಿಗೂ ಅನ್ವಯಿಸಲಾಯಿತು. ಹಾಗೂ ೩ ಲಕ್ಷ ಜನಸಂಖ್ಯೆ ಇಲ್ಲದ ನಗರಗಳಿರುವ ರಾಜ್ಯಗಳಲ್ಲಿ ಯಾವುದಾದರೊಂದು ನಗರದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಲಾಯಿತು. ೧೯೫೧–೧೯೭೪ರ ಅವಧಿಯಲ್ಲಿ ಆಚರಣೆಗೆ ತರಲಾದ ಹಲವು ಕಾರ್ಯಕ್ರಮಗಳ ಪ್ರಕಾರ ಕೊಳಚೆಪ್ರದೇಶಗಳ ಸುಮಾರು ೫ ಲಕ್ಷ ನಿವಾಸಿಗಳು ಕನಿಷ್ಠ ಅನುಕೂಲತೆಗಳನ್ನು ಪಡೆದಿದ್ದಾರೆ. ೧೯೭೧ರ ಜನಗಣತಿಯನ್ವಯ ದೇಶದ ೫೪೭.೪ ಮಿಲಿಯನ್ ಜನಸಂಖ್ಯೆಯಲ್ಲಿ ಸುಮಾರು ೧೦೮.೯೦ ಮಿಲಿಯನ್ ಜನತೆಯು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಿತು. ನಗರ ಜನಸಂಖ್ಯೆಯ (೧೦೮.೯೦ ಮಿಲಿಯನ್) ೧/೫ ಭಾಗದಷ್ಟು (೨೧.೭೦ ಮಿಲಿಯನ್) ಜನತೆ ಕೊಳಚೆ ಪ್ರದೇಶ ನಿವಾಸಿಗಳಾಗಿರುವುದು ಕಂಡುಬರುವುದು. ಕೊಳಚೆಪ್ರದೇಶಗಳ ಪರಿಸರ ಉತ್ತಮಪಡಿಸುವಿಕೆ ಕಾರ್ಯಕ್ರಮವು ೧೯೫೧–೭೪ರ ಅವಧಿಯಲ್ಲಿ ೫ ಮಿಲಿಯನ್ ಜನರಿಗೆ ಕನಿಷ್ಠ ಸೌಲಭ್ಯ ಕಲ್ಪಿಸಲು ಶಕ್ತವಾಗಿದ್ದಿತು. ಅಂದರೆ ಉಳಿದ ಸುಮಾರು ೧೫ ಮಿಲಿಯನ್‌ಗೂ ಮಿಕ್ಕ ಕೊಳಚೆಗೇರಿಗಳ ನಿವಾಸಿಗಳು ಕನಿಷ್ಠ ಸೌಲಭ್ಯಗಳನ್ನೂ ಪಡೆಯುವುದು ಸಾಧ್ಯವಾಗಲಿಲ್ಲ. ಈ ಕಾರಣದಿಂದಾಗಿ ಪರಿಶಿಷ್ಟ ಜಾತಿಯವರು ವಿಶೇಷವಾಗಿ ಝಾಡಮಾಲಿಗಳು ವಾಸಿಸುವ ಕೊಳಚೆ ಪ್ರದೇಶಗಳ ಪರಿಸರ ಉತ್ತಮಪಡಿಸುವಿಕೆಗೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ (೧೯೭೪–೭೮) ಆದ್ಯತೆ ನೀಡಲಾಯಿತು. ಇದೊಂದು ಸ್ತುತ್ಯಾರ್ಹ ಪ್ರಯತ್ನ. ಕೊಳಚೆಪ್ರದೇಶಗಳ ಪರಿಸರ ಉತ್ತಮಪಡಿಸುವಿಕೆ ಕಾರ್ಯಾಚರಣೆಗಳಿಂದ ತಲಾವಾರು ಸುಮಾರು ೧೫೦ ರೂಪಾಯಿಗಳು ಖರ್ಚಾಗುವುದು ಎಂದು ತಿಳಿದುಬಂದಿದೆ. ಐದನೇ ಯೋಜನೆಯ ಕರಡುಪ್ರತಿಯನ್ವಯ ಸುಮಾರು ೧೯೦ ಕೋಟಿ ರೂಪಾಯಿಗಳನ್ನು ಉಳಿದ ೧೩ ಮಿಲಿಯನ್ ಕೊಳಚೆಗೇರಿ ನಿವಾಸಿಗಳಿಗೆ ಕನಿಷ್ಟ ಸೌಲಭ್ಯ ಕಲ್ಪಿಸಲು ಬಳಸಲು ಉದ್ದೇಶಿಸಲಾಗಿದ್ದಿತು. ಆದರೆ ೧೯೭೪–೭೮ರ ಐದನೇ ಯೋಜನೆ ಅವಧಿಯಲ್ಲಿ ವಾಸ್ತವವಾಗಿ ಈ ಕಾರ್ಯಕ್ರಮಕ್ಕಾಗಿ ಕೇವಲ ೪೩ ಕೋಟಿ ರೂಪಾಯಿಗಳನ್ನು ಮಾತ್ರ ವಿನಿಯೋಗಿಸಲಾಯಿತು. ೧೯೭೮–೮೦ರ ಅವಧಿಯಲ್ಲಿ ಈ ಕಾರ್ಯಕ್ರಮಕ್ಕಾಗಿ ವಿನಿಯೋಗಿಸಲಾದ ಹಣಕಾಸು ಸಂಪನ್ಮೂಲದ ಅಂಕಿಅಂಶಗಳು ಲಭ್ಯವಿಲ್ಲ. ಹಾಗೂ ೧೯೮೦ರ ಜನವರಿಯಲ್ಲಿ ಅಸ್ತಿತ್ವಕ್ಕೆ ನೂತನ ಸರ್ಕಾರವು ೧೯೮೦–೮೫ರ ಅವಧಿಗಾಗಿ ನೂತನ ಆರನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ ಅನುಸರಣೆಗೆ ತರುವ ದೃಢ ನಿಶ್ಚಯ ಹೊಂದಿದೆ. ಒಟ್ಟಿನಲ್ಲಿ ಕೊಳಚೆಗೇರಿ ನಿವಾಸಿಗಳ ಮೂಲಭೂತ ಕನಿಷ್ಠ ಅಗತ್ಯಗಳನ್ನು ಪೂರೈಸಲು ಬಳಸಿರುವ ಹಣಕಾಸು ಸಂಪನ್ಮೂಲ ಅತ್ಯಂತ ಸಣ್ಣ ಪ್ರಮಾಣದ್ದಾಗಿದ್ದು ಸಮಸ್ಯೆಯನ್ನು ಶೀಘ್ರತಮವಾಗಿ ನಿವಾರಿಸಲು ಹೆಚ್ಚು ಸಂಪನ್ಮೂಲ ಮತ್ತು ದೃಢ ಪ್ರಯತ್ನಗಳೆರಡೂ ಅವಶ್ಯವೆಂಬುದನ್ನು ತಿಳಿಸುವುದು.[1]

- ಕೊಳಚೆಗೇರಿ ನಿವಾಸಿಗಳ ಸಮಸ್ಯೆಯನ್ನು ನಿವಾರಿಸಲು ವಾಸಗೃಹ ಮತ್ತು ನಗರ ಅಭಿವೃದ್ಧಿ ನಿಗಮವು (ಹುಡ್ಕೊ—HUDCO) ಅನುಸರಣೆಗೆ ತಂದಿರುವ "ಸ್ಥಳ ಮತ್ತು ಸೇವಾಸೌಲಭ್ಯಗಳು" ಕಾರ್ಯಕ್ರಮವು ವಿಶಿಷ್ಟವಾದುದಾಗಿದೆ. ಇದುವರೆಗೆ ಹುಡ್ಕೋ ಇಂತಹ ೧೪ ಅಥವಾ ೧೫ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಈ ಕಾರ್ಯಕ್ರಮವನ್ನು ಬಹುಮಟ್ಟಿಗೆ ಎಲ್ಲಾ ರಾಜ್ಯಗಳೂ ಅನುಸರಿಸಲು ಉತ್ಸುಕವಾಗಿವೆ. ಆದರೆ ಮಧ್ಯಪ್ರದೇಶವು ಈ ದಿಸೆಯಲ್ಲಿ ಮಹತ್ವದ ಹೆಜ್ಜೆಯಿಟ್ಟು ಇಂತಹ ಹೆಚ್ಚು ಕಾರ್ಯಕ್ರಮಗಳನ್ನು ಪಡೆದುಕೊಂಡಿದೆ. ಇಂತಹ ಕ್ಷಿಪ್ರಕಾಲದಲ್ಲಿ ಸಮಸ್ಯೆಯ ನಿವಾರಣೆಗೆ ನೆರವಾಗುವ ಕಾರ್ಯಕ್ರಮಗಳ ಅನುಸರಣೆಯಲ್ಲಿನ ನಿರುತ್ಸಾಹ ಮತ್ತು ಕಾಲಹರಣ ಸರ್ವಥಾ ಸಲ್ಲದು. ಕೇಂದ್ರ ಸರ್ಕಾರದ ಪರಿಸರ ಉತ್ತಮಪಡಿಸುವಿಕೆಗಾಗಿ "ಕನಿಷ್ಠ ಅಗತ್ಯ" ಪೂರೈಕೆ ಯೋಜನೆ ಮತ್ತು ಹುಡ್ಕೋದ ಸ್ಥಳ ಮತ್ತು ಸೇವಾಸೌಲಭ್ಯಗಳ ಯೋಜನೆಗಳನ್ನು ಸೂಕ್ತವಾಗಿ ಸಮಗ್ರಗೊಳಿಸಿ ಅನುಸರಣೆಯಲ್ಲಿ ತರಬೇಕಾದ ಅಗತ್ಯವನ್ನು ಇಂದಿನ ಪರಿಸ್ಥಿತಿ ಸೂಚಿಸುತ್ತದೆ.

ಕೊಳಚೆಗೇರಿಗಳ ಪರಿಸರ ಉತ್ತಮಪಡಿಸುವಿಕೆ ಕಾರ್ಯಕ್ರಮವು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಬೃಹತ್ ಮತ್ತು ಮಧ್ಯಮ ದರ್ಜೆ ನಗರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಕೊಳಚೆಪ್ರದೇಶಗಳನ್ನು ತಾತ್ವಿಕವಾಗಿ ಖಾಯಂ ವಸತಿಕೇಂದ್ರಗಳೆಂದು ಪರಿಗಣಿಸಿರುವುದನ್ನು ಸೂಚ್ಯವಾಗಿ ತಿಳಿಸುವುದು. ಹಾಗಾದರೆ ಇವುಗಳ ಉತ್ತಮಪಡಿಸುವಿಕೆ ಕಾರ್ಯಕ್ರಮದ ಮೇಲೆ ವಿನಿಯೋಗಿಸಲ್ಪಡುತ್ತಿರುವ ಸಂಪನ್ಮೂಲ ಮತ್ತು ಪ್ರಯತ್ನಗಳನ್ನು ಬಹುಮಟ್ಟಿಗೆ ಹೆಚ್ಚಳ ಮಾಡುವ ಅಗತ್ಯವನ್ನು ತಿಳಿಸುವುದು.

ಕರ್ನಾಟಕ ಸರ್ಕಾರವು ಅಕ್ಟೋಬರ್ ೧೯೭೪ರಲ್ಲಿ ಕರ್ನಾಟಕ ಕೊಳಚೆಪ್ರದೇಶಗಳ (ಉತ್ತಮಪಡಿಸುವಿಕೆ ಮತ್ತು ನಿವಾರಣೆ) ಶಾಸನ, ೧೯೭೩, ಅನ್ನು ಹೊರಡಿಸಿತು. ಈ ಕಾನೂನಿನನ್ವಯ ರಾಜ್ಯದ ಕೊಳಚೆಗೇರಿಗಳ ಪರಿಸರ ಉತ್ತಮಪಡಿಸುವಿಕೆ ಮತ್ತು ಅವುಗಳ ನಿವಾರಣೆ ಕಾರ್ಯಗಳನ್ನು ಕೈಗೊಳ್ಳಲು ಅವಕಾಶವಾಗಿದೆ. ೧೯೭೫ರಲ್ಲಿ ಕೊಳಚೆಗೇರಿನಿವಾಸಿಗಳ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಲು ಕರ್ನಾಟಕ ಕೊಳಚೆಗೇರಿ ನಿವಾರಣಾ ಬೋರ್ಡ್ ಅನ್ನು ಸ್ಥಾಪಿಸಲಾಯಿತು. ಬೆಂಗಳೂರು ನಗರಸಭೆ, ಹುಬ್ಬಳ್ಳಿ-ಧಾರವಾಡ ನಗರಸಭೆ, ಮೈಸೂರು ನಗರ ಮುನಿಸಿಪಾಲಿಟಿ ಮತ್ತು ಕರ್ನಾಟಕ ಕೊಳಚೆಗೇರಿಗಳ ನಿವಾರಣಾ ಬೋರ್ಡ್ ಮುಂತಾದ ಸಂಸ್ಥೆ ಮತ್ತು ಸ್ಥಳೀಯ ಸರ್ಕಾರಗಳಿಗೆ ಕೊಳಚೆಗೇರಿಗಳ ನಿವಾರಣೆಗಾಗಿ ಸುಮಾರು ೧೭೯ ಲಕ್ಷ ರೂಪಾಯಿಗಳನ್ನು ೧೯೭೭ರ ವರೆಗೆ ಪೂರೈಸಲಾಗಿದೆ.[2] ಕೇಂದ್ರ ಸರ್ಕಾರವು ನೀಡಿದ ೮೦.೯೧ ಲಕ್ಷ ರೂಪಾಯಿಗಳ ನೆರವಿನಿಂದ ಸುಮಾರು ೭೭ ಕೊಳಚೆಪ್ರದೇಶಗಳ ಪರಿಸರ ಉತ್ತಮಪಡಿಸುವಿಕೆ ಕಾರ್ಯಕ್ರಮವನ್ನು ಬೆಂಗಳೂರು ನಗರಸಭೆ ಕಾರ್ಪೊರೇಶನ್ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳು ಕೈಗೊಂಡಿರುವೆ. ಪ್ರತ್ಯೇಕ ವಸತಿಯೋಗ್ಯ ಲೇಔಟ್‌ಗಳ ನಿರ್ಮಾಣ ಮತ್ತು ಕೊಳಚೆಗೇರಿಗಳ ನಿವಾಸಿಗಳಿಗೆ ವಾಸಗೃಹರಚನೆಗಾಗಿ ಸ್ಥಳ ನೀಡುವಿಕೆ–ಎರಡು ಅಂಶಗಳ ಈ ಕಾರ್ಯಕ್ರಮಗಳ ಪ್ರಮುಖ ಉದ್ದೇಶಗಳಾಗಿವೆ. ಇದುವರೆಗೆ ೭ ಕೊಳಚೆಪ್ರದೇಶಗಳ ನಿವಾಸಿಗಳಿಗೆ ಸುಮಾರು ೨.೯೯೭ ವಾಸಗೃಹರಚನೆಸ್ಥಳಗಳನ್ನು ಪೂರೈಸಲಾಗಿದೆ. ಕೇಂದ್ರ ಸರ್ಕಾರದ ಕೊಳಚೆಗೇರಿಗಳ ಪರಿಸರ ಉತ್ತಮಪಡಿಸುವಿಕೆ ಕಾರ್ಯಕ್ರಮಕ್ಕಿಂತ ಕರ್ನಾಟಕ ಸರ್ಕಾರದ ಈ ಬಗೆಯ ಕಾರ್ಯಕ್ರಮಗಳು ಕೊಳಚೆ ಪ್ರದೇಶಗಳ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಕ್ರಮೇಣವಾಗಿ ವ್ಯವಸ್ಥಿತವಾಗಿ ನಿವಾರಿಸಬಲ್ಲಂತಹ ವಾಸ್ತವಿಕ ಹಾಗೂ ಅಗತ್ಯವಾದ ನಿಲುವನ್ನು ಪಡೆದಿರುವುದು ಇಲ್ಲಿ ಕಂಡುಬರುವುದು. ಇಂದು ದೇಶದ ಕೊಳಚೆಗೇರಿಗಳ ಸಮಸ್ಯೆಗಳ ನಿವಾರಣೆ ಮತ್ತು ಅವುಗಳ ಬೆಳವಣಿಗೆಯನ್ನು ತಡೆಹಿಡಿದು, ನಂತರ ಕ್ರಮೇಣ ವ್ಯವಸ್ಥಿತವಾಗಿ ತೊಡೆದುಹಾಕುವುದಕ್ಕೆ ಕರ್ನಾಟಕ ಸರ್ಕಾರ ಕೈಗೊಂಡಿರುವಂತಹ ಕಾರ್ಯಕ್ರಮಗಳು ಅಗತ್ಯ ಎಂಬುದನ್ನು ಇಲ್ಲಿ ಮನಗಾಣಬೇಕು.

ಕೊಳಚೆಗೇರಿಗಳ ನಿರಂತರ ಅಸ್ತಿತ್ವಕ್ಕೆ ಕಾರಣಗಳು

೧೯೫೧–೧೯೮೦ರ ಯೋಜನಾವಧಿಯಲ್ಲಿ ನಗರೀಕರಣ ವಿಸ್ತೃತಗೊಂಡಂತೆಲ್ಲಾ ಕೊಳಚೆಪ್ರದೇಶಗಳ ಸಂಖ್ಯೆ ಮತ್ತು ಅವುಗಳಲ್ಲಿ ವಾಸಿಸುವ ಕುಟುಂಬ ಹಾಗೂ ಕುಟುಂಬಗಳ ಜನಸಂಖ್ಯಾ ಪ್ರಮಾಣಗಳಲ್ಲೆಲ್ಲಾ ಏರಿಕೆಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಪ್ರಮುಖ ಕಾರಣವೆಂದರೆ:

೧. ಗ್ರಾಮೀಣ ಕ್ಷೇತ್ರದ ಸಾಮಾಜಿಕ ಮತ್ತು ಆರ್ಥಿಕ ಅಭ್ಯುದಯ ಸಾಧನೆಯ ವಿಫಲತೆ ಪರಿಣಾಮವಾಗಿ ದಿನೇ ದಿನೇ ನಗರಾಭಿಮುಖವಾಗಿ ಚಲಿಸುವ ಗ್ರಾಮಸ್ಥರ ಸಂಖ್ಯೆಯ ಹೆಚ್ಚಳ:

೨. ಕೊಳಚೆಪ್ರದೇಶಗಳ ಕನಿಷ್ಠ ಅಗತ್ಯತೆಯನ್ನೇ ಪೂರೈಸುವಲ್ಲಿನ್ನ ವಿಫಲತೆ ಮತ್ತು ಕೊಳಚೆಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳು ಮಾನವಶಕ್ತಿ ಸಂಪನ್ಮೂಲ ಬೆಳವಣಿಗೆಯ ಬಗೆಗೆ ಗಮನ ವಹಿಸದೆ ಇರುವುದು. ಅಂದರೆ ಕೊಳಚೆಪ್ರದೇಶಗಳ ಉತ್ತಮಪಡಿಸುವಿಕೆ ಮತ್ತು ನಿವಾರಣೆ ಮಾನವ ಸಂಪನ್ಮೂಲದ ಬೆಳವಣಿಗೆಯನ್ನು ಅವಲಂಬಿಸುವುದು . ಇಂತಹ ಸೂತ್ರವನ್ನು ಬಳಸಿಕೊಂಡು ಇದುವರೆಗೂ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಈ ಕ್ಷೇತ್ರದಲ್ಲಿ ತಮ್ಮ ತಮ್ಮ ನೀತಿ ರೂಪಿಸಿ ಅನುಸರಿಸಿಕೊಂಡು ಬರಲು ವಿಫಲವಾದುದೇ ಆಗಿದೆ;

೩. ಭಾರತದಲ್ಲಿ ಕೊಳಚೆಗೇರಿಗಳ ನಿರಂತರ ಅಸ್ತಿತ್ವಕ್ಕೆ ಅವುಗಳ ನಿವಾಸಿಗಳ ಸಾಮಾಜಿಕ-ಮಾನಸಿಕ ಅಥವಾ ಸಾಂಸ್ಕೃತಿಕ ಅಂಶಗಳು ಪ್ರಮುಖ ಕಾರಣಗಳು ಎಂಬುದಾಗಿ ವಿಶ್ವವಿಖ್ಯಾತ ಅರ್ಥ ವಿಜ್ಞಾನಿ ಡಾ॥ ಎಂ. ಎಚ್. ಗೋಪಾಲ್, ತಮ್ಮ "ಭಾರತದಲ್ಲಿ ಕೊಳಚೆಗೇರಿಗಳು" ಎಂಬ ಲೇಖನ ದಲ್ಲಿ ಅಭಿಪ್ರಾಯ ಪಡುತ್ತಾರೆ. ಡಾ॥ ಗೋಪಾಲ್‌ರವರ ಪ್ರಕಾರ ಈ ಅಂಶವು ಮೂರು ಹಂತಗಳಲ್ಲಿ ಕಾರ್ಯಾಚರಣೆಯಲ್ಲಿರುವುದು. ಅವುಗಳಾವುವೆಂದರೆ:

(ಅ) ಕೊಳಚೆ ಪ್ರದೇಶದ ನಿವಾಸಿಯು ತಾನು ವಾಸಿಸುವ ಪರಿಸ್ಥಿತಿಯು ಮಾನವನ ನಾಗರೀಕ ವಾಸಕ್ಕೆ ಯೋಗ್ಯರಹಿತವಾಗಿದ್ದು ಅದು ಆತನ ಉತ್ಪತ್ತಿದರ, ಸಾವು, ಆರೋಗ್ಯ, ದಕ್ಷತೆ ಮುಂತಾದವುಗಳ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಕುರಿತು ವಿವೇಚಿಸಬಲ್ಲವನಾಗಿಲ್ಲ. ಆದ್ದರಿಂದ ಆತನು ಮೂಢನಂಬಿಕೆಗಳಿಂದ ಪ್ರೇರಿತನಾಗಿ ತನ್ನ 'ವಿಧಿ' ಎಂದು ತನ್ನನ್ನೇ ಕರೆದುಕೊಳ್ಳಬಹುದು. ಇದು ಆತನ ಅಜ್ಞಾನ ದಿಂದ ಉಂಟಾದುದು;

(ಆ) ಸರ್ಕಾರ ಅಥವಾ ಇತರೇ ಯಾವುದೇ ಹೊರಗಿನ ಶಕ್ತಿಯಿಂದ ಆತನ ಭೌತಿಕ ಸಂಪತ್ತನ್ನು ವೃದ್ಧಿಸುವ ಸೌಲಭ್ಯಗಳು ದೊರಕಿದಾಗ ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿ ಕೊಂಡು ಅಭಿವೃದ್ಧಿಯೆಡೆಗೆ ಸಾಗಬಹುದಾದ ಪರಿಸ್ಥಿತಿಯಲ್ಲಿ ಬದಲಾವಣೆಗೆ ಆತನು ವ್ಯಕ್ತಪಡಿಸುವ ಪ್ರತಿರೋಧ. ಈ ಬಗೆಯ ನಡವಳಿಕೆಯನ್ನು ವೈಯಕ್ತಿಕ ಔದಾಸೀನ್ಯ ಮತ್ತು ಸಾರ್ವಜನಿಕ ಅವಲಂಬನೆ ಅಭ್ಯಾಸ ಎಂದು ಕರೆಯಬಹುದು;

(ಇ) ಕೊಳಚೆಗೇರಿ ನಿವಾಸಿಗಳು ತಮ್ಮ ಪ್ರದೇಶಗಳ ಸಾರ್ವತ್ರಿಕ ಸಮಸ್ಯೆಗಳ ನಿವಾರಣೆಗಾಗಿ ಸಾಮೂಹಿಕವಾಗಿ ಪ್ರಯತ್ನಿಸುವುದಕ್ಕೂ ಅಥವಾ ಸಹಕರಿಸುವುದಕ್ಕೂ ಸಿದ್ಧವಿರು ವುದಿಲ್ಲ. ಇದು ತಪ್ಪುಗ್ರಹಿಕೆಯಿಂದ ಕೂಡಿದ ಸ್ವ-ಹಿತ ಮತ್ತು ಪರಸ್ಪರ ಅಪನಂಬಿಕೆಯದಾಗಿರುತ್ತದೆ.[3]

ಆದ್ದರಿಂದ ಕೊಳಚೆ ನಿವಾಸಿಗಳು ತಮ್ಮ ಅಭ್ಯುದಯದ ಹಾದಿಯನ್ನು ತಾವೇ ಕಂಡುಕೊಳ್ಳಬೇಕು. ಅದಕ್ಕಾಗಿ ಕೊಳಚೆ ನಿವಾಸಿಗಳ ರೂಢಿಗತ ಮನೋಬಲ, ಚಿಂತನಶೀಲತೆ ಮುಂತಾದವುಗಳಲ್ಲಿ ಮಹತ್ವದ ಬದಲಾವಣೆಗಳನ್ನುಂಟುಮಾಡಬೇಕು. ಎಂಬುದಾಗಿ ಡಾ॥ ಗೋಪಾಲ್ ಅಭಿಪ್ರಾಯಪಡುವರು.

ಪರಿಹಾರಗಳು

ಈ ಹಿನ್ನೆಲೆಯಲ್ಲಿ ಕೊಳಚೆಗೇರಿಗಳ ಪರಿಸರ ಉತ್ತಮಪಡಿಸುವಿಕೆ ಮತ್ತು ಅವುಗಳನ್ನು ವ್ಯವಸ್ಥಿತವಾಗಿ ನಿವಾರಿಸಲು ಹಲವು ಅನುಸರಣಯೋಗ್ಯ ಸಲಹೆಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ಈ ಕೆಳಕಂಡಂತೆ ವಿವರಿಸಬಹುದಾಗಿದೆ.

೧. ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆಗಳ ವಿಕೇಂದ್ರೀಕರಣ ನೀತಿಯ ಕಟ್ಟುನಿಟ್ಟಾದ ಅನುಸರಣೆ.

೨. ನಗರಪ್ರದೇಶಗಳಲ್ಲಿ ದಿಢೀರನೆ ಪ್ರತ್ಯಕ್ಷವಾಗುವ ಕೊಳಚೆ ಕೊಂಪೆಗಳ ಬಗೆಗೆ ನಿಷ್ಠುರವಾದ ಕಾನೂನು ಕ್ರಮದ ಅನುಸರಣೆ.

೩. ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳ ಸಮಾನ ವಿತರಣೆ ಮತ್ತು ಉದ್ಯೋಗಾವಕಾಶ ಗಳ ಶೀಘ್ರತಮ ಸೃಜನೆ—ಇಂದಿನ ಗ್ರಾಮೀಣ ಅರ್ಥವ್ಯವಸ್ಥೆಯ ಅಗತ್ಯವಾಗಿದೆ. ಇದಕ್ಕಾಗಿ ಅಗತ್ಯವಾದ ಪ್ರದೇಶ ಯೋಜನೆ, ಆಡಳಿತಾತ್ಮಕ ವ್ಯವಸ್ಥೆಯ ವಿಕೇಂದ್ರೀ ಕರಣ, ಭೂಸುಧಾರಣೆ ಮತ್ತು ಇತರೇ ಕೃಷಿ ಚಟುವಟಿಕೆಗಳ ಗಣನೀಯ ಅಭಿವೃದ್ಧಿಗೆ ಆದ್ಯತೆ ನೀಡುವಿಕೆ.

ಈ ಉದ್ದೇಶಗಳನ್ನು ಹೊಂದಿದ ಅಭಿವೃದ್ಧಿ ಕಾರ್ಯಗಳ ಯಶಸ್ವಿ ಅನುಸರಣೆಯು ಗ್ರಾಮೀಣ ಅರ್ಥವ್ಯವಸ್ಥೆಯನ್ನು ಸಮಗ್ರವಾಗಿ ಬದಲಾವಣೆಗೊಳಪಡಿಸುವುದು. ಇವುಗಳಿಂದ ಗ್ರಾಮೀಣ ಉದ್ಯೋಗ, ಆದಾಯ ಮತ್ತು ಅನುಭೋಗಗಳಲ್ಲಿ ಏರಿಕೆಯುಂಟಾಗಿ ಅಲ್ಲಿನ ಬಹುಸಂಖ್ಯಾತ ದುರ್ಬಲವರ್ಗದವರು ನಗರಾಭಿಮುಖವಾಗಿ ವಲಸೆ ಹೋಗುವುದು ನಿಲ್ಲುತ್ತದೆ. ಹಳ್ಳಿಗಳಿಂದ ನಗರಾಭಿಮುಖಿ ವಲಸೆಯು ಇಳಿಮುಖ ಮತ್ತು ನಿಲುಗಡೆಯಾದಂತೆಲ್ಲಾ ನಗರಗಳ ಮೇಲಿನ ಒತ್ತಡ ಕಡಿಮೆಯಾಗುವುದು. ಏಕೆಂದರೆ ಇಂದು ನಗರಗಳಿಗೆ ವಲಸೆ ಬರುತ್ತಿರುವವರಲ್ಲಿ ಬಹುತೇಕ ಮಂದಿ ಅನಕ್ಷರಸ್ಥ, ಕುಶಲತೆರಹಿತ, ಅನುಪಯುಕ್ತ ಅನುತ್ಪಾದಕರಾಗಿರುತ್ತಾರೆ. ಇವರುಗಳು ನಗರಗಳಿಗೆ ತನ್ಮೂಲಕ ಅರ್ಥಿಕತೆಗೆ ಸಾಮಾಜಿಕ ಮತ್ತು ಆರ್ಥಿಕ ಭಾರ [social and economic burden] ಆಗಿರುತ್ತಾರೆ. ಇದಕ್ಕಾಗಿ ಸೂಕ್ತವಾಗಿ "ಸಮನ್ವಯಗೊಂಡ ಸಮಗ್ರ ಗ್ರಾಮೀಣ-ನಗರ ಅಭಿವೃದ್ಧಿ ನೀತಿಯ ನಿರೂಪಣೆ ಮತ್ತು ಅನುಸರಣೆ"4 ಇಂದು ಅಗತ್ಯ.

೪. ಇಂದಿನ ನಗರ ಪ್ರದೇಶಗಳಲ್ಲಿ ಇದುವರೆಗೂ "ಕನಿಷ್ಠ ಅಗತ್ಯ" ಸೌಲಭ್ಯಗಳನ್ನೂ ಅನುಭವಿಸದ ಸುಮಾರು ೧೩ ಮಿಲಿಯನ್ ಕೊಳಚೆ ನಿವಾಸಿಗಳ ಬದುಕನ್ನು ಮತ್ತು ಅವರು ಜೀವಿಸುವ ಪರಿಸರವನ್ನು ಹಸನುಗೊಳಿಸುವ ಸಲುವಾಗಿ ಹೆಚ್ಚು ಸಂಪನ್ಮೂಲಗಳ ನಿಯುಕ್ತಗೊಳಿಸುವಿಕೆ ಮತ್ತು ವಿನಿಯೋಗ ಅಗತ್ಯವಿದೆ. ಅಂತೆಯೇ ಉದ್ಯೋಗ ಕಾರ್ಯಾಚರಣೆಯ ಕ್ಷೇತ್ರವನ್ನು ಈ ದಿಸೆಯಲ್ಲಿ ವಿಸ್ತೃತಗೊಳಿಸುವಿಕೆ ಸಹ ಅಗತ್ಯವಿದೆ.

೫. ದೇಶದ ಸಣ್ಣ ಮತ್ತು ಮಧ್ಯಮ ದರ್ಜೆ ಅಥವಾ ಪ್ರಮಾಣದ ಪಟ್ಟಣಗಳ ಬೆಳವಣಿಗೆಯನ್ನು ಸಣ್ಣ ಮತ್ತು ಮಧ್ಯಮ ಪ್ರಮಾಣದ ಅನುಭೋಗಿ ಮತ್ತು ಉತ್ಪಾದನಾ ಅವಲಂಬಿತ ಜೋಡಣೆಯಿಂದ ನಿಗದಿಪಡಿಸಿದ ಬಂಡವಾಳ ಸರಕುಗಳನ್ನು ಉತ್ಪಾದಿಸಬಹುದಾದ ಕೈಗಾರಿಕಾ ಘಟಕಗಳ ಸ್ಥಾಪನೀಕರಣ ಹಾಗೂ ಕೃಷಿ ಉತ್ಪನ್ನ ಸಂಸ್ಕರಣ ಘಟಕಗಳ ಸ್ಥಾಪನೆ ಮೂಲಕ ಉತ್ತೇಜಿಸಬಹುದಾಗಿದೆ. ಪರಿಣಾಮವಾಗಿ ಇವುಗಳು ನೂತನ ಕೈಗಾರಿಕಾ ನಗರಗಳಾಗಿ ಅಥವಾ ಪಟ್ಟಣಗಳಾಗಿ ಅಭಿವೃದ್ಧಿಗೊಳ್ಳುವುವು.

೬. ಭಾರತೀಯ ಅರ್ಥಿಕತೆಗೆ ಸೂಕ್ತವಾದ ಬಗೆಯ ನಗರ ಯೋಜನಾ ಪದ್ಧತಿಯ ಅನುಸರಣೆ ಹಾಗೂ ಇಂದು ನಗರ ಅಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟಿರುವ ಸಂಸ್ಥೆ ಮತ್ತು ನಿಗಮಗಳ ಕಾರ್ಯಾಚರಣೆಯನ್ನು ದಕ್ಷವಾಗಿ ರೂಪಿಸುವುದು. ಈ ಎಲ್ಲಾ ಸಂಸ್ಥೆ ಮತ್ತು ನಿಗಮಗಳ ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸಿ ಅಗತ್ಯಕ್ಕನುಗುಣವಾಗಿ ನಿರ್ದೇಶಿಸುವುದು ಅವಶ್ಯಕ.

೭. ಯಾವುದೇ ನಗರಾಭಿವೃದ್ಧಿ ಕಾರ್ಯಕ್ರಮದಲ್ಲಿ ಮಾನವಸಂಪನ್ಮೂಲ ಬೆಳವಣಿಗೆ, ಬಳಕೆಗೆ ಪ್ರಧಾನ ಆದ್ಯತೆ ಇರುವುದು ಅವಶ್ಯ. ಈ ದಿಸೆಯಲ್ಲಿ ಮಾನವಸಂಪನ್ಮೂಲ ಬೆಳವಣಿಗೆ ದರ, ಸ್ವರೂಪಗಳನ್ನು ಅಗತ್ಯಕ್ಕನುಗುಣವಾಗಿ ಯೋಜಿಸಿ ಬಳಸಬೇಕು.

೮. ಕೊಳಚೆ ಪ್ರದೇಶಗಳ ಜನತೆಯು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪ್ರತ್ಯಕ್ಷವಾಗಿ ಪಾಲುಗೊಳ್ಳುವಂತೆ ಪ್ರೇರೇಪಿಸುವುದು ಇಂದಿನ ಅಗತ್ಯ. ಇದಕ್ಕೆ ಕೊಳಚೆ ಪ್ರದೇಶದ ನಿವಾಸಿಗಳಲ್ಲಿ ಇಂದು ಅಸ್ತಿತ್ವದಲ್ಲಿರುವ ವೃತ್ತಿ ಕೌಶಲ್ಯ ಮತ್ತು ಉದ್ಯಮಶೀಲತೆ ಅಂಶಗಳನ್ನು ಪತ್ತೆಹಚ್ಚಿ ಸ್ವ-ಉದ್ಯೋಗವನ್ನು ಹೊಂದುವಂತೆ ಮಾಡಬೇಕು. ಈ ದಿಸೆಯಲ್ಲಿ ಸಾಂಸ್ಥಿಕವಾಗಿ ಲಭಿಸುವ ಅನುಕೂಲತೆಗಳನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಈ ಕಾರ್ಯವನ್ನು ಸರ್ಕಾರದ ಸಾಮಾಜಿಕ ಯೋಗಕ್ಷೇಮ ಇಲಾಖೆ, ಪ್ರಚಾರ ಮತ್ತು ವಿಷಯ ಸೂಚಿ ಇಲಾಖೆ, ಮತ್ತು ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರದ

ಶಿಕ್ಷಣ ಸಂಸ್ಥೆಗಳು, ಸ್ವಯಂಪ್ರೇರಿತ ಸಂಸ್ಥೆಗಳಾದ ನಗರ ನಾಗರಿಕರ ಸಂಘ, ಅನುಭೋಗಿ ಸಂಘ, ಲಯನ್ಸ್, ರೋಟರಿ ಮುಂತಾದ ಸಂಸ್ಥೆಗಳು ಸಮಾಜಕಾರ್ಯವೆಂಬ ದೃಷ್ಟಿಯಿಂದ ಕೈಕೊಳ್ಳುವುದು ಸೂಕ್ತ.

ಈ ಹಲವಾರು ಅಂಶಗಳನ್ನು ಒಳಗೊಂಡ ನಗರೀಕರಣ ನೀತಿಯ ಅನುಸರಣೆಯು ವ್ಯವಸ್ಥಿತ ಯೋಜನಾಬದ್ಧವಾದ ರೀತಿಯಲ್ಲಿ ನಗರಗಳ ಬೆಳವಣಿಗೆಗೆ ಅವಕಾಶ ಕಲ್ಪಿಸುತ್ತದೆ. ಆಗ ಮಾತ್ರ ನಗರೀಕರಣ ಆರ್ಥಿಕಾಭಿವೃದ್ಧಿಗೆ ಪೂರಕವಾಗುವುದು. ಆದ್ದರಿಂದ ಸಮಗ್ರ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಪ್ರೇರಿತ ಆರ್ಥಿಕಾಭಿವೃದ್ಧಿ ನೀತಿಯ ನಿರೂಪಣೆ ಮತ್ತು ಯಶಸ್ವೀ ಅನುಷ್ಠಾನ ಇಂದಿನ ಅಗತ್ಯಗಳಾಗಿವೆ.

ಗ್ರಂಥ ಋಣ

1. **Five Year Plan–Draft–1978-83**
   Govt. of India : Planning Commission ; New Delhi.

2 **Karnataka** : **1972-1977** : Govt. of Karnataka, Bangalore.

3. **Indian Economic Development and Policy (ed.)** P. R. Brahmananda & et all ; **Slums in India** by Dr M. H. Gopal.

4. Thackersey ; **India's Urban Policy** ; University of Mysore, Mysore.

ಬಿಳಿ ಮನುಷ್ಯನ ಪಟ್ಟಣಗಳಲ್ಲಿ ಶಾಂತ ಪ್ರದೇಶವೇ ಇಲ್ಲ. ವಸಂತ ಮಾರುತದಿಂದ ತೊನೆಯುವ ಎಲೆಗಳ ನಿನಾದ ಅಲ್ಲಿಲ್ಲ. ಜೀರುಂಡೆಗಳ ರೆಕ್ಕೆ ಅದಿರಿಕೆಯ ಸೊಲ್ಲು ಅಲ್ಲಿಲ್ಲ. ಆದರೆ ನಾನೊಬ್ಬ ಅನಾಗರಿಕ. ನನಗೆ ತಿಳಿಯಲಾರದೋ ಏನೋ. ನಗರದ ಹರಟೆ ನನ್ನ ಕಿವಿಗಳನ್ನು ಇರಿಯುತ್ತದೆ. ಕೋಗಿಲೆಯ ಕುಹು ಕುಹೂರವವನ್ನಾಗಲಿ ರಾತ್ರಿ ವೇಳೆ ಕೊಳದ ಸುತ್ತ ನೆರೆದು ಆಖಂಡ ಸಂವಾದದಲ್ಲಿ ಲೀನವಾಗಿರುವ ಮಂಡೂಕಗಳ ಟ್ರೊಂಯ್ ಟ್ರೊಂಯ್ ನಾದವನ್ನಾಗಲಿ ಆಲಿಸಲಾಗದಿದ್ದರೆ ಬದುಕಿನಲ್ಲಿ ಉಳಿದುದೇನು ? ನಡು ಹಗಲ ಮಳೆಯಿಂದ ತೊಳೆದ ಇಲ್ಲವೇ ಸುರಹೊನ್ನೆಯ ಕಂಪನ್ನು ಧರಿಸಿದ ತಂಗಾಳಿಯ ಮೆಲು ಬೀಸು ಕೆಲವು ಮನುಷ್ಯನಿಗೆ ಬಲು ತಂಪು. ಪಕ್ಷಿಗಳ ಕಲರವ ಕೆಲವು ಮನುಷ್ಯನಿಗೆ ಬಲು ಇಂಪು. ಈತನಿಗೆ ವಾಯು ಅತ್ಯಮೂಲ್ಯವಾದದ್ದು. ಏಕೆಂದರೆ ಇದೇ ಸರ್ವರಿಗೂ--ಪ್ರಾಣಿಗಳನ್ನೂ ಸಸ್ಯಗಳನ್ನೂ ಒಳಗೊಂಡಂತೆ—ಜೀವದಾಯಕ ಉಸಿರು. ತಾನು ಶ್ವಸನಿಸುವ ವಾಯುವನ್ನು ಬಿಳಿ ಮನುಷ್ಯ ಗಮನಿಸಿರುವಂತೆ ತೋರುವುದಿಲ್ಲ. ನವೆದು ನವೆದು ಸಾಯುತ್ತಿರುವ ರೋಗಿಯಂತೆ ಆವನು ಪರಿಮಳಕ್ಕೆ ಮರವಟ್ಟಿದ್ದಾನೆ. ಪ್ರಾಣಿಸಂಗ ಇಲ್ಲದಂಥ ಮಾನವನ ಬದುಕು ಬದುಕೇ ? ವನ್ಯಪ್ರಾಣಿಗಳೆಲ್ಲವೂ ನಿರ್ನಾಮವಾಗಿ ಹೋದುವೋ ಮಾನವ ಧೃತಿಗುಂದಿದವನಾಗಿ ಏಕಾಂಗಿಯಾಗಿ ಸತ್ತ್ವ ಕಳೆದುಕೊಂಡವನಾಗಿ ನಶಿಸಿಯೇ ಹೋಗುವುದು ನಿಚ್ಚಳ ಸತ್ಯ. ಏಕೆಂದರೆ ಪ್ರಾಣಿಗಳಿಗೆ ಇಂದು ಯಾವ ಗತಿ ಒದಗುವುದೋ ಅದು ಮಾನವನಿಗೆ ನಾಳೆ ಒದಗುವುದು ನಿಸರ್ಗನಿಯಮ.

---ಅಮೇರಿಕದ ರೆಡ್ ಇಂಡಿಯನ್ ನಾಯಕ ಸಿಯಾತಲ್ ಎಂಬಾತ ಆ ರಾಷ್ಟ್ರದ ಅಧ್ಯಕ್ಷರಿಗೆ ಬರೆದ (1855) ಕಾಗದದಿಂದ ಉದ್ಧೃತ.

(ಮೂಲ : "ಭವಿಷ್ಯ ವಿಜ್ಞಾನ" (1981), ಜಿ. ಟಿ. ನಾರಾಯಣರಾವ್)

ಮೂಲ : ಜಡ್. ಎ. ದೇಸಾಯಿ
ಅನು : ಸಿ. ಜಿ. ಪುರುಷೋತ್ತಮ

ಕನ್ನಡ ನಾಡಿನ ಅರಬ್ಬೀ ಮತ್ತು ಫಾರ್ಸೀ ಶಾಸನಗಳು

ಕನ್ನಡ ನಾಡಿನಲ್ಲಿ ಅರಬ್ಬೀ ಮತ್ತು ಫಾರ್ಸೀ ಶಾಸನಗಳು ಕ್ರಿ. ಶ. ಹದಿನಾಲ್ಕನೆಯ ಶತಮಾನದಿಂದ ಅಂದರೆ ಅಲ್ಲಾವುದ್ದೀನ್ ಕಾಲ ಮತ್ತು ಅಲ್ಲಿಂದೀಚೆಗೆ ಕಂಡುಬರುತ್ತವೆ. ಬಿಜಾಪುರ ಜಿಲ್ಲೆಯ ರಕ್ಕಸಗಿಯಲ್ಲಿ ದೊರೆತಿರುವ ಕ್ರಿ. ಶ. ೧೩೧೫ರ ಅಲ್ಲಾವುದ್ದೀನನ ಶಾಸನವೇ ಈವರೆಗೆ ದೊರೆತಿರುವ ಅತ್ಯಂತ ಪ್ರಾಚೀನ ಶಾಸನ.[1] ಈ ಪ್ರಾಂತದಲ್ಲಿ ಅಥವಾ ಇದರ ಸ್ವಲ್ಪಭಾಗದಲ್ಲಿ ಹೆಚ್ಚೆಂದರೆ ಅರ್ಧ ಶತಮಾನದಷ್ಟು ಕಾಲ ರಾಜ್ಯವಾಳಿದ ಖಿಲ್ಜಿ ಮತ್ತು ತುಘಲಕ್ ವಂಶಗಳ ಕೆಲವೇ ಶಾಸನಗಳಿಗೆ ಹೋಲಿಸಿದರೆ, ಬಹಮನೀ ವಂಶದವರ ಹಾಗೂ ಬಹಮನೀ ರಾಜ್ಯದ ಉತ್ತರಾಧಿಕಾರಿಗಳಾದ ಅದಿಲ್‌ಷಾಹಿ, ಬರೀದ್ ಷಾಹಿ ಮತ್ತು ನಿಜಾಮ್‌ಷಾಹಿ ವಂಶಗಳ ಶಾಸನಗಳು ಹೆಚ್ಚಾಗಿವೆ. ವಾಸ್ತವವಾಗಿ ಅದಿಲ್‌ಷಾಹಿ ವಂಶದ ಶಾಸನಗಳು ಒಟ್ಟು ಶಾಸನಗಳ ಸುಮಾರು ಕಾಲು ಭಾಗಕ್ಕಿಂತಲೂ ಜಾಸ್ತಿಯಿವೆ.

ಹದಿನಾಲ್ಕನೇ ಶತಮಾನದಲ್ಲಿ ಬಹಮನಿ ವಂಶದ ಹಿಂದಿನವರಿಗೆ ಸೇರಿದ ಶಾಸನಗಳು ಕೇವಲ ಏಳು. ಇವುಗಳಲ್ಲಿ ಎಲ್ಲದಕ್ಕಿಂತ ಪ್ರಾಚೀನವಾದುದನ್ನು ಮೇಲೆ ಸೂಚಿಸಲಾಗಿದೆ. ಬಿಜಾಪುರದಲ್ಲಿ ದೊರೆತ ಒಂದು ಕುತ್‌ಬುದ್-ದೀನ್ ಮುಬಾರಕ್ ಷಾ ಖಿಲ್ಜಿಯ ಕಾಲಕ್ಕೆ ಸೇರಿದುದು. ಬೀದರ್ ಜಿಲ್ಲೆಯ ಕಲ್ಯಾಣಿಯಲ್ಲಿ ದೊರೆತ ಒಂದು ಶಾಸನವು ಘಿಯಾಸ ಉದ್-ದೀನ್ ತುಘಲಕ್ ಷಹನ ಕಾಲಕ್ಕೆ ಸೇರಿದುದು. ಉಳಿದ ನಾಲ್ಕರಲ್ಲಿ ಗೋಗಿ ಮತ್ತು ಬೀದರ್‌ನಲ್ಲಿ ಒಂದೊಂದೂ. ಕಲ್ಯಾಣಿಯಲ್ಲಿ ಎರಡೂ ದೊರಕಿವೆ. ಇವುಗಳು ತುಘಲಕ್ ಷಹನ ಮಗನೂ ಉತ್ತರಾಧಿಕಾರಿಯೂ ಆದ ಮುಹಮ್ಮದ್ ಷಹನ ಕಾಲಕ್ಕೆ ಸೇರಿದುವು.

ಇವಾದಮೇಲೆ ಹದಿನಾಲ್ಕನೇ ಶತಮಾನಕ್ಕೆ ಸೇರಿದಂತೆ ಉಳಿದ ಸುಮಾರು ಇಪ್ಪತ್ತಕ್ಕೂ ಮಿಕ್ಕ ಶಾಸನಗಳು. ಹದಿನೈದನೇ ಶತಮಾನದ ಮೂವತ್ತು. ಹದಿನಾರನೇ ಶತಮಾನದ ಸುಮಾರು ಒಂದುನೂರ ಐವತ್ತು. ಹದಿನೇಳನೇ ಶಶಮಾನದ ಎಪ್ಪತ್ತೇಳು. ಹದಿನೆಂಟನೇ ಶತಮಾನದ ಅರವತ್ತು ಮತ್ತು ಹತ್ತೊಂಬತ್ತನೇ ಶತಮಾನದ ಎಪ್ಪತ್ತೈದು ಶಾಸನಗಳು ಲಭ್ಯವಾಗಿವೆ. ಇದರ ಜೊತೆಗೆ ಕಾಲವನ್ನು ಸೂಚಿಸದ ಅಥವಾ ಚಾರಿತ್ರಿಕ ಅಂಶಗಳಿಲ್ಲದ ಇತರ ಕೆಲವು ಶಾಸನಗಳೂ ಸೇರಿದರೆ ಒಟ್ಟು ಸುಮಾರು ಎಂಟು ನೂರು ಶಾಸನಗಳಾಗುತ್ತವೆ. ಈ ಮೊತ್ತವನ್ನು ಪರಿಗಣಿಸಿದರೆ ಮೊಘಲರ ಶಾಸನಗಳು ಬಹಳಿಲ್ಲ. ಹದಿನೆಂಟನೆಯ ಶತಮಾನದ ಕೊನೆಯಭಾಗ ಮತ್ತು ಹತ್ತೊಂಬತ್ತನೆಯ ಶತಮಾನದಿಂದ ಇತ್ತೀಚಿನ ಹೈದರಾಬಾದು. ಮೈಸೂರು. ಸವಣೂರು ಮತ್ತು ಕಲ್ಯಾಣಿಯ ವಂಶಗಳ ಶಾಸನಗಳು ದೊರಕುತ್ತವೆ. ಜಿಲ್ಲಾವಾರು ಪರಿಗಣಿಸಿದರೆ ಇವುಗಳಲ್ಲಿ ಹೆಚ್ಚಿನವು ಬೀದರ್. ಬಿಜಾಪುರ, ಧಾರವಾಡ, ಕಲ್‌ಬುರ್ಗಿ ಮತ್ತು ರಾಯಚೂರು ಜಿಲ್ಲೆಗಳಲ್ಲೂ ಇನ್ನು ಕೆಲವು ಬೆಂಗಳೂರು, ಬೆಳಗಾವಿ, ಹಾಸನ ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲೂ ಇವೆ.

ಬಹಳಮಟ್ಟಿಗೆ ಈ ಶಾಸನಗಳೆಲ್ಲವೂ ಮಸೀತಿ, ಗೋರಿ ಮುಂತಾದ ಧಾರ್ಮಿಕ ಕಟ್ಟಡಗಳು, ಕೋಟೆ, ಹೆಬ್ಬಾಗಿಲು, ಅರಮನೆ, ಕಣಜ ಮುಂತಾದ ಧಾರ್ಮಿಕೇತರ ಕಟ್ಟಡಗಳು ಹಾಗೂ ಕೆರೆ, ಬಾವಿ, ಕಲ್ಯಾಣಿ, ಹೊಂಡ, ಉದ್ಯಾನವನ, ಅಣೆಕಟ್ಟೆ, ಪರಿ ,ಮುಸಾಫರ್‌ಖಾನೆ, ರಸ್ತೆ, ದುರ್ಗದದಾರಿ ಮುಂತಾದ ಲೋಕೋಪಯೋಗಿ ವಸ್ತುಗಳನ್ನು ಕಟ್ಟಿಸಿದ ಸ್ಮಾರಕ-ಲೇಖಗಳಾಗಿವೆ. ಪ್ರಾಚೀನ ಭಾರತದಲ್ಲಿದ್ದಂತೆ ದಾನಪತ್ರಗಳನ್ನು ಬಿಟ್ಟಿದ್ದನ್ನು ಇತರರಿಗೆ ತಿಳಿಸಬೇಕೆಂಬ ಉದ್ದೇಶ ಅವುಗಳಿಗಿರಲಿಲ್ಲ. ಇದಕ್ಕಾಗಿ ಫರ್‌ಮಾನ್ ಮತ್ತು ಸನ್ನದುಗಳನ್ನು ಕಾಗದದಮೇಲೆ ಬರೆಸಲಾಗುತ್ತಿತ್ತು. ಆದರೂ ಸಹ ರಾಜಶಾಸನವನ್ನು ತಿಳಿಸತಕ್ಕ ಕೆಲವು ಲೇಖಗಳು ನಮಗೆ ದೊರಕುತ್ತವೆ. ತೆರಿಗೆ ಅಥವಾ ದಂಡದ ವಿನಾಯಿತಿ, ಅಪರಾಧಗಳ ಅಥವಾ ಅನ್ಯಾಯಗಳ ದುರುಸ್ತಿ, ಪ್ರಾರ್ಥನೆ ಅಥವಾ ನಮಾಜು ಮಾಡ ತಕ್ಕ ಸ್ಥಳಗಳ ದೈನಂದಿನ ಶುಚಿ ಮತ್ತು ನಿರ್ವಹಣೆ ಇತ್ಯಾದಿಗಳನ್ನು ಸೂಚಿಸತಕ್ಕ ಶಾಸನಗಳೂ ಸ್ವಲ್ಪ ಮಟ್ಟಿಗೆ ಇವೆ. ಸ್ಥಳೀಯ ಆಸ್ತಿಪಾಸ್ತಿಗಳ ಅಳತೆ ಅಥವಾ ಎಲ್ಲೆಕಟ್ಟುಗಳನ್ನು ಕೆಲವು ಶಾಸನಗಳು ತಿಳಿಸಿ ದರೆ, ಬಹಮನೀ ರಾಜ್ಯದ ಎಲ್ಲೆಕಟ್ಟು ಈ ದಿಕ್ಕಿನಲ್ಲಿ ಈತನಕ ಇತ್ತು ಎಂದು ಘೋಷಿಸುವ ಒಂದು ಶಾಸನವೂ ಇದೆ.

ಒಟ್ಟಿನಲ್ಲಿ ಹೇಳುವುದಾದರೆ, ಸಮಕಾಲೀನವೂ, ಬಹುಮಟ್ಟಿಗೆ ಪ್ರಾಮಾಣಿಕವೂ ಆಗಿರುವುದ ರಿಂದ ಈ ಭಾಗದ ಐತಿಹಾಸಿಕ ಅಧ್ಯಯನಕ್ಕೆ ಈ ಲೇಖಗಳು ನಿಖರವಾದ, ಅತ್ಯಮೂಲ್ಯವಾದ ಪ್ರತ್ಯೇಕ ಹಾಗೂ ಸಾಂದರ್ಭಿಕ ಮೂಲ ಆಕರಗಳಾಗಿ ಬಹುಮುಖ್ಯವಾಗಿವೆಯೆಂಬುದನ್ನಿಲ್ಲಿ ಉತ್ಪ್ರೇಕ್ಷಿಸಿ ಹೇಳ ಬೇಕಾಗಿಲ್ಲ. ಒಂದು ಗೊತ್ತಾದ ವಂಶ ಅಥವಾ ಕಾಲದಲ್ಲಿ ಒಂದು ನಿರ್ದಿಷ್ಟ ಪ್ರದೇಶದ ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಬಗೆಗೆ ಈ ಲೇಖಗಳು ನಿಷ್ಕೃಷ್ಟವಾದ ಸಾಕ್ಷ್ಯಗಳನ್ನೊದಗಿಸುತ್ತವೆ. ಉದಾಹರಣೆಗೆ ರಾಯಚೂರು ದ್ವಿಜಲ (ದೋಆಬ್) ಪ್ರದೇಶ ಅಥವಾ ಕೊಂಕಣ ತೀರಪ್ರದೇಶಕ್ಕೆ ಲಗತ್ತಾಗಿರುವ ಕರ್ಣಾಟಕದ ಭಾಗ. ಈ ಪ್ರದೇಶಗಳು—ಬಹಮನೀ ವಂಶದ ಸುಲ್ತಾನರು ಅಥವಾ ಉತ್ತರಾಧಿಕಾರಿಗಳು ಒಂದುಕಡೆ ಹಾಗೂ ವಿಜಯನಗರದ ರಾಜರು ಮತ್ತೊಂದುಕಡೆ ಇವರ ಮಧ್ಯೆ —ಹಸ್ತಾಂತರವಾಗುತ್ತಲೇ ಬಂದ ವಿಚಾರಕ್ಕೆ ಈ ಶಾಸನಗಳು ಪ್ರಾಮಾಣಿಕ ಸಾಕ್ಷ್ಯಗಳನ್ನೊದಗಿಸು ತ್ತವೆ. ಅಸಮರ್ಪಕವೂ, ಪರಸ್ಪರ ವಿರುದ್ಧವೂ, ಅಸಮಂಜಸವೂ ಏಕಪಕ್ಷೀಯವೂ ಮತ್ತು ಗೊಂದಲ ಮಯವೂ ಆದ ಇತರ ಸಾಕ್ಷ್ಯಗಳನ್ನು ಗಮನಿಸಿದಾಗ ಈ ಶಾಸನಗಳ ಮೌಲ್ಯವು ಮತ್ತಷ್ಟು ಹೆಚ್ಚುತ್ತದೆ. ಆದರೆ ಹದಿನೈದು—ಹದಿನಾರನೆಯ ಹಾಗೂ ಹದಿನೆಂಟನೆಯ ಶತಮಾನಗಳ ಆಗುಹೋಗುಗಳನ್ನು ವಿವರಿಸಹೊರಟ ಇತಿಹಾಸ ಲೇಖಕರು ಇವುಗಳ ಸಾಕ್ಷ್ಯವನ್ನು ಪರಿಗಣಿಸದಿರುವುದು ದುರದೃಷ್ಟಕರ. ಇವುಗಳು ದೊರೆತಿರುವ ಸ್ಥಳಗಳೇ ಇವುಗಳ ಸಾಕ್ಷ್ಯ ನಿದುಷ್ಟವಾದುದೆಂಬುದಕ್ಕೆ ಮತ್ತೊಂದು ಪ್ರಮಾಣ.

ಇದೂ ಅಲ್ಲದೆ, ಒಂದು ವಿಷಯಕ್ಕೆ ಅಥವಾ ಸಂದರ್ಭಕ್ಕೆ ಅನ್ವಯಿಸಿದಂತೆ, ಹೊಸ, ಇಲ್ಲವೆ ತದನುಗುಣವಾದ, ಇಲ್ಲವೇ ಪೂರಕವಾದ ವಿಷಯವನ್ನು ಒದಗಿಸತಕ್ಕ ಶಾಸನಗಳೂ ಇವೆ. ಉದಾ ಹರಣೆಗೆ ಬಿಜಾಪುರದ ಶಾಸನವೊಂದು ಕೃಷ್ಣದೇವರಾಯನು ೧೫೨೨ರ ಮಾರ್ಚಿ ಹತ್ತೊಂಬತ್ತರಂದು ಆ ಪಟ್ಟಣವನ್ನು ಮುತ್ತಿದುದು ಮತ್ತು ನಾಲ್ಕು ದಿನಗಳ ಅನಂತರ ಆ ಕೋಟೆಯಿಂದ ಹಿಮ್ಮರಳಿದು ದನ್ನು ತಿಳಿಸುತ್ತದೆ.[2] ಇದೇ ರೀತಿ, ೧೫೫೫ನೆಯ ಇಸವಿಯ ಶಾಸನವೊಂದರಿಂದ ಅದಿಲ್‌ಷಾಹಿ ಅಧಿಕಾರಿಗಳಲ್ಲೊಬ್ಬನಾದ ಐನುಲ್-ಮುಲ್ಕ್ ಎಂಬಾತನು ದಂಗೆಯೆದ್ದುದು ಮತ್ತು ಖಾನ್-ಇ-ಅಜಂ- ನೂರ್‌ಖಾನ್ ಎಂಬವನು ಅದನ್ನು ಅಡಗಿಸಿದ ವಿಚಾರವೂ ಗೊತ್ತಾಗುತ್ತದೆ. ಇದೇ ಶಾಸನವು ಅಲಿ-ಜನಾಬ್ ರಾಮರಾಜ್ ಮತ್ತು ವೆಂಕಟಾದ್ರಿ ರಾಜ್ ಇವರ ವಿಚಾರವನ್ನೂ ತಿಳಿಸುತ್ತದೆ.[3] ರಕ್ಕಸತಂಗಡಿ ಅಥವಾ ತಾಳಿಕೋಟೆಯ ಯುದ್ಧದ ಉಲ್ಲೇಖವು ಆ ಯುದ್ಧ ಜರುಗಿದ ವರ್ಷದಲ್ಲೇ ಬರೆದ ಶಾಸನವೊಂದರಲ್ಲಿ ಬರುತ್ತದೆ ಎನ್ನಲಾಗಿದೆ.[4] ಬಿಜಾಪುರದ ಅಲಿ ಅದಿಲ್ ಷಹನು ೧೫೭೪–೭೫ರಲ್ಲಿ ಬಂಕಾಪುರದ ಕೋಟೆಯನ್ನು ವಶಪಡಿಸಿಕೊಂಡ ವಿಚಾರವು ಗೊತ್ತಾಗುವುದೂ ಸಹ ಮುದಗಲ್ಲಿನ ಶಾಸನ ವೊಂದರಿಂದಲೇ.[5] ಬೀದರ್ ಜಿಲ್ಲೆಯ ಉದ್‌ಗೀರ್ ಎಂಬಲ್ಲಿಯ ಶಾಸನವೊಂದು ೧೬೧೦–೧೧ರಲ್ಲಿ

ನಿಜಾಂ ಷಾಹಿ ಅಧಿಕಾರಿಯೊಬ್ಬನು ಆ ಸ್ಥಳದಲ್ಲಿ ನಡೆದ ಯುದ್ಧದಲ್ಲಿ ಸತ್ತನೆಂಬ ವಿಚಾರವನ್ನು ತಿಳಿಸುತ್ತದೆ.[6] ಇದೇ ಸ್ಥಳದ ಮತ್ತೊಂದು ಲೇಖವು ೧೬೩೬ರ ಸೆಪ್ಟೆಂಬರ್ ಇಪ್ಪತ್ತೇಳರಲ್ಲಿ ಷಾಹ್‌ಜಹಾನನ ದಳಪತಿ ಖಾನ್-ಇ-ದೌರಾನ್ ಎಂಬಾತನು ಕೋಟೆಯ ಮೂಲೆಗಂಬವೊಂದನ್ನು ಮದ್ದಿನಿಂದ ಸಿಡಿಸಿ—ಬೇಧಿಸಿಕೋಟೆಯನ್ನು ನೆಲಸಮ ಮಾಡಿದುದನ್ನು ವರ್ಣಿಸುತ್ತದೆ.[7] ಮಹಾರಾಷ್ಟ್ರದ ಸತಾರಾ ಜಿಲ್ಲೆಯ ರಹಮತ್‌ಪುರ ಮತ್ತು ಬಿಜಾಪುರದ ಕೆಲವು ಶಾಸನಗಳು ಆದಿಲ್ ಷಾಹಿಯ ಪ್ರಸಿದ್ಧ ದಳಪತಿಯಾಗಿದ್ದ ಅಫ಼ಜಲ್ ಖಾನ್ ಮುಹಮ್ಮದ್ ಷಾಹಿ ಎಂಬಾತನು ಕರ್ನಾಟಕದ ಅಂತೆಯೇ ಪಶ್ಚಿಮ ಕರಾವಳಿಯ (ಮಲೆನಾಡು) ಅನೇಕ ಕೋಟೆಗಳನ್ನು ಮುತ್ತಿದ ವಿಚಾರವನ್ನು ಉಲ್ಲೇಖಿಸುತ್ತವೆ. ಈ ಮುತ್ತಿಗೆಗಳೆಲ್ಲವೂ ೧೬೫೯ರ ಮುಂಚೆಯೇ ಜರುಗಿಹೋಗಿದ್ದುವು.[8] ಇಂತಹ ಅನೇಕ ಉದಾಹರಣೆಗಳನ್ನು ಕೊಟ್ಟು ವಿಷಯವನ್ನು ಲಂಬಿಸುತ್ತಾ ಹೋಗಬಹುದು.

ಹೀಗೆ ಚಾರಿತ್ರಿಕ ಸಂದರ್ಭಗಳನ್ನು, ಮುತ್ತಿಗೆ, ಆಕ್ರಮಣ ಮುಂತಾದುವುಗಳನ್ನು ಉಲ್ಲೇಖಿಸುವುದರ ಜೊತೆಗೆ ಇತಿಹಾಸಕಾರರ ಬರವಣಿಗೆಗಳಿಗೆ ಪೂರಕವಾಗಿ ಇಲ್ಲವೇ ಸಮರ್ಥನೆಯ ರೂಪದಲ್ಲೂ ಶಾಸನಗಳಿರುತ್ತವೆ. ಕೆಲವು ವೇಳೆ ಒಂದು ವಿಚಾರದಲ್ಲಿ ವಿರುದ್ಧಾಭಿಪ್ರಾಯಗಳಿರುವಾಗ ಅಥವಾ ಅದು ಗೊಂದಲಮಯವಾಗಿರುವಾಗ ಇವುಗಳ ಸಾಕ್ಷ್ಯವು ಇದಮಿತ್ಥಂ ಎಂಬ ಖಚಿತಾಭಿಪ್ರಾಯವನ್ನೂ ಒದಗಿಸುತ್ತವೆ. ಬಹಮನೀ ವಂಶದ ಸುಲ್ತಾನರು ಅಧಿಕಾರದಲ್ಲಿರುವವರೆಗೂ ಅವರು ಹೆಸರಿಗೆ ಮಾತ್ರ ಸುಲ್ತಾನರಾದಾಗ್ಯೂ ಸಹ—ಮೊದಮೊದಲು ಆದಿಲ್ ಷಾಹಿ ಸುಲ್ತಾನರು ಬಹಮನೀವಂಶದ ಪರಮಾಧಿಕಾರದ ನೊಗವನ್ನು ಕಿತ್ತೆಸೆಯಲಿಲ್ಲ ಎಂಬುದನ್ನು ನಿಚ್ಚಳವಾಗಿ ತೋರಿಸುವ ಲೇಖಗಳು ಬಿಜಾಪುರ ಮತ್ತು ರಾಯಚೂರುಗಳಲ್ಲಿ ನಮಗೆ ಸಿಕ್ಕಿವೆ. ಬಹಮನೀವಂಶದ ಕಡೆಯ ಇಬ್ಬರು ಸುಲ್ತಾನರುಗಳಾದ ವಲಿಯುಲ್ಲಾನ ಒಂದು ಶಾಸನವೂ (೧೫೨೩–೨೪) ಕಲಿಮುಲ್ಲಾನ ಒಂದು ಶಾಸನವೂ (೧೫೨೫) ಸಿಕ್ಕಿರುವುದನ್ನು ಇಲ್ಲಿ ಪ್ರಾಸಂಗಿಕವಾಗಿ ಸೂಚಿಸಬಹುದು.[9] ಮೊದಮೊದಲು ಬಿಜಾಪುರ ಸುಲ್ತಾನರು ಇಟ್ಟುಕೊಳ್ಳುತ್ತಿದ್ದ ಬಿರುದುಗಳ ವಿಚಾರವನ್ನು ಅಭ್ಯಾಸಮಾಡುವವರಿಗೆ ಈ ಶಾಸನಗಳು ಆಸಕ್ತಿ ಪ್ರದವಾಗಿವೆ.[10] ಶಾಸನಗಳ ಸಾಕ್ಷ್ಯವು ಅಂಕಿತನಾಮಗಳ ಸರಿಯಾದ ಕಾಗುಣಿತ, ಬಿರುದುಗಳ ಕೆಲವು ವೇಳೆ ವ್ಯಕ್ತಿಯ, ಸರಿಯಾದ ಹೆಸರು ಇವುಗಳನ್ನು ತೀರ್ಮಾನಿಸುವುದರಲ್ಲೂ ಸಹಕಾರಿಯಾಗಿವೆ. ಬಿಜಾಪುರ ಸುಲ್ತಾನರ ಹೆಸರುಗಳ ಕಾಗುಣಿತ ಮತ್ತು ಸವಾಯ್ ಎಂಬ ಬಿರುದಿನ ಸರಿಯಾದ ಅರ್ಥ[11] ಹಾಗೂ ಬೆಳಗಾವಿಯಲ್ಲಿ, ಆದಿಲ್‌ಷಾಹಿ ಸುಲ್ತಾನರ ಪ್ರಾಂತಾಧಿಕಾರಿಯ ಸರಿಯಾದ ಹೆಸರು ಅಸದ್ ಖಾನ್[12] ಮುಂತಾದುವುಗಳನ್ನು ಇಲ್ಲಿ ಉದಾಹರಿಸಬಹುದು.

ಆದರೆ ಈ ಶಾಸನಗಳು ಬಹುಮುಖ್ಯವಾದ ಹಾಗೂ ಮೌಲಿಕವಾದ ಆಕರಗಳಾಗಿರುವುದು ಅವುಗಳು ಸ್ಥಳೀಯ ಇತಿಹಾಸರಚನೆಗೆ ಅನಿವಾರ್ಯ ಸಾಕ್ಷ್ಯಗಳಾಗಿವೆ ಎಂಬ ವಿಚಾರದಲ್ಲಿ. ಬಿಜಾಪುರ, ಬೀದರ್ ಜಿಲ್ಲೆಯ ಕಲ್ಯಾಣಿ, ರಾಯಚೂರು, ಸಾಗರ ಮತ್ತು ಗುಲ್ಬರ್ಗಾ ಜಿಲ್ಲೆಯ ಷಾಪುರ ಮುಂತಾದ ವಿವಿಧ ಪ್ರಾಂತಗಳು ಅಥವಾ ಪಟ್ಟಣಗಳಲ್ಲಿ, ನಾನಾ ಹಂತಗಳಲ್ಲಿ ಕೆಲಸ ಮಾಡಿದ ಅಧಿಕಾರಿಗಳು ಯಾರಾದ ಮೇಲೆ ಯಾರಿದ್ದರು ಎಂಬ ಪೂರ್ವಾಪರ ಸಂಬಂಧವನ್ನು ತಿಳಿಸತಕ್ಕ ಈ ಶಾಸನಗಳಿಲ್ಲದಿದ್ದ ಪಕ್ಷಕ್ಕೆ ಮಂತ್ರಿಗಳು, ಪ್ರಾಂತಾಧಿಕಾರಿಗಳು, ದಳವಾಯಿಗಳು, ಹಾಗೂ ಸರ್ಕಾರದ ನಾನಾ ಇಲಾಖೆಗಳ ನೌಕರಷಾಹಿ ವರ್ಗದವರಲ್ಲಿ ಬಹಳ ಜನರು ಅಜ್ಞಾತರಾಗಿಯೇ ಇದ್ದುಬಿಡುತ್ತಿದ್ದರು. ಉದಾಹರಣೆಗೆ: ಖಿಲ್ಜಿ ವಂಶದ ಬಖ್ತಿಯಾರ್ ಖಾನ ಮತ್ತು ಮಾಲಿಕುಷ್-ಷರ್ಕ್ ಕರೀಮುದ್ ದೀನ್[13] ಮತ್ತು ತುಘಲಕ್ ವಂಶದ ಕಾಲದ ಆಲಿ ಜಷ್ನೇರಿಯ ಮಗ ಅಹಮದ್[14] ಇವರುಗಳ ಹೆಸರುಗಳು ನಮಗೆ ಗೊತ್ತಾಗಿರುವುದು ಶಾಸನಗಳಿಂದಲೇ. ಐತಿಹಾಸಿಕ ಗ್ರಂಥಗಳಲ್ಲಿ ಉಕ್ತರಾಗಿರುವ ಅಧಿಕಾರಿಗಳ ವಿಚಾರದಲ್ಲೂ ಸಹ ಅವರ ಜೀವನೇತಿಹಾಸ, ಕಾರ್ಯಸಾಧನೆಗಳು, ಅವರು ನೇಮಕಗೊಂಡ ಸ್ಥಳ ಮತ್ತು ವರ್ಷ ಇತ್ಯಾದಿಗಳ ವಿವರಗಳನ್ನು ಶಾಸನಗಳು ಕೊಡುತ್ತವೆ. ಬಹುಮಂದಿ ಸರದಾರರುಗಳ ಅಸ್ತಿತ್ವ ಉಳಿದುಕೊಂಡಿರುವುದಂತೂ ಶಾಸನಗಳಿಂದಲೇ ಎಂದರೆ ಉತ್ಪ್ರೇಕ್ಷೆಯ ಮಾತಾಗಲಾರದು.

ಅವರಲ್ಲಿ ಕೆಲವರನ್ನು ಇಲ್ಲಿ ಹೆಸರಿಸಬಹುದು: ತುಘಲಕರ ಕಾಲದ ಉಲುಘ್ ಕುತ್ಲುಘ್

ಮಾಲಿಕುಶ್ ಷರ್ಕ್. ಮಾಲಿಕ್ ಮಹೀನ್ ಸುಲ್ತಾನಿ ಮತ್ತು ಮಾಲಿಕುಶ್ ಷರ್ಕ್ ಕಿವಾಮುದ್ ದೀನ್, ಬಹಮನೀ ಸುಲ್ತಾನರ ಕಾಲದ ಅಮೀರ್ ಇ ತುರ್ಕಾನ್. ಷಾಹ್ ಇ ಬಾರ್. ಷಿರಾಜಿ ಜಲಾಲನ ಮಗ ರಜಬ್. ದೌಲತ್ ಷಾ ಜಬಲಿಯಾನ ಮಗ ಸಯೀಫ್. ಅಬು ಮುಹಮ್ಮದ್ ತಬ್ರೀಜಿ. ಅಜಂ ಹುಮಾಯೂನ್ ಖ್ವಾಜಾ ಜಹಾನ್. ಮಾಲಿಕುಶ್ ಷರ್ಕ್ ಅಬಾಜಿ. ಸಾಗರದ ಮಂತ್ರಿಯೂ ಕೊತ್ವಾಲನೂ ಆಗಿದ್ದ ಮಸ್ನದ್ ಇ ಅಲಿ ನಿಜಾಂ(ಉಲ್‌ಮುಲ್ಕ್) ಮುಬಾರಕ್ ಸುಲ್ತಾನಿ. ಅದೇ ಸಾಗರದ ಕೊತ್ವಾಲ ಫತ್ ಸುಲ್ತಾನಿಯ ಮಗ ಷಾಹಿಂ. ಮಾಲಿಕುಶ್ ಷರ್ಕ್ ಹೋಷಂಗ್ ತುರ್ಕ್ ನಾಯಬ್ ಇ ಸರ್‌ಪರ್‌ದಾದರ್. ದಾವೂದ್ ಕೊತ್ವಾಲ್. ಉಲಾ ಖಾನ್‌ಷಾ ಮಜ್ಮ ಇ ಮಾಮಲಿಕ್‌ನ ಮಗ ನಾಸರ್. ಮಾಲಿಕುಶ್ ಷರ್ಕ್ ಮುಹಮೂದ್ ಥಾನಾದಾರ್‌ಬೇಗ್. ಮಲ್ಲು ಖಾನ್ ಹಾಫಿಜ್. ಮಾಲಿಕುಶ್ ಷರ್ಕ್ ಹಾಜಿ ಕರ್ಮಾನಿ. ಖಾನ್ ಇ ಅಜಂ ಥಾಲಿಬ್ ಖಾನ್, ಸಯೀಫ್‌ಖಾನ್ ಬಿರುದು ಪಡೆದಿದ್ದ ಅಯಾಜ್. ಶೀಘಾಖಾನ್ ಬಿರುದಿನ ದರ್ವಿಶ್ ಹುಸೇನಿ. ದಸ್ತೂರ್ ಖಾನ್. ಮಾಲಿಕುಶ್ ಷರ್ಕ್ ಮಾಲಿಕ್ ಅಂಬರ್ ಮತ್ತು ಮಾಲಿಕ್ ಸಿಕಂದರ್ ಹೈದರಿ, ಬರೀದ್ ಷಾಹಿಗೆ ಸೇರಿದ ಮುಹಮ್ಮದ್ ಷಾ (ಖಿತತ್ ಖಾನನ ಮಗ). ಖಾನ್ ಇ ಅಜಂ ಮನ್ಸೂರ್ ಖಾನ್. ಜಗಪತಿರಾವ್ ಮತ್ತು ಖ್ವಾಜಾ ಬುಸ್ತಾನ್. ಅದಿಲ್ ಷಾಹಿಗೆ ಸೇರಿದ ಯುಘರಿಲ್ ಖಾನ್, ಬಖ್ತಿಯಾರ್ ಖಾನ್. ಖಾನ್‌ಮಾಲಿಕ್. ಅಹ್ಮದ್ ಹಾಜಿ ಗುನಬದಿ. ಮಾಲಿಕ್ ಅಮೀನ್ ಉಲ್ ಮುಲ್ಕ್. ಬಾಬಾಜಿ ನಜೀತ್ ಖಾನ್. ಹಿರಿಯ ಪೌಲಾದ್ ಖಾನ್. ಕಿರಿಯ ಪೌಲಾದ್ ಖಾನ್. ಷೇರ್ ಖಾನ್. ಮಾಲಿಕ್ ಅಬ್ದುಲ್ ಕಾದಿರ್ ಮುಹಮದ್ ಮುಸ್ತಫಾ. ಖಾನ್ ಮಾಲಿಕ್ ಸಂದಾಲ್. ಮಾಲಿಕ್ ಅಲಿ ಬೇಗ್ ಮತ್ತು ಅವನ ನಾಯಬ್ ಇ ಘೈಬರ್ ಅಮ್ರಿತ್ ಖಾನ್. ಮುಹಮ್ಮದ್ ಆಗಾ. ಇಖ್ತಿಯಾರ್‌ಖಾನ್ ಗುಜರಾತಿ. ಅರಬ್ ಖಾನ್. ತಾಹಿರ್‌ಖಾನ್. ಪಂಡಿತ್ ನಂದ್‌ಜಿ. ಖಾನ್ ಇ ಅಜಂ ಮುರಾದ್ ಖಾನ್ ಅಮೀರ್ ಇ ಜುಮ್ಲಾ. ಷಂಷೇರ್ ಉಲ್‌ಮುಲ್ಕ್. ಯೂಸುಫ್ ಅಲಿ ಕದಿರ್‌ದಾರ್. ಕಲ್ಯಾಣದಲ್ಲಿದ್ದ ಖಾನ್ ಇ ಅಜಂ ರುಸ್ತುಂ ಖಾನ್. ನಾಯಬ್ ಇ ಘೈಬರ್ ಮತ್ತು ಅವನ ಉತ್ತರಾಧಿಕಾರಿಗಳಾದ ಸಯ್ಯದ್ ಮುಹಮ್ಮದ್. ಮಾಲಿಕುಶ್ ಷರ್ಕ್ ಮಾಲಿಕ್ ಸದ್ರುದ್ ದೀನ್. ಮತ್ತು ಮಾಲಿಕುಶ್ ಷರ್ಕ್ ಮಾಲಿಕ್ ಇಸ್ಮಾಯಿಲ್. ಖಾನ್ ಇ ಅಜಂ ದಿಲ್‌ವರ್ ಖಾನ್. ಮೀರ್ ತಾಜುದ್ ದೀನ್ ಸರ್‌ಖಾಯಿಲ್. ಖುರ್ಷಿದ್ ಖಾನ್. ಕಮೀಲ್ ಖಾನ್ ಬಿರುದಿದ್ದ ಖಾನ್ ಇ ಅಜಂ ಇಬ್ರಾಹಿಂ. ಅವನ ಉಪ ಅಧಿಕಾರಿ ಮೀರ್ ಮುಹಮ್ಮದ್. ಕಿಷ್ವರ್ ಖಾನ್. ಮುಹಮ್ಮದ್ ಹೈದರ್. ದಯಾನತ್ ಖಾನ್ ನಾಯಬ್ ಇ ಘೈಬತ್ ಅಲ್ ಮುದ್ಗಲ್. ಐನುಲ್ ಮುಲ್ಕ್ ಕಿನಾನಿಯ ಅಧಿನಾಧಿಕಾರಿ ಮನ್ಸೂರ್ ಖಾನ್. ಬಿಲಾಲ್ ಮುಸ್ತಫಾ ಖಾನಿ. ಅಮೀನ್ ಖಾನ್. ನಯಾಜ್‌ಮಂದ್ ಖಾನ್. ಖಾನ್. ಇ ಅಜಂ ಇತಿಬರ್ ಖಾನ್. ಕೊಪ್ಪಳದ ಷಾಜಿ ಖಾನ್ ಸರನೌಬತ್. ಮಾಲಿಕ್ ಯಾಕುತ್. ಅಮೀನ್ ಮುಸ್ತಫಾ ಖಾನ್. ಅಲಿ ಫರ್ಹಂದ್ ಖಾನ್. ಕಲ್ಯಾಣಿಯ ಹವಾಲ್ದಾರ್ ಸಿದಿ ದಿಲಾವರ್. ಮಾಲಿಕ್ ಸುಂದರ್. ಆಗಾ ಮುಹಮ್ಮದ್. ಧಾರವಾಡದ ಕೋಟೆಯ ಹವಾಲ್ದಾರ್ ಆಗಾ ದುಲ್‌ಫಕರ್. ಖಾನ್ ಇ ಅಜಂ ಮಾಲಿಕ್ ಅಬ್ದುಲ್ ಮುಹಮ್ಮದ್. ಅವನ ಸಹೋದರ ಮಾಲಿಕ್ ಅಬ್ದುಲ್ ವಾಹಬ್. ಅಬ್ದುರ್ ಖಾನ್ ಅಬ್ದುಲ್ ಹುಸೇನ್ ಅಮೀನ್. ಯಾಕುಬ್ ಅಲಿ ಖಾನ್. ಬಂಕಾಪುರದ ಹವಾಲ್ದಾರ ಅಲಿ ರಿದಾ. ಅಫ್‌ದಲ್ ಖಾನ್ ಮುಹಮ್ಮದ್ ಷಾಹಿ. ಅಬ್ದುಲ್ ಹಮೀದ್ ಬಹಲೂಲ್ ಖಾನ್. ನೂರುಲ್ಲಾ ಸರ್‌ಖಾಯಿಲ್ ಇ ಮುಲ್ಕ್. ಸಿದಿ ಸುಂಬೂಲ್ ಸುಬೇದಾರ್. ಆಕಾ ಮಿಸ್ರಾಬ್. ಷಾಪ್ಪುರದ ಹವಾಲ್ದಾರ್ ಮುಹಮ್ಮದ್ ರಿದಾ ಇನ್ನೂ ಮುಂತಾದವರು: ಮುದಗಲ್ಲಿನ ಅಸಫ್ ಜಾಹಿಗೆ ಸೇರಿದ ಮುಖ್ತಿರ್‌ಖಾನ್ ಹುಸೇನಿ. ಜಾನ್ನಿಫರ್ ಖಾನ್. ಕಲಂದರ್ ಖಾನ್. ಬರಖುರ್‌ದಾರ್‌ಬೇಗ್ ಮುದಗಲ್ಲಿನ ರಾಜಾ ರಾಂ ಸಿಂಗ್ ಕಿಲಾದಾರ್ ಮತ್ತು ಫೌಜ್‌ದಾರ್. ಹಾಫಿಜ್ ಮಸೂದ್. ಸಿದಿ ಬಷೀರ್. ರಾಯಚೂರಿನ ಕಿಲಾದಾರ್ ಜಫರ್ ಉದ್ ದೌಲಾ. ಷೂಜಾ ಉದ್‌ದೌಲಾ. ಧುಲ್‌ಫಕರ್ ಉದ್ ದೌಲಾ. ನವ್ವಾಬ್ ಸಾದುಲ್ಲಾ ಖಾನ್ ಮುಜಫ್ಫರ್ ಜಂಗ್. ನವಾಬ್ ಮುಹಮ್ಮದ್ ಹುಸೇನ್ ಖಾನ್ ಘಟಾಲ, ಮತ್ತು ಇನ್ನೂ ಮುಂತಾದ ಮುಖ್ಯ ವ್ಯಕ್ತಿಗಳು.[15]

ಮೇಲೆ ಹೇಳಿದ ಸ್ಥಳೀಯ ಅಧಿಕಾರಿಗಳಲ್ಲದೆ ಅರಮನೆಗೆ ಇಲ್ಲವೇ ಸರದಾರರುಗಳಿಗೆ ಸಂಬಂಧಿಸಿದ್ದ ಅನೇಕರ ಹೆಸರುಗಳನ್ನು ಸಹ ಈ ಶಾಸನಗಳಲ್ಲಿ ನಾವು ನೋಡಬಹುದು. ಉದಾಹರಣೆಗೆ ಬಹಮನೀ ರಾಜಮಾತೆ ಬೇಬಿ ಷಾನಾಜ್, ಇಬ್ರಾಹಿಂ ಆದಿಲ್ ಷಹನ ರಾಣಿ ತಾಜ್‌ಸುಲ್ತಾನ್, ಕುತುಬ್ ಷಾಹಿ ರಾಜಕುಮಾರಿ ಬಡೇಸಾಹಿಬ್ (ಬಹಮನಿ ಸರದಾರ ಆಜಂ ಹುಮಾಯೂನನ ಹೆಂಡತಿ—ಬಿಜಾಪುರದಲ್ಲಿ ಈಕೆಗೆ ಮದುವೆಯಾಗಿತ್ತು). ಆದಿಲ್ ಷಾಹಿ ಸರದಾರ ಅಬ್ದುಲ್ ಮುಹಮ್ಮದ್‌ನ ಹೆಂಡತಿಯಾಗಿದ್ದ(?) ಬೇಬಿ ಹಲೇಮಾ, ಅಹಮದ್ ನಗರದ ಪ್ರಸಿದ್ಧ ಚಾಂದ್ (ಚಾಂದ್‌ಬೀಬಿ)ಸುಲ್ತಾನಳ ದಾದಿಯಾಗಿದ್ದ ಖಿನ್‌ಜ, ದುಸ್ತೂರ್‌ಖಾನನ ದಾದಿ ಹೀವಾ, ಅವನ ಉಪಾಧ್ಯಾಯಿನಿ ಬೀಬೀ ಬರ್‌ಕತಿ, ಲಕ್ಷ್ಮೇಶ್ವರದ ಅಂಕುಸ್ ಖಾನ್ (ಮನ್‌ಝೂನ್ ಖಾನ್ ಮತ್ತು ಖುಂದ್ ಮೀರ್), ಟಿಪ್ಪುಸುಲ್ತಾನನ ಕುಟುಂಬದ ವ್ಯಕ್ತಿಗಳು ಇತ್ಯಾದಿ.

ಪರ್ಷಿಯಾ ಮುಂತಾದ ಹೊರರಾಷ್ಟ್ರಗಳಿಗೆ ಸೇರಿದವರ ಸಮಾಧಿ—ಲೇಖ (ಎಪಿಟಾಫ್) ಗಳನ್ನೂ ಸಹ ಇಲ್ಲಿ ಪರಿಶೀಲಿಸಬಹುದು. ಈ ಸಮಾಧಿಲೇಖಗಳು ಸಮಾಧಿಹೊಂದಿದ ವ್ಯಕ್ತಿಯ ಹುಟ್ಟೂರು ಮುಂತಾದುವುಗಳನ್ನು ಹೆಸರಿಸುವುದರಿಂದ ಭಾರತ ಮತ್ತು ಪರ್ಷಿಯಾ ಮುಂತಾದ ದೇಶಗಳ ನಡುವೆ ಸಂಬಂಧ ಹಾಗೂ ಇತರ ವ್ಯವಹಾರಗಳ ಬಗೆಗೆ ಇವುಗಳು ಹೆಚ್ಚು ಮಾಹಿತಿಯನ್ನೀಯುತ್ತವೆ.[16] ಉದಾಹರಣೆಗೆ ಪಷ್ಟಾ ಮೈನರಿನ ಬುರ್ಸಾ ಎಂಬ ಸ್ಥಳದಿಂದ ಬಂದಿದ್ದ ವ್ಯಕ್ತಿಯೊಬ್ಬ ಫಿರೋಜಾಬಾದ್‌ನಲ್ಲಿ ಮಡಿದನು.[17] ಕ್ರಿ. ಶ. ೧೫೧೭ರಲ್ಲಿ ಇರಾನಿನ ಕಶಾನ್ ಎಂಬ ಸ್ಥಳದ ಪ್ರಸಿದ್ಧ ಯುವಕನೊಬ್ಬನು ಸಾಗರದಲ್ಲಿ ಸತ್ತನು.[18]

ಆಡಳಿತಕ್ಕೆ ಸಂಬಂಧಿಸಿದ ವಿವರಗಳು, ಆಡಳಿತದ ಅನುಕೂಲಕ್ಕೆ ತಕ್ಕಂತಹ ಪ್ರಾಂತ ವಿಂಗಡಣೆ, ಅಧಿಕಾರ ಸ್ಥಾನಗಳು, ಹುದ್ದೆಗಳು ಮುಂತಾದವುಗಳ ಬಗೆಗೆ ಈ ಶಾಸನಗಳು ಅತ್ಯುಪಯುಕ್ತವಾಗಿವೆ. ಕರ್ನಾಟಕದ ಆಡಳಿತ ಪದ್ಧತಿಯಲ್ಲಿ ಇಂದು ರೂಢಿಯಲ್ಲಿರುವ ಅನೇಕ ಹುದ್ದೆಗಳು, ಭೂ ವಿಭಾಗಗಳ ಹೆಸರುಗಳನ್ನು ನಾವು ಈ ಶಾಸನಗಳಲ್ಲಿ ಗುರುತಿಸಬಹುದಾಗಿದೆ. ತುಘಲಕ್ ಬಹಮನಿ ಮತ್ತು ಬರೀದಿ ವಂಶಗಳಿಗೆ ಸೇರಿದ ಶಾಸನಗಳಲ್ಲಿ ಇಖ್‌ಲಿಮ್ (ಪ್ರಾಂತ), ಮಾಮ್‌ಲ (ಜಿಲ್ಲೆ) ಕಸ್ಬ ಅಥವಾ ಥಾನಾ (ಊರು ಅಥವಾ ಉಪವಿಭಾಗ) ಮುಂತಾದ ಭೂ ವಿಭಾಗಗಳ ಹೆಸರುಗಳೂ, ದಿವಾನ್ ಇ ಕದಾ (ನ್ಯಾಯಾಂಗ ಇಲಾಖೆ), ನಾಯಿಬ್-ಇ-ದಿವಾನ್-ಇ-ಕದಾ (ನ್ಯಾಯಾಂಗ ಇಲಾಖೆಯ ಉಪ ಅಧಿಕಾರಿ, ಕೊತ್ವಾಲ್, ಕೊತ್ವಾಲ್-ಬೇಗ್, ಖಿತತ್‌ಖಾನ್, ಅಮೀರ್ ಇ ತುರ್ಕಸ್, ಶಾಹ್ನ-ಇ-ಬಾರ್ (ದರ್ಬಾರ್ ಭಕ್ಷಿ), ನಾಯಿಬ್-ಇ-ಸರ್‌ಪರ್‌ದಾರ್ (ಉಪ ಪ್ರಧಾನ ಕಂಚುಕಿ), ಮಜ್ಮು-ಇ-ಮಾಮಲಿಕ್, ಥಾನಾದಾರ್ ಮತ್ತು ಥಾನಾದಾರ್ ಬೇಗ್ ಮುಂತಾದ ಉಪಾಧಿನಾಮಗಳು ಬರುತ್ತವೆ. ಆದಿಲ್ ಷಾಹಿ ಲೇಖಗಳಲ್ಲಿ ದಿವಾನ್-ಇ-ಆಲಂ (ರಾಜದರ್ಬಾರ್) ನಾಯಿಬ್-ಇ-ಷಾ, ನಾಯಿಬ್-ಇ-ಘೈಬತ್, ಸರ್‌ನೌಬತ್, ಸರ್-ಇ-ಸರ್‌ನೌಬತ್, ಸುಬೇದಾರ್, ಹವಲ್ದಾರ್, ಸರ್ ಹವಲ್ದಾರ್, ಸರ್‌ಖಾಯಿಲ್, ಸರ್‌ಖಾಯಿಲ್-ಇ-ಮುಲ್ಕ್, ಸರ್‌ಖಾಯಿಲ್-ಇ-ಪಯಾಹಾ-ವ-ನಫತಿಮ, ಅಮೀರ್-ಇ-ಜುಮ್ಲಾ, ವಜೀರ್-ಇ-ಹುಕೂಮತ್, ಅಮೀರ್-ಇ-ಷಹರ್, ಸಿಪಾಹ್ ಸಾಲಾರ್, ಥಾನಾದಾರ್, ಅಮೀನ್, ಕಂದಿಲ್‌ದಾರ್, ಮಜ್ಲಿಸ್‌ದಾರ್, ದಬೀರ್, ಸರ್‌ಖಿದ್ಮಾಸ, ಅಜ್ದರ್, ಬಲೋತಿಯಾನ್, ಮಹಜನ್, ಅತಾಬೇಕ್ ಮುಂತಾದುವು ಕಂಡುಬರುತ್ತವೆ. ಮೊಘಲ್ ದಾಖಲೆಗಳಲ್ಲಿ ಫೌಜ್‌ದಾರ್, ಕಿಲಾದಾರ್ ಮುಂಬವೂ, ಟಿಪ್ಪುವಿನ ಶಾಸನಗಳಲ್ಲಿ ಸಿಪಾಹ್‌ದಾರ್, ಸರ್ ಇ-ಅಸ್ಕರ್ ಮುಂತಾದುವೂ ಬಳಕೆಯಾಗಿವೆ. ಕನ್ನಡನಾಡಿನ ನಾನಾಭಾಗಗಳಲ್ಲಿ ಈ ಮೇಲೆ ಹೇಳಿದ ಭೂ ವಿಭಾಗಗಳ ಹಾಗೂ ಹುದ್ದೆಗಳ ಹೆಸರುಗಳನ್ನು ಕಾರ್ಯಾಂಗ, ನ್ಯಾಯಾಂಗ, ಮತ್ತು ಭಾರತದ ಸೈನ್ಯದಲ್ಲಿ ಈಗಲೂ ಉಪಯೋಗಿಸುತ್ತಿರುವುದು ಸರ್ವವಿದಿತವಾಗಿದೆ.

ಕನ್ನಡನಾಡಿನ ಈ ಭಾಗದಲ್ಲಿ ಇರುವ ತೋಪು(ಫಿರಂಗಿ)ಗಳ ಮೇಲಿರುವ ಶಾಸನಗಳಲ್ಲಿ ಅವುಗಳ ತಯಾರಿಕೆ, ತಯಾರಿಸಲು ಅಪ್ಪಣೆಯಿತ್ತ ನವಾಬರು, ರವಾನಿಸಿದ ಸ್ಥಳ ಇತ್ಯಾದಿ ವಿಷಯ ತಿಳಿದುಬರು

ತ್ತದೆ. ನಿಜಾಂ ಷಾಹಿ ಮತ್ತು ಬರೀದ್ ಷಾಹಿ ಸುಲ್ತಾನರು ಆದಿಲ್ ಷಾಹಿ ಸುಲ್ತಾನರಿಗಿಂತ ಹೆಚ್ಚು ಫಿರಂಗಿಗಳನ್ನು ತಯಾರಿಸಿದಂತೆ ಕಂಡುಬರುತ್ತದೆ. ಹತ್ತೊಂಬತ್ತನೆಯ ಶತಮಾನದ ಆದಿ ಭಾಗದವರೆಗೂ ಈ ಕೈಗಾರಿಕೆಯು ಜೀವಂತವಾಗಿತ್ತೆಂಬುದು ಕಲ್ಯಾಣಿ ನವಾಬರ ಆರು ಫಿರಂಗಿಗಳ ಮೇಲಿರುವ ಲೇಖಗಳಿಂದ ತಿಳಿದುಬರುತ್ತದೆ.[19] ಕೆಲವು ತೋಪುಗಳ ಮೇಲೆ ಅವುಗಳನ್ನು ಸ್ಥಳದಿಂದ ಸ್ಥಳಕ್ಕೆ ಒಯ್ದುದು ತಿಳಿದುಬರುತ್ತದೆ. ಬುರ್ಹಾನ್‌ಪುರದ ಮುಬಾರಕ್ ಷಾ ಫರೂಕಿಯು ಎರಕ ಹೊಯ್ಸಿದ ಫಿರಂಗಿಯು ಈಗ ಕಲ್ಯಾಣಿಯಲ್ಲಿದೆ.[20] ಇದೇ ರೀತಿ ನಿಜಾಂ ಷಾಹಿ ಸುಲ್ತಾನ ಬುರ್ಹಾನ್ ನಿಜಾಂ ಷಹನು ಮಾಡಿಸಿದ ಮಾಲಿಕ್-ಇ-ಮೈದಾನ್ ಎಂಬುದು ಈಗ ಬಿಜಾಪುರದಲ್ಲಿದೆ.[21] ಬಿಜಾಪುರದ ಇಮ್ಮಡಿ ಅಲಿ ಆದಿಲ್ ಷಹನ ಮುಲ್ಕ್ ದಾಸ್ತ್ ಎಂಬ ಫಿರಂಗಿಯನ್ನು ಔರಂಗಜೇಬನು ಸತಾರಾ ಕೋಟೆಯ ಮೇಲೆ ಲಗ್ಗೆ ಹತ್ತಲು ಉಪಯೋಗಿಸಿದನು.[22] ಸುಲ್ತಾನರ ಅಥವಾ ನವಾಬರ ಅಥವಾ ಇತರ ಪ್ರಾಂತಾಧಿಕಾರಿಗಳ ಹುಕುಮುಗಳು, ರಾಯಸಗಳು ಇಲ್ಲವೇ ಪತ್ರಿಗಳ ರೂಪಿನಲ್ಲಿರುವ ಶಾಸನಗಳಲ್ಲಿ ಆಡಳಿತಕ್ಕೆ ಸಂಬಂಧಿಸಿದಂತಹ ಈ ಕೆಳಗಿನ ಪ್ರಮುಖ ಅಂಶಗಳು ಕಂಡುಬರುತ್ತವೆ. ಹೊಸ ತೆರಿಗೆಗಳನ್ನು ವಿಧಿಸುವುದು (ಇದು ಕೆಲವೇ ಸಂದರ್ಭಗಳಲ್ಲಿ ಮಾತ್ರ): ಮಾಮೂಲು ತೆರಿಗೆಯ ಅಥವಾ ದಂಡದ ವಿನಾಯಿತಿ: ಸ್ಥಳೀಯ ಅಧಿಕಾರಿಗಳು ಬಲಾತ್ಕಾರದಿಂದ ಆಚರಣೆಗೆ ತಂದ ನ್ಯಾಯಬಾಹಿರ ಪದ್ಧತಿಗಳು, ರೂಢಿಗಳು ಮುಂತಾದುವುಗಳನ್ನು ಬಂದುಮಾಡುವುದು: ಸ್ಥಳೀಯ ಸಂತೆಗಳನ್ನು (ಪೇಟೆ) ಪ್ರಾರಂಭಿಸುವುದು: ವ್ಯಾಪಾರವನ್ನು ಕುದುರಿಸುವುದಕ್ಕಾಗಿ ತೆರಿಗೆಗಳ ವಿನಾಯ್ತಿ: ಸಾರ್ವಜನಿಕ ಕುಂದುಕೊರತೆಗಳ ಪರಿಹಾರ: ವ್ಯವಸಾಯದ ಅಭಿವೃದ್ಧಿಗಾಗಿ ನೀರು ಸರಬರಾಜು ವಗೈರೆ ಏರ್ಪಾಟುಗಳು: ಘಟಗಳು, ದುರ್ಗಗಳು, ಕಣಿವೆಗಳಲ್ಲಿ ರಸ್ತೆಗಳ ನಿರ್ಮಾಣ: ಪಥಿಕಗೃಹ (ಮುಸಾಫರ್ ಖಾನ್)ಗಳ ನಿರ್ಮಾಣ ಇತ್ಯಾದಿ. ಕೆಲವು ಉದಾಹರಣೆಗಳಿಂದ ಈ ವಿಷಯವನ್ನು ಸ್ಪಷ್ಟಪಡಿಸಬಹುದು: ಬಿಜಾಪುರದಲ್ಲಿ ದೊರೆತ ಕ್ರಿ. ಶ. ೧೫೦೦ರ ಕಾರ್ನಾಮಾ ಒಂದು ಬೀಳುಬಿಟ್ಟಿದ್ದ ಜಮೀನಿನಲ್ಲಿ ಕೆಲವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ವ್ಯವಸಾಯಮಾಡುವ ಏರ್ಪಾಟಿನ ಬಗ್ಗೆ ತಿಳಿಸುತ್ತದೆ.[25] ಕ್ರಿ. ಶ. ೧೫೧೬ರಲ್ಲಿ ರಾಯಚೂರಿನ ಹತ್ತಿರವಿರುವ ಮಾಲಿಯಾಬಾದ್ ಎಂಬಲ್ಲಿ ನಾದರುಪಡಿಸಿದ ಶಾಸನವೊಂದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿರುವ ಕಿರಾಣಿ (ಚಿಲ್ಲರೆ) ಅಂಗಡಿಯವರು, ನೇಕಾರರು, ಗಾಣಿಗರು ಮತ್ತು ಇತರ ಕಸುಬಿನ ಜನರು ಕೊಡಬೇಕಾಗಿದ್ದ ತೆರಿಗೆಯ ವಿನಾಯ್ತಿ ಪ್ರಕಾರ ಈ ಮೇಲೆ ಕೊಡಬೇಕಾದ ತೆರಿಗೆ—ಪ್ರತಾಪ್, ಜಿತಾಲ್ ಅಥವಾ ಟಂಕಗಳಲ್ಲಿ ಎಷ್ಟು ಎಂಬುದನ್ನು ಘೋಷಿಸಲಾಗಿದೆ. ಬಲಾತ್ಕಾರ (ಬಿಟ್ಟಿ-ಬಿಟ್ಟಿ)ದ ಕೂಲಿ, ಸರಕಾರವಲ್ಲದ ವಸೂಲಿ, ಬೇಹುಕುಂ (ಬಗರ್ ಹುಕುಂ)ಜುಲ್ಮಾನೆ ವಸೂಲು ಮಾಡುವುದು ಮುಂತಾದುವುಗಳನ್ನು ಅದು ನಿಷೇಧಿಸುತ್ತದೆ. ಕೃಷಿ ಮಾಡಿದ ಹಾಗೂ ಖಾಲಿ ಬಿಟ್ಟಿರುವ ಜಮೀನಿನಲ್ಲಿ ಸಾಧ್ಯವಾದಷ್ಟು ಫಾಯದೆ ಪಡೆಯಲು ಜಾಸ್ತಿ ನಿಗಾ ವಹಿಸಬೇಕೆಂದೂ ಸಹ ತಿಳಿಸುತ್ತದೆ.[26] ಬೆಳಗಾಂ ಜಿಲ್ಲೆಯ ರಾಯಬಾಗ್ ಎಂಬಲ್ಲಿ ಮುಸ್ತಫಾ ಖಾನ್ ಎಂಬವನು ಮುಸ್ತಫಾಬಾದ್ ಎಂಬ ಪೇಟೆಯನ್ನು ನಿರ್ಮಿಸಿ ಮೂರುವರ್ಷಗಳ ತನಕ ಆ ಮಾರುಕಟ್ಟೆಗೆ ಬರುವ ಪದಾರ್ಥಗಳ ಮೇಲೆ ತೆರಿಗೆ ವಿನಾಯ್ತಿ ಕೊಟ್ಟನೆಂದು ೧೭೫೯ರ ಶಾಸನವೊಂದರಿಂದ ತಿಳಿದುಬರುತ್ತದೆ.[27] ಕಲ್ಯಾಣಿಯಲ್ಲಿ ೧೫೮೭ರಲ್ಲಿ ಷಾಪುರ್ ಎಂಬ ಪೇಟೆಯನ್ನು (ಸಂತೆ ನಡೆವ ಅಥವಾ ವ್ಯಾಪಾರಮಾಡುವ ಸ್ಥಳ) ಕಟ್ಟಲಾಯಿತು.[28] ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಕಲ್ಬುರ್ಗಿ ಜಿಲ್ಲೆಯಲ್ಲಿ ಇಬ್ರಾಹಿಂ—ಇತಿಬರ್‌ಪೂರ್ ಎಂಬ ಪೇಟೆಯನ್ನು ಸ್ಥಾಪಿಸಲಾಯಿತು.[29]

ಸಾರ್ವಜನಿಕರ ಉಪಯೋಗಕ್ಕಾಗಿ ಉದ್ಯಾನವನಗಳನ್ನು ಬಿಡುವುದು, ಧಾರ್ಮಿಕ (ಪೂಜಾ) ಸ್ಥಳಗಳ ಸುತ್ತ ಅಥವಾ ಪಕ್ಕದಲ್ಲಿ ಅವುಗಳನ್ನು ಮಾಡಿಸಿ ದಾನಮಾಡುವುದು. ಕೆಲವು ವೇಳೆ ಕೆಲವರು ಖಾಸಗಿ ವ್ಯಕ್ತಿಗಳಿಗೂ ಇಂತಹುಗಳನ್ನು ಬಿಡುವುದೂ ಸಾಮಾನ್ಯವಾಗಿದ್ದಂತೆ ಕಂಡುಬರುತ್ತದೆ.[30] ವ್ಯವಸಾಯಾಭಿವೃದ್ಧಿಗಾಗಿ ಕೆಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಸುಮಾರು ಮೂವತ್ತು ಬಿಘಾ ಜಮೀನನ್ನು ಐದು ಕ್ರಮದಿಂದ ವ್ಯವಸಾಯ ಯೋಗ್ಯವಾಗಿ ಮಾಡಲಾಯಿತೆಂದೂ,. ಇದಕ್ಕಾಗಿ ಕೊಳವೊಂದನ್ನು ನಿರ್ಮಿಸಿ, ಜನ ಜಾನುವಾರುಗಳಿಗೆ ಕೊನೆಗೆ ಆ ಮೂವತ್ತು ಬಿಘಾ ಜಮೀನನ್ನು ಆ ಕೊಳದ ಸಾಲಿಯಾನಾ ದುರಸ್ತಿಗೆ ಪಾಕೀಜು ವಗೈರೆಗಳಿಗಾಗಿ ಬಿಡಲಾಯಿತೆಂದೂ ಸಹ ತಿಳಿಸುತ್ತದೆ.[31]

ಮತ್ತೊಂದು ಶಾಸನದ ಪ್ರಕಾರ ಬೀಳು ನೀರಿಗೆ ಅಡ್ಡಲಾಗಿ ಕಟ್ಟಿದ್ದ ಏರಿಯೊಂದು ಒಡೆದು ಹೋಗಲು ೧೫೭೯ರಲ್ಲಿ ಬಿದರೆಯ ಬರೀದ್ ಷಹನು ರಿಪೇರಿ ಮಾಡಿಸಿದನು.[32] ಮೈಸೂರಿನ ಹತ್ತಿರವಿರುವ ಈಗಿನ ಕೃಷ್ಣರಾಜಸಾಗರ ಅಣೆಕಟ್ಟೆಯ ಹತ್ತಿರವೇ ಟಿಪ್ಪುಸುಲ್ತಾನನು ಅಣೆಕಟ್ಟೆಯೊಂದನ್ನು ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿಸಿ, ಅದರ ನಾಲೆಗಳಿಂದ ನೀರಾವರಿಯಾಗುವ ಜಮೀನಿನ ಒಡೆತನವನ್ನು ರೈತರು ಖಾಯಮ್ಮಾಗಿ ಅನುಭವಿಸಬಹುದೆಂದೂ ಉತ್ಪತ್ತಿಯಲ್ಲಿ ಮೂರನೆಯ ಒಂದು ಭಾಗವನ್ನು ಸಹ ಅವರೇ ಇಟ್ಟುಕೊಳ್ಳಬಹುದೆಂದೂ ಅಪ್ಪಣೆಯಿತ್ತನೆಂದು ಈಗಲೂ ಅಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.[33] ಧಾನ್ಯಸಂಗ್ರಹಣೆಗಾಗಿ ಕಣಜಗಳನ್ನು ಕಟ್ಟಿಸಿದ್ದೂ ಸಹ ಶಾಸನಗಳಿಂದ ಗೊತ್ತಾಗುತ್ತದೆ.[34]

ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ಮತ್ತೆ ಕೆಲವು ಶಾಸನಗಳಲ್ಲಿ ಆಗಿನ ಕಾಲದ ಸಾಮಾಜಿಕ ಸ್ಥಿತಿಗತಿಗಳ ಬಗೆಗೂ ನಮಗೆ ಸ್ವಲ್ಪ ಮಾಹಿತಿ ಸಿಗುತ್ತದೆ. ಬಿಜಾಪುರದ ಆದಿಲ್ ಷಾಹಿ ಶಾಸನವೊಂದರಲ್ಲಿ ಕೆಲವು ಜನಾಂಗ (ಕೋಮು ಅಥವಾ ಪಂಗಡ)ಗಳು ಸೈನ್ಯದಲ್ಲಿ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕಾಗಿತ್ತೆಂಬ ಸೂಚನೆಯಿದೆ. ಒಮ್ಮೆ ನಾಯಿಂದ ಕೋಮಿನವರು ಆದಿಲ್ ಷಹನಲ್ಲಿಗೆ ನಿಯೋಗ ಹೋದರು. ಆಗ ಅವರಿಗೆ ಸೈನ್ಯದಲ್ಲಿ ಕಡ್ಡಾಯ ಸೇವೆ ಸಲ್ಲಿಸಬೇಕಾದ ನಿಯಮದಿಂದ ವಿನಾಯ್ತಿ ದೊರಕಿದುದಲ್ಲದೆ 'ಬರದ್' 'ಕಲ್ಮೇವ' ಮುಂತಾದ ದಂಡ, ತೆರಿಗೆಗಳಿಂದಲೂ ಮುಕ್ತಿ ದೊರೆಯಿತು. ಬೀದರ್ ರಾಜ್ಯದಲ್ಲಿ ಇಂತಹ ನಿಯಮವಿರಲಿಲ್ಲ. ಪರ್ಷಿಯಾ (ಖೊರಾಸಾನ್)ದಲ್ಲಿಯೂ ಇಂತಹ ಪದ್ಧತಿಯಿರಲಿಲ್ಲ.[35] ಕ್ರಿ. ಶ. ೧೫೭೦ ರಿಂದ ೧೬೫೩ರ ತನಕ ಹೊರಟ ರಾಜ ಶಾಸನಗಳಲ್ಲಿ ಕನಿಷ್ಠಪಕ್ಷ ನಾಲ್ಕೈದರಲ್ಲಾದರೂ ಸಹ 'ನಿಪುತ್ರಕ್' (ಅಪುತ್ರತ್ವ) ಎಂಬ ಅನ್ಯಾಯವಾದ ಪದ್ಧತಿಯೊಂದನ್ನು ರದ್ದುಪಡಿಸಲು ಆದಿಲ್ ಷಾಹಿ ಸುಲ್ತಾನರು ಪ್ರಯತ್ನಿಸಿದುದು ಕಂಡುಬರುತ್ತದೆ. ಈ ನಿಪುತ್ರಕ್ ಪದ್ಧತಿಯು ಉತ್ತರ ಕರ್ನಾಟಕ ಮತ್ತು ಕೊಂಕಣದಲ್ಲಿ ಪ್ರಚಾರದಲ್ಲಿತ್ತು. ಇದರ ಪ್ರಕಾರ ಮಗನಿಲ್ಲದೆ ಮರಣ ಹೊಂದಿದ ವ್ಯಕ್ತಿಯೊಬ್ಬರ ಆಸ್ತಿ ಪಾಸ್ತಿಯು ಸ್ಥಳೀಯ ಅಧಿಕಾರಿಗಳ ಪಾಲಿಗೆ ಹೋಗುತ್ತಿತ್ತು. ಹೆಣ್ಣುಮಕ್ಕಳಿಗಾಗಲೀ ಹತ್ತಿರದ ನೆಂಟರಿಗಾಗಲೀ ಇದರ ಹಕ್ಕು ದಕ್ಕುತ್ತಿರಲಿಲ್ಲ. ಕೆಲವು ಕಡೆ ಇದು ಎಲ್ಲಾ ಕೋಮಿನವರಿಗೂ ಮತ್ತೆ ಕೆಲವು ಕಡೆ ಕೆಲವೇ ಕೋಮಿನವರಿಗೂ ಅನ್ವಯವಾಗುತ್ತಿತ್ತು. ಒಂದು ಕಡೆ ಇದು ಅಕ್ಕಸಾಲಿಗರಿಗೆ ಅನ್ವಯಿಸಿದರೆ ಮತ್ತೊಂದು ಕಡೆ ಬಣಜಿಗರು, ಅಕ್ಕಸಾಲಿಗರು, ಖತ್ರಿಯ (ಕ್ಷತ್ರಿಯ) ಕೋಮಿನವರು, ಕೋಮಟಿಗಳು ಮತ್ತು ವೈಶ್ಯರಿಗೆ ಅನ್ವಯಿಸುತ್ತಿತ್ತೆಂದು ತಿಳಿದುಬರುತ್ತದೆ. ಪದೇ ಪದೇ ಆದಿಲ್ ಷಾಹಿ ಸುಲ್ತಾನರು ಇದರ ರದ್ದಿಗೆ ಫರ್‌ಮಾನಾ (ಶಾಸನ) ಹೊರಡಿಸಿದರೆಂದರೆ ಸ್ಥಳೀಯ ಅಧಿಕಾರಿಗಳು ಎಷ್ಟರ ಮಟ್ಟಿಗೆ ಇದನ್ನು ಜಾರಿಯಲ್ಲಿಟ್ಟಿದ್ದರೆಂಬುದು ಗೊತ್ತಾಗುತ್ತದೆ. ಇದೇ ರೀತಿ ಹೆಂಗಸರನ್ನೂ ಗಂಡಸರನ್ನೂ ಜೀತದ ಆಳುಗಳನ್ನಾಗಿ ಈ ಜಾತಿಯ ಜನರು ಇಟ್ಟುಕೊಳ್ಳುತ್ತಿದ್ದ ಪದ್ಧತಿಯಿದ್ದುದೂ[36] ಮತ್ತು ಕೆಲವು ಅಪರಾಧಗಳಿಗಾಗಿ ಜನರನ್ನು ಜಾತಿಯಿಂದ ಸಮಾಜದಿಂದ ಹೊರಹಾಕುತ್ತಿದ್ದುದೂ[37] ರೂಢಿಯಲ್ಲಿತ್ತೆಂದು ಈ ಶಾಸನಗಳಿಂದ ವ್ಯಕ್ತವಾಗುತ್ತದೆ.

• ದಾನ ಶಾಸನಗಳ ಅಥವಾ ರಾಜಾಜ್ಞೆಗಳ ಅವಿಭಾಜ್ಯ ಅಂಗವಾಗಿದ್ದ ದಾನರಕ್ಷಣೆ, ಅದರಿಂದ ಬರುವ ಸತ್ಫಲ ಮತ್ತು ದತ್ತಾಪಹಾರದಿಂದ ಆಗುವ ಹಾನಿ, ಪಾಪ ಮುಂತಾದುವುಗಳನ್ನು ತಿಳಿಸುವ ಭಾಗದಲ್ಲಿ ಆಗಿನ ಕಾಲದ ಸುಲ್ತಾನರುಗಳ, ಅವರ ಸರದಾರರುಗಳ ,ಅಧಿಕಾರಿಗಳ ವರ್ತನೆ, ವರ್ಗ ಅಥವಾ ಜಾತೀಯ ಭಾವನೆ, ದ್ವೇಷಾಸೂಯೆಗಳು, ಧಾರ್ಮಿಕ ಕ್ಷೇತ್ರಗಳು, ನದೀತೀರದ ಸ್ಥಳಗಳು, ಮಸೀತಿಗಳು, ಮಂದಿರಗಳು ಮುಂತಾದುವುಗಳ ಪಾವಿತ್ರ್ಯದ ವಿಚಾರ, ದತ್ತಾಪಹಾರದಲ್ಲಿಡಗಿರುವ ದ್ವೇಷ ಅಥವಾ ಸ್ವಾರ್ಥ, ಪಾಪಪುಣ್ಯಗಳಲ್ಲಿ ವಿಶ್ವಾಸ ಮುಂತಾದ ವಿಚಾರಗಳು ತಿಳಿದುಬರುತ್ತದೆ.

ಹುಕ್ಕೇರಿಯಲ್ಲಿರುವ ಶಿಲಾಶಾಸನವೊಂದರಲ್ಲಿ ಜಯ್‌ಶೆಟ್ಟಿ ಎಂಬಾತನ ಜಮೀನನ್ನು ಸ್ಥಳೀಯ ಕಾರಂಜಿ (ಕೆರೆ)ಗಾಗಿ ಸ್ಥಳೀಯ ಅಧಿಕಾರಿಗಳು ಮಹಜರು ಮಾಡಿ ಬಿಟ್ಟುಕೊಟ್ಟ ಅಪೂರ್ವ ವಿಚಾರವು ತಿಳಿದುಬರುತ್ತದೆ. ೧೫೫೫ರಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಅತಿಥಿಗೃಹವೊಂದನ್ನು ಕಟ್ಟಿಸಿದ ವಿಚಾರವೂ ಇದರಿಂದ ಗೊತ್ತಾಗುತ್ತದೆ.[37] ಜಮೀನು ದಾನವು ಸ್ವಪ್ರೇರಣೆಯಿಂದಾದುದೇ ಅಥವಾ

ಇಲ್ಲವೇ ಎಂಬುದು ಮಾತ್ರ ಸ್ಪಷ್ಟವಾಗಿಲ್ಲ. ಕೆಲವು ಶಾಸನಗಳಲ್ಲಿ ಸ್ಥಳನಾಮಗಳ ವಿವರಣೆ, ಹಳೆಯ ಹೆಸರಿಗೆ ಬದಲಾಗಿ ಇಟ್ಟ ಹೊಸ ಹೆಸರು ಇತ್ಯಾದಿಗಳಿವೆ. ಇಬ್ರಾಹಿಂ-ಇತಿಬರ್‌ಪುರ್. ಮುಸ್ತಫಾಬಾದ್ (ರಾಯ್‌ಬಾಗ್), ಮುಹಮ್ಮದ್‌ಪುರ್ (ಬಿಜಾಪುರ್), ಮುಹಮ್ಮದ್-ನೂರ್ (ಕರ್ನೂಲ್) ಇವು ಕೆಲವು ಉದಾಹರಣೆಗಳು. ಗುಲ್‌ಬರ್ಗ (ಕಲ್ಬುರ್ಗಿ) ಬಿಜಾಪುರ, ಗುಲ್‌ಶೀರಾವ್, ಸಾಗರ. ಗೋಗಿ ಮುಂತಾದ ಸ್ಥಳಗಳ ಕೆಲವು ಶಾಸನಗಳಲ್ಲಿ ಪ್ರಸಿದ್ಧ ಧಾರ್ಮಿಕ ವ್ಯಕ್ತಿಗಳ ಹೆಸರನ್ನು ತಿಳಿಸಲಾಗಿದೆ.

ಧಾರ್ಮಿಕ ಅಥವಾ ಲೌಕಿಕ ಉಪಯೋಗಕ್ಕಾಗಿ ದಾನ ಮಾಡುವುದು. ಕೆರೆ ಕಟ್ಟೆ ಬಾವಿ ಕೊಳ ಮುಂತಾದುವುಗಳ ನಿರ್ಮಾಣ. ಮುಸಾಫರ್‌ಖಾನೆ. ಸರಾಯ್ ಮುಂತಾದುವುಗಳನ್ನು ಕಟ್ಟಿಸುವುದು ಭಾಗಶಃ ಆಡಳಿತಗಾರರ ಕೆಲಸವಾಗಿತ್ತೆಂಬ ಸೂಚನೆಯೂ ಸಹ ಕೆಲವು ಶಾಸನಗಳಲ್ಲಿದೆ.[38] ಬಿಜಾಪುರದಲ್ಲಿ ಕ್ರಿ. ಶ. ೧೬೫೧-೫೨ರಲ್ಲಿ ಅಫ್ಜಲ್‌ಖಾನ್ ಎಂಬವನು ಕಟ್ಟಿಸಿದ ಗೋಪುರಾಕಾರದ ನೀರಿನ ಟ್ಯಾಂಕುಗಳು ಅಥವಾ ಇಬ್ರಾಹಿಂ ಆದಿಲ್ ಷಹನ ರಾಣಿ ತಾಜ್‌ಸುಲ್ತಾನ್ ಎಂಬವಳು ಕಟ್ಟಿಸಿದ ದೊಡ್ಡ ಕಲ್ಯಾಣಿ ಇವುಗಳಿಗೆ ಸಂಬಂಧಿಸಿದ ಶಾಸನಗಳನ್ನು ಇಲ್ಲಿ ಹೆಸರಿಸಬಹುದು.[39] ಮೇಲೆ ಹೇಳಿದ ದೊಡ್ಡ ಕಲ್ಯಾಣಿಯ ಶಾಸನದಲ್ಲಿ ಇಂತಹ ಕಡೆಗಳಲ್ಲಿ ಬಡ ಬಗ್ಗರು ತಂಗಲು ಅಥವಾ ಸ್ನಾನ ಪೂಜಾದಿಗಳಿಗೆ ಬಂದವರು ವಿಶ್ರಮಿಸಿಕೊಳ್ಳಲು ಮಂಟಪಗಳಿರುವುದು ಸೂಚಿತವಾಗಿದೆ.

ಬಿಜಾಪುರ ಜಿಲ್ಲೆಯ ಹಲಸಂಗಿಯ ಶಾಸನದಲ್ಲಿ ಅಲ್ಲಾಉದ್-ದೀನ್ ಅಹ್ಮದ್ ಷಹನ ಕಾಲದಲ್ಲಿ ಬಹಮನಿ ರಾಜ್ಯದ ಎಲ್ಲೆಯ ಸೂಚನೆಯಿರುವುದನ್ನು ಈ ಮೊದಲು ಸೂಚಿಸಲಾಗಿದೆ. ಗುಲಬರ್ಗಾ (ಕಲಬುರ್ಗಿ) ಜಿಲ್ಲೆಯ ಮತ್ತೊಂದು ಶಾಸನದಲ್ಲಿ (ಸುಮಾರು ಇದೇ ಕಾಲದಲ್ಲಿ) ಬಹುಶಃ ರಾಜಧಾನಿಯಿಂದಲೋ ಅಥವಾ ಮತ್ತಾವುದೋ ಪ್ರಮುಖ ಸ್ಥಳದಿಂದಲೋ ೨೦೬ ಕ್ರೋಶಗಳ ದೂರವನ್ನು ಸೂಚಿಸಲಾಗಿದೆ.[40] ಬೇಗಾಮಿನ ನಾಲ್ಕು ಶಾಸನಗಳು ಅಲ್ಲಿಯ ಜಾಮಿ ಮಸೀದಿಗೆ ಬಿಟ್ಟ ವ್ಯವಸಾಯದ ಭೂಮಿಯ ಚಕ್ಕುಬಂದಿಯ ವಿವರವನ್ನೀಯುತ್ತವೆ.[41]

ತೆರಿಗೆಯ ದರಗಳು ಅಥವಾ ಛತ್ರದ ತಪಶೀಲುಗಳನ್ನು ಕೊಡುವ ಶಾಸನಗಳೂ. ಕಟ್ಟಡ ಮುಂತಾದುವುಗಳನ್ನು ಕಟ್ಟಿಸಲು ತಗುಲಿದ ವೆಚ್ಚ ಮುಂತಾದುವುಗಳನ್ನು ಸೂಚಿಸುವ ಶಾಸನಗಳೂ ಆಗಿನ ಕಾಲದ ಆರ್ಥಿಕ ಸ್ಥಿತಿಗತಿಯ ಚಿತ್ರವನ್ನು ಸ್ವಲ್ಪಮಟ್ಟಿಗೆ ನಮ್ಮ ಮುಂದೆ ಇಡುತ್ತವೆ. ಕ್ರಿ. ಶ. ೧೫೫೫ರ ಬಿಜಾಪುರದ ಶಾಸನವೊಂದು ಮುಹಪ್ಪಿನನಿಗೆ ಒಂದು ಟಂಕ. ಇಮಾಮ ಮತ್ತು ಸೇವಕ (ಫರಾಶ್)ನಿಗೆ ಅರು ಜಿಕಾನ ವೇತನವೆಂದು ಸೂಚಿಸುತ್ತದೆ.[42] ಕ್ರಿ. ಶ. ೧೫೮೦ರ ಮತ್ತು ೧೫೮೬ರ ಶಾಸನಗಳಲ್ಲಿ ಕೋಟೆಗೋಡೆ ಮತ್ತು ಮಸೀತಿಯೊಂದನ್ನು ಕಟ್ಟಿಸಲು ತಗುಲಿದ ಖರ್ಚು ಕ್ರಮವಾಗಿ ಆರು ಸಾವಿರ ಮತ್ತು ಒಂದು ಸಾವಿರ ಹೊನ್ನುಗಳು ಎಂಬುದಾಗಿ ತಿಳಿದುಬರುತ್ತದೆ.[43] ಹದಿನಾರನೆಯ ಶತಮಾನದಲ್ಲಿ ಖವ್ವಾಸ್‌ಖಾನ್ ಎಂಬುವನು ಬಿಜಾಪುರದ ಹತ್ತಿರ ಕಟ್ಟಿಸಿದ ಭಾರೀ ಅಣೆಕಟ್ಟೊಂದಕ್ಕೆ ಐವತ್ತು ಸಾವಿರ ಹೊನ್ನುಗಳು ಖರ್ಚಾಯಿತೆನ್ನಲಾಗಿದೆ.[44]

ಅಳತೆಗೆ ಸಂಬಂಧಿಸಿದ ಸಿತನ್. ಚವಾರ್. ಬಿಘಾ. ಗಜ್. ಸೌರಸ್‌ಗಜ್ ಎಂಬ ಶಬ್ದಗಳೂ ನಾಣ್ಯಗಳಿಗೆ ಸಂಬಂಧಿಸಿದ ಹೊನ್. ಪ್ರತಾಪ್. ಟಂಕ. ಜಿಕಾಣಿ ಮತ್ತು ಜಿತಾರ್ ಎಂಬ ಶಬ್ದಗಳೂ ರೂಢಿಯಲ್ಲಿದ್ದುವು.[45]

ಸಾಹಿತ್ಯ ಚರಿತ್ರೆ ಮತ್ತು ಕಲೆಗಳ ಇತಿಹಾಸ ರಚನೆಗೂ ಸಹ ಈ ಕಾಲದ ಅರಬ್ಬೀ ಹಾಗೂ ಪರ್ಷಿಯಾ ಭಾಷೆಯ ಶಾಸನಗಳು ಬಹುಮಟ್ಟಿಗೆ ಉಪಯುಕ್ತವಾಗಿವೆ. ಪದ್ಯರೂಪದಲ್ಲಿ ಬರೆದಿರುವ ಶಾಸನಗಳಲ್ಲಿ ಕವಿಗಳ ಹೆಸರುಗಳು ಉಳಿದುಬಂದಿವೆ. ಇವರಲ್ಲಿ ಪರ್ಷಿಯಾ ಭಾಷೆಯ ಕವಿಗಳೇ ಹೆಚ್ಚು. ಒಬ್ಬಿಬ್ಬರು ಅರಬ್ಬೀ ಕವಿಗಳೂ ಇದ್ದಾರೆ. ಬಹಮನೀ ಸುಲ್ತಾನರ ಕಾಲದಲ್ಲಿ ಫರೀದ್. ನಾದಿಮ್. ಮುಹಮ್ಮದ್. ಜಮಾಲ್‌ಉದ್-ದೀನ್-ಮುಫ್ತಿ ಮುಂತಾದವರು: ಆದಿಲ್ ಷಾಹಿ ಸುಲ್ತಾನರ ಕಾಲದಲ್ಲಿ ನೂರ್. ಮುಬಾರಿಜ್. ಅಫಾರಿನ್, ಅಮೀನ್. ಅಬುಲ್‌ಖಾಸಿಂ ಶಾರಿ. ದಾಬಿರ್ ಮುಂತಾದವರೂ: ಬರೀದ್ ಷಾಹಿ ಸುಲ್ತಾನರ ರಾಜ್ಯಕ್ಕೆ ಸೇರಿದ್ದ ಅಫ್‌ದಲಿ ಎಂಬಾತನೂ ಮೊಘಲರ ಮತ್ತು ಇತರ ಚಿಕ್ಕ ಪುಟ್ಟ ಸುಲ್ತಾನರ ಅಥವಾ ರಾಜರ ಕಾಲದಲ್ಲಿ ಫಯುದ್. ಅಬೀದ್,

ಬಾದ್‌ಷಾ, ಮೊಹಿಯುದ್-ದೀನ್ ಮುಂತಾದವರೂ; ಟಿಪ್ಪುವಿನ ಕಾಲದಲ್ಲಿ ಮೀರ್ ಹುಸೇನ್ ಅಲಿ, ಗುಲಾಮ್ ಹುಸೇನ್, ಸಯೀದ್ ಷೇರ್ ಅಲ್ ಜಫಾರಿ ಮತ್ತು ಷಾಹಿರ್ ಎಂಬುವರೂ ಮುಖ್ಯ ರಾದ ಕವಿಗಳಾಗಿದ್ದಾರೆ. ಬಿಜಾಪುರದ ಸುಲ್ತಾನನಾದ ಅಲಿ ಆದಿಲ್ ಷಹನು ರಚಿಸಿದ ಪರ್ಷಿಯಾ ಭಾಷೆಯ ಕವಿತೆಯೊಂದು ಶಾಸನವೊಂದರಲ್ಲಿ ಇಂದಿಗೂ ಸುರಕ್ಷಿತವಾಗಿದೆ.[46]

ಇದೇ ಸಂದರ್ಭದಲ್ಲಿ ೧೬–೧೭ನೇ ಶತಮಾನದಲ್ಲಿ ದಖನಿ ಎಂದು ಪ್ರಸಿದ್ಧವಾಗಿದ್ದ ಹಳೆಯ ಉರ್ದು ಭಾಷೆಯ ಮಾದರಿಯುಳ್ಳ ಎರಡು ಶಾಸನಗಳಲ್ಲಿ ದೊರಕಿರುವುದನ್ನು ನಾವು ಗಮನಿಸಬಹುದು. ಇವುಗಳಲ್ಲೊಂದು ಹದಿನೈದು ಪದ್ಯಗಳ ಕವಿತೆಯನ್ನೊಳಗೊಂಡಿದೆ. ಮತ್ತೊಂದರಲ್ಲಿ ಎರಡು ಸಾಲಿನ ಒಂದೇ ಒಂದು ಪದ್ಯವಿದೆ.[47] ಸ್ಥಳೀಯ ಭಾಷೆಗಳ ಅನೇಕ ಶಬ್ದಗಳೂ ಈ ಶಾಸನಗಳಲ್ಲಿ ಮಧ್ಯೆ ಮಧ್ಯೆ ಕಂಡುಬರುವುದು ಭಾಷಾ ಶಾಸ್ತ್ರದ ದೃಷ್ಟಿಯಿಂದ, ಅದರಲ್ಲೂ ಕನ್ನಡ ಮತ್ತು ಇತರ ಭಾಷೆಗಳಲ್ಲಿ ಎಷ್ಟರ ಮಟ್ಟಿಗೆ ಕೊಳು-ಕೊಡಿಗೆ ನಡೆದಿದೆಯೆಂಬುದನ್ನು ಅಭ್ಯಸಿಸಲು ಸಹಾಯಕವಾಗಿದೆ. ಉದಾ ಹರಣೆಗೆ ನಾವು ಈ ಮುಂದಿನ ಕೆಲವು ಶಬ್ದಗಳನ್ನು ಗಮನಿಸಬಹುದು. ದಟ್, ಸುತರ್, ನಿತನ್, ಜಾಯಿನ್, ಜಾಪಿನ್, ಮಹಜನ್, ಬಲೋತಿಯುನ್, ಭಂಜ್, ಲಾಡ್ಡಿ, ನಗನ್, ಘಗನ್, ಮುಲ್ಗಿ, ಸವಾಯ್, ಕಸರ, ಪರ್‌ಕೋಟ, ದಿಡ್ಡಿ, ಚವಾರ್, ಕರಂಜ (ಪರ್ಷಿಯಾ ಭಾಷೆಯ ಕಾರಿಜ್ ಎಂಬುದರ ಅಪಭ್ರಂಶ), ಕುಕ, ಪೇಟ್, ಪೇಂಟ್, ನಾಡ್ ಇತ್ಯಾದಿ.

ಕೆಲವು ಶಾಸನಗಳು ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟರಮಟ್ಟಿಗೆ ಕನ್ನಡ ಅಥವಾ ಮರಾಠೀ ಭಾಷೆ ಬಳಕೆಯಲ್ಲಿತ್ತೆಂಬುದನ್ನು ಅರಿತುಕೊಳ್ಳಲು ಸಹಾಯಕವಾಗಿವೆ. ದ್ವಿಭಾಷಾ ಶಾಸನಗಳು, ಒಂದು ಸಂದರ್ಭದಲ್ಲಿ ತ್ರಿಭಾಷಾ ಶಾಸನ ಸಿಕ್ಕಿರುವುದು ಇನ್ನೂ ಕುತೂಹಲಕಾರಿಯಾಗಿದೆ. ಅಂತೂ ಪರ್ಷಿಯಾ ಭಾಷೆ ಮಾತ್ರ ಅವುಗಳಲ್ಲೊಂದು ನಿಯತವಾಗಿದೆ. ಶಿವಮೊಗ್ಗ ಜಿಲ್ಲೆಯ ಸಿರಿಗುಪ್ಪದಲ್ಲಿ ದೊರೆತ ಶಾಸನವೇ ಈ ಅಪೂರ್ವವಾದ ತ್ರಿಭಾಷಾಶಾಸನ. ಬಿಜಾಪುರದಲ್ಲಿ ದೊರಕಿರುವ ದ್ವಿಭಾಷಾ ಶಾಸನ ವೊಂದರಲ್ಲಿ ಎರಡನೆಯ ಭಾಷೆ ಮರಾಠಿ. ಇದರ ಕಾಲ ೧೬೫೨. ಈ ಶಾಸನಗಳು ಆಗ ಬಳಕೆಯಲ್ಲಿದ್ದ ಸ್ಥಳೀಯ ಭಾಷೆಗಳ ಮಾದರಿಗಳನ್ನೊದಗಿಸುತ್ತವೆ. ದ್ವಿಭಾಷಾ ಶಾಸನಗಳಲ್ಲಿ ಹೆಚ್ಚಿನವು ಪರ್ಷಿಯನ್ ಮತ್ತು ಕನ್ನಡ ಭಾಷೆಯವು. ಕನ್ನಡ ನಾಡಿನಲ್ಲಿ ಆಳಿದ ಕದಂಬ, ಗಂಗ, ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಅರಸುಗಳು ಸಂಸ್ಕೃತ-ಕನ್ನಡ (ದ್ವಿಭಾಷಾ) ಶಾಸನಗಳನ್ನು ಹೊರಡಿಸಿದಂತೆ ಮುಸಲ್ಮಾನ ಸುಲ್ತಾನರೂ ಸಹ ಸ್ಥಳೀಯ ಜನರಿಗೆ ರಾಜಾಜ್ಞೆಗಳು ಅರ್ಥವಾಗಲೆಂದು ಪರ್ಷಿಯನ್ ಮತ್ತು ಕನ್ನಡ ಈ ಎರಡು ಭಾಷೆಗಳಲ್ಲೂ ಶಾಸನಗಳನ್ನು ಬರೆದಿದ್ದಾರೆ.[49]

ಲೇಖನಕಲೆಯ (ಕ್ಯಾಲಿಗ್ರಫಿ) ದೃಷ್ಟಿಯಿಂದಲೂ ಸಹ ಈ ಶಾಸನಗಳ ಮೌಲಿಕತೆ ಪ್ರಶಂಸಾರ್ಹ ವಾಗಿದೆ. ಕೆಲವು ಶಾಸನಗಳಂತೂ ಕಲ್ಲಮೇಲೆ ಕೊರೆವ ಕಲೆಯಲ್ಲಿ ಅನ್ಯಾದೃಶವಾಗಿವೆ. ಈ ಶಾಸನ ಗಳಲ್ಲಿ ಈ ಕೆಳಗಿನ ಕೆಲವರು ಕುಶಲಿ-ಲೇಖಕರ ಹೆಸರುಗಳು ಉಳಿದುಕೊಂಡಿವೆ: ಮುಹಮ್ಮದ್ ಬಿನ್ ದಿಯಾ (೧೩೨೩, ಕುತ್ಬ್ (೧೩೩೩), ಮುಘಿತ್ ಅಲ್-ಕಾರಿ ಅಶ್-ಶಿರಾಜಿ (ಸು. ೧೪೨೫), ಮಿರಾಕ್ ಶಿರೇವಿ (೧೫೧೭), ಕಾದಿ ನಿಜಾಂ ದಪ್ವಾನಿ (೧೫೧೮), ಹಾಜಿ ಹುಸೇನ್ (೧೫೪೯), ಹಾಫಿಜ್ ನಿಜಾ ಮುದ್ ದೀನ್ (೧೫೩೬–೩೭), ಕಾದಿ ಇಸ್ಮಾಯಿಲ್ (೧೫೭೭–೭೮), ಖ್ವಾಜಗಿ ಶಿರ್ವಾನಿ (೧೫೭೯), ಹಿದಾಯುತ್ ಉಲ್ಲಾಹ್ (೧೫೮೧), ಕರೀಮುದ್ ದೀನ್ ಅಲಿ (೧೫೮೩), ಅಬುತಾಲಿಬ್ ಜಾರಿನ್ ಕಲಾಂ (೧೫೯೦), ಅಬುಲ್ ಕಾಸಿ ಲಾರಿ (೧೬೦೧–೦೨), ಫದ್‌ಲುಲ್ಲಾಹ್‌ನ ಮಗ ಹುಸೇನ್ (೧೬೪೯–೫೦), ಅಫ್‌ದಲ್ ಖಾನಿ ಲೇಖಕ ಹಾಜಿ ಇಷಾಕ್ (೧೬೫೨), ಅಬ್ದುಲ್ ಅಜೀಜ್ (೧೬೩೩–೩೪), ಮತ್ತು ನಕಿ ಅಲ್‌ಹುಸೇನಿ (೧೬೭೧), ಇವರಲ್ಲಿ ಕೆಲವರಂತೂ ವಿಶ್ವದ ಯಾವ ಕುಶಲ ಬರೆವಗಾರನಿಗೂ ಹೆಗಲೆಣೆಯಾಗಿ ನಿಲ್ಲಬಲ್ಲರು. ಬಿದರೆಯ ಸಮಾಧಿ ಶಾಸನವೊಂದರಲ್ಲಿ ಖಿತ್ತ್‌ಖಾನ್ ಎಂಬ ಬಿರುದುಳ್ಳ ವ್ಯಕ್ತಿಯ ಹೆಸರು ಕಂಡುಬರುತ್ತದೆ.[50] ಬಹಮನೀ ವಂಶದ ಸುಲ್ತಾನ ಮಹಮೂದ್ ಷಹನು ಪ್ರಸಿದ್ಧ ಅಕ್ಷರ ಶಿಲ್ಪಿ ಆಗಿದ್ದನೆಂಬುದು ಅಜರಾಮರವಾಗಿ ಉಳಿದು ಬಂದಿರು ವುದು ಬಿದರೆಯ ಮತ್ತೊಂದು ಶಾಸನದಿಂದ.[51] ಇನ್ನೂ ಇಂತಹ ಹಲವಾರು ಸುಂದರ ಲಿಪಿಕಾರರು

ಇದ್ದರೆಂಬುದು ಶಾಸನಗಳ ಬರವಣಿಗೆಗಳಿಂದ ಗೊತ್ತಾಗುವುದಾದರೂ ಅವರ ಹೆಸರುಗಳು ಮಾತ್ರ ಅಲ್ಲಿಲ್ಲದಿರುವುದು ಒಂದು ದೌರ್ಭಾಗ್ಯ ಅಂಶವೇ ಸರಿ.

ಕನ್ನಡ ನಾಡಿನ ಅರಬ್ಬೀ ಮತ್ತು ಪರ್ಷಿಯಾ ಶಾಸನಗಳಿಂದ ಷುಹುರ್ ಶಕೆಯೆಂಬ ಒಂದು ಕಾಲಗಣನಾ ಪದ್ಧತಿಯೂ ರೂಢಿಯಲ್ಲಿತ್ತೆಂಬುದು ಗೊತ್ತಾಗುತ್ತದೆ. ಇತ್ತೀಚೆಗೆ ಕೆಲವರು ವಿಮರ್ಶಕರು ಇದು ಒಂದು ಸ್ವತಂತ್ರ ಶಕೆಯೇ ಅಲ್ಲವೆಂದೂ ಸಹ ಸಂದೇಹ ವ್ಯಕ್ತಪಡಿಸಿದ್ದಾರೆ.[52] ಆದರೆ ಬಿದರೆ, ಬಿಜಾಪುರ, ರಾಯಚೂರು, ಕಲ್‌ಬುರ್ಗಿ, ಮುದುಗಿರಿ ಮುಂತಾದ ಹಲವಾರು ಕಡೆಗಳಲ್ಲಿ ಸುಮಾರು ಹನ್ನೆರಡು ಶಾಸನಗಳಲ್ಲಿ ಷುಹುರ್ ಮತ್ತು ಹಿಜ್ರಾ ಈ ಎರಡು ಶಕೆಗಳನ್ನು ಉಪಯೋಗಿಸಲಾಗಿದೆ.[53] ಆದರೆ ಆ ಬಗ್ಗೆ ವಿವರವಾದ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಟಿಪ್ಪುಸುಲ್ತಾನನು ಉಪಯೋಗಿಸಿದ ಮೌಲೂದಿ ಶಕೆ ಎಂಬುದು ಆತನ ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ. ಆತನ ಕೆಲವು ಶಾಸನಗಳಲ್ಲಿ ಜಾರ್ ಪದ್ಧತಿಯನ್ನನುಸರಿಸಿದ ಕಾಲಗಣನಾ ಸಂಕೇತವಾಕ್ಯ (ಕ್ರೋನೋಗ್ರ್ಯಾಮ್ ಕಂಡುಬರುತ್ತದೆ).

ಈ ಶಾಸನಗಳಿಂದ ಈಗ ಉಳಿದು ನಿಂತಿರುವ ಅನೇಕ ಕಟ್ಟಡಗಳ ಅವಶೇಷಗಳನ್ನು ಗುರ್ತಿಸುವುದು ಸುಲಭಸಾಧ್ಯವಾಗಿದೆ. ಇದಲ್ಲದೆ ಯಾವ ಯಾವ ಕಾಲದಲ್ಲಿ ವಾಸ್ತುಶಿಲ್ಪವು ಯಾವ ಯಾವ ರೀತಿಯಲ್ಲಿ ಬೆಳೆದು ಬಂದಿತೆಂಬುದನ್ನೂ ಈ ಬೆಳವಣಿಗೆಯ ಆಧಾರದಿಂದ ಹೊಸ ಹೊಸ ಪಂಥ ಅಥವಾ ಶೈಲಿ ಹೇಗೆ ಮೂಡಿತೆಂಬುದನ್ನೂ ಚರ್ಚಿಸುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಅದರಲ್ಲೂ ಸಮಾಧಿಗಳಲ್ಲಿರುವ ಶಾಸನಗಳಿಂದ ಆ ಸಮಾಧಿಯು ಯಾವ ಪ್ರಸಿದ್ಧ ವ್ಯಕ್ತಿಗೆ ಸೇರಿದ್ದೆಂಬುದನ್ನು ಗುರುತಿಸುವುದಕ್ಕೂ ಅಥವಾ ಇಂತಹ ಒಂದು ಸಮಾಧಿಯು ಇಂತಹ ಒಬ್ಬ ವ್ಯಕ್ತಿಯದೆಂದು ರೂಢಿಯಿದ್ದರೆ ಶಾಸನವೂ ಒಂದು ದೊರೆತರೆ ಆ ರೂಢಿಯನ್ನು ಅದು ದೃಢಪಡಿಸುವುದಕ್ಕೂ ಸಹಾಯಕವಾಗುತ್ತದೆ. ಈ ಶಾಸನಗಳಿಲ್ಲದಿದ್ದರೆ ಎಷ್ಟೋ ಗೋರಿಗಳು ಅನಾಮಧೇಯವಾಗಿಯೇ ಉಳಿದುಬಿಡುತ್ತಿದ್ದುವು. ಬೆಂಗಳೂರಿನ ಕೋಟೆಯಲ್ಲಿರುವ ಟಿಪ್ಪುಸುಲ್ತಾನನ ಅರಮನೆಗೆ 'ಫರೂಕ್-ಮಹಲ್' ಎಂಬ ಹೆಸರಿತ್ತೆಂಬುದು ಈಗ ಬೆಂಗಳೂರಿನ ಪುರಾತತ್ತ್ವ ವಸ್ತುಪ್ರದರ್ಶನ ಶಾಲೆಯಲ್ಲಿರುವ ಶಾಸನವೊಂದಿಲ್ಲದಿದ್ದರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ.[54]

ಟಿಪ್ಪಣಿಗಳು

೧. ಎಪಿಗ್ರಾಫಿಯಾ ಇಂಡೋ ಮುಸ್ಲಿಮಿಕಾ (ಎ.ಇಂ.ಮು) ೧೯೨೭–೨೮. ಪುಟ ೧೭, ಜಿ.
೨. ಅನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಫಿ (ಆ.ರಿ.ಇಂ.ಎ.). ೧೯೬೪–೬೫, ಸಂ. ಡಿ. ೨೭೮.
೩. ಅದೇ. ೧೯೬೩–೬೪, ಸಂ. ಡಿ. ೧೮೭. ವಾಸ್ತವವಾಗಿ ಈ ಶಾಸನ ಕನ್ನಡ ನಾಡಿನಲ್ಲಿಲ್ಲ.
೪. ಎ.ಇಂ.ಮು., ೧೯೩೯–೪೦, ಪುಟ. ೧೭–೧೮.
೫. ಆ.ರಿ.ಇಂ.ಎ., ೧೯೫೯–೬೦, ಸಂ. ಡಿ. ೧೭೨.
೬. ಎ.ಇಂ.ಮು., ೧೯೨೯–೩೦, ಪು. ೨೧.
೭. ಅದೇ. ಪು. ೨೨.
೮. ಅದೇ. ೧೯೩೩–೩೪, ಅನುಬಂಧ, ಭಾಗ ಪು. ೫೫, ಆ.ರಿ.ಇಂ.ಎ., ೧೯೬೪–೬೫. ಸಂ. ಡಿ ೩೧೮, ಇತ್ಯಾದಿ.
೯. ಎ.ಇಂ.ಮು. ೧೯೩೧–೩೨. ಪು. ೧೯. ೨೧. ೧೯೩೯–೪೦. ಪು. ೧೫–೧೬., ಆ.ರಿ.ಇಂ.ಎ. ೧೯೫೮–೫೯, ಸಂ. ೨೬೨. ೨೬೩, ೨೭೮, ೧೯೬೮–೬೯, ಸಂ. ಡಿ. ೩೮೭ ಇತ್ಯಾದಿ.

೧೦. ಎ.ಇಂ.ಮು., ೧೯೩೧–೩೨, ಪು. ೨೦, ಆ.ರಿ.ಇಂ.ಎ., ೧೯೫೮–೫೯, ಸಂ. ಡಿ. ೧೨೨.

೧೧. ಎ.ಇಂ.ಮು., ೧೯೩೯–೪೦, ಪು. ೧೭, ಆ.ರಿ.ಇ.ಎಂ., ೧೯೬೪–೬೫, ಸಂ. ಡಿ. ೩೨೪.

೧೨. ಆ.ರಿ.ಇಂ.ಎ., ೧೯೬೨–೬೩, ಸಂ. ಡಿ. ೧೫೨–೫೩.

೧೩. ಎ.ಇಂ.ಮು., ೧೯೨೭–೨೮, ಪು. ೧೭, (ಇಲ್ಲಿ ಹೆಸರನ್ನು ಬಖ್ತಿಯಾರ್ ಖಾನ್ ಎಂಬುದಾಗಿ ತಪ್ಪಾಗಿ ಓದಲಾಗಿದೆ.) ಆ.ರಿ.ಇಂ.ಎ., ೧೯೬೪–೬೫ ಸಂ. ಡಿ. ೨೮೨; ಮೆಮಾಯಿರ್ಸ್ ಆಫ್ ದಿ ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾ (ಮೆ. ಆ), ಸಂ. ೪೯, ಪು. ೨೫.

೧೪. ಆ.ರಿ.ಇಂ.ಎ., ೧೯೬೫–೬೬, ಸಂ. ಡಿ. ೨೭೧.

೧೫. ಆ.ರಿ.ಇಂ.ಎ., ೧೯೫೨–೫೩, ಸಂ. ಸಿ. ೩೭, ೪೨, ೪೪–೪೬; ೧೯೫೬–೫೭ ಸಂ. ಡಿ. ೩೧,; ೧೯೫೮–೫೯, ಸಂ. ಡಿ. ೮೧–೮೩, ೮೮, ೯೧, ೯೬, ೯೭, ೯೯, ೧೦೦, ೧೦೩, ೧೦೯–೧೧೨, ೧೨೫–೧೨೯, ೧೩೧, ೧೩೩, ೧೩೫, ೧೩೯, ೧೪೨–೪೩, ೧೪೬, ೧೫೪; ೧೯೫೯–೬೦ ಸಂ. ೧೭೨–೭೩; ೧೯೬೨–೬೩, ಸಂ. ಡಿ. ೧೬೪, ೧೬೬, ೧೬೯, ೧೭೧–೭೨, ೧೭೯, ೧೮೧, ೧೮೪–೮೬; ೧೯೬೩–೬೪ ಸಂ. ಡಿ. ೨೪೫, ೨೫೨,; ೧೯೬೪–೬೫ ಸಂ. ಡಿ. ೨೪೪–೪೫, ೨೫೧, ೨೫೩, ೨೫೫, ೨೬೨, ೨೬೩, ೨೬೮, ೨೭೨, ೨೭೪, ೨೭೫, ೨೭೭, ೨೮೨, ೨೯೦, ೨೯೮, ೨೯೯, ೩೦೦, ೩೨೨; ೧೯೬೫–೬೬, ಸಂ. ಡಿ. ೨೪೬, ೨೭೧, ೨೭೪, ೨೮೯, ೨೯೯, ೩೦೧; ೧೯೬೮–೬೯, ಸಂ. ಡಿ. ೩೮೧, ೩೯೧–೯೨, ೩೯೫, ೩೯೭, ೩೯೮, ೪೦೩, ೪೦೯; ೧೯೭೦–೭೧, ಸಂ. ಡಿ. ೧೨೨–೨೪, ೧೨೬–೩೧; ಇತ್ಯಾದಿ.

೧೬. ಇವರಲ್ಲಿ ಕೆಲವರ ಬಗೆಗೆ ನೋಡಿ ಅದೇ: ೧೯೫೮–೫೯ ಸಂ. ಡಿ. ೮೬–೮೭, ೧೦೩, ೧೧೨; ೧೯೬೨–೬೩ ಸಂ. ಡಿ. ೧೫೨–೫೩; ೧೯೬೪–೬೫ ಸಂ. ಡಿ. ೨೪೩; ೧೯೬೫–೬೬ ಸಂ. ಡಿ. ೨೮೭; ೧೯೬೮–೬೯ ಸಂ. ಡಿ. ೩೮೦, ೩೮೫, ೪೦೮ ಇತ್ಯಾದಿ.

೧೭. ಆ.ರಿ.ಇಂ.ಎ., ೧೯೬೮–೬೯, ಸಂ. ಡಿ. ೩೮೦.

೧೮. ಅದೇ, ಸಂ. ಡಿ. ೩೮೫.

೧೯. ಅದೇ. ೧೯೬೫–೬೬, ಸಂ. ಡಿ. ೨೬೨–೬೬.

೨೦. ಎ.ಇಂ.ಮು. ೧೯೩೫–೩೬, ಪು. ೧೪.

೨೧. ಮೆ.ಆ.ಸ.ಇಂ., ಪು. ೬೧.

೨೨. ಆ.ರಿ.ಇಂ.ಎ., ೧೯೬೪–೬೫, ಸಂ. ಡಿ. ೨೭೧.

೨೩. ಎಪಿಗ್ರಾಫಿಯಾ ಇಂಡಿಕಾ—ಅರ್ಯಾಬಿಕ್ ಅಂಡ್ ಪರ್ಷಿಯನ್ ಸಪ್ಲಿಮೆಂಟ್ (ಎ.ಇಂ.ಅ.ಪ.ಸ.), ೧೯೫೫ ಮತ್ತು ೧೯೫೬, ಪು. ೭೮. ಇಲ್ಲಿ ಕಾಲವನ್ನು ಹಿಜ್ರಾ ೯೦೧ ಎಂದು ಭಾವಿಸಲಾಗಿದೆ. ಆದರೆ ವಾಸ್ತವವಾಗಿ ಅದು ಷುಹುರ್ ೯೦೧.

೨೪. ಅದೇ. ೧೯೬೨, ಪು. ೬೩–೬೪.

೨೫. ಆ.ರಿ.ಇಂ.ಎ., ೧೯೬೩–೬೪, ಸಂ. ಡಿ. ೨೫೩.

೨೬. ಅದೇ. ೧೯೭೦–೭೧, ಸಂ. ೧೨೭.

೨೭. ಅದೇ. ೧೯೫೮–೫೯, ಸಂ. ಡಿ. ೮೫.

೨೮. ಸಾಮಾನ್ಯವಾಗಿ ಅಂಗಡಿ (ಮಳಿಗೆ)ಗಳನ್ನು ಕಟ್ಟಿಸಿ ಧಾರ್ಮಿಕ ಸಂಸ್ಥೆಗಳಿಗೆ ದಾನ ಮಾಡುವುದು ರೂಢಿಯಲ್ಲಿತ್ತು. ಪರೋಕ್ಷವಾಗಿ ವ್ಯಾಪಾರವೂ ಆದಾಯದ ಒಂದು ಮೂಲವಾಗಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

೨೯. ಅದೇ. ಆ.ರಿ.ಇಂ.ಎ., ೧೯೫೮–೫೯, ಸಂ. ಡಿ. ೧೨೩.

೩೦. ಎ.ಇಂ.ಮು., ೧೯೩೭–೩೮

೩೧. ಆ.ರಿ.ಇಂ.ಎ., ೧೯೬೩–೬೪, ಸಂ. ಡಿ. ೨೫೮.

೩೨. ಅದೇ. ೧೯೫೮–೫೯, ಸಂ. ಡಿ. ೧೩೮.

೩೩. ಮೆ. ಆ. ಸ. ಇಂ., ೪೯, ಪು. ೮೫.

೩೪. ಅದೇ. ಪುಟ. ೮೩–೮೪.

೩೫. ಎ.ಇಂ.ಆ.ಪ.ಸ., ೧೯೬೨, ಪು. ೬೩–೬೪.

೩೬. ಆ.ರಿ.ಇಂ.ಎ., ೧೯೬೩–೬೪, ಸಂ. ಡಿ. ೨೪೯.

೩೭. ಎ.ಇಂ.ಮು., ೧೯೩೭–೩೮, ಪು. ೧, ಆ.ರಿ.ಇಂ.ಎ., ೧೯೫೮–೫೯, ಸಂ. ಡಿ. ೫೮, ೧೧೩, ೧೧೩; ೧೯೬೧–೬೨ ಸಂ. ಡಿ. ೧೮೧; ೧೯೬೨–೬೩, ಸಂ. ಡಿ. ೧೮೧–೮೨; ೧೯೬೩–೬೪, ಸಂ. ಡಿ. ೧೮೬, ೨೦೦, ೨೦೨–೨೦೪; ೧೯೬೪–೬೫, ಸಂ. ಡಿ., ೩೨೬ ಇತ್ಯಾದಿ.

೩೮. ಆ.ರಿ.ಇಂ.ಎ., ೧೯೬೪–೬೫, ಸಂ. ಡಿ. ೨೯೦–೯೧, ೨೯೮.

೩೯. ಅದೇ. ೧೯೬೫–೬೬, ಸಂ. ಡಿ. ೩೦೬.

೪೦. ಅದೇ. ಸಂ. ಡಿ. ೨೩೩–೩೪, ೨೪೨––೪೩.

೪೧. ಅದೇ. ೧೯೫೨–೫೩, ಸಂ. ಡಿ. ೩೯.

೪೨. ಅದೇ. ೧೯೭೦–೭೧, ಸಂ. ಡಿ. ೧೨೬–೨೭.

೪೩. ಬಾಂಬೆ ಗೆಜೆಟೀರ್, ಪು. ೬೬೩.

೪೪. ಆ.ರಿ.ಇಂ.ಎ., ೧೯೬೩–೬೪, ಸಂ. ಡಿ. ೨೬೬; ೧೯೬೪–೬೫ ಸಂ. ಡಿ. ೨೮೨; ಎ.ಇಂ.ಆ.ಪ.ಸ., ೧೯೫೫ ಮತ್ತು ೧೯೫೬, ಪು. ೭೪–೭೫; ೧೯೬೨, ಪು. ೬೩–೬೪.

೪೫. ಆ.ರಿ.ಇಂ.ಎ., ೧೯೬೪–೬೫, ಸಂ. ಡಿ. ೨೮೭.

೪೬. ಅದೇ. ೧೯೬೨–೬೩, ಸಂ. ಡಿ. ೧೬೩; ೧೯೬೫–೬೬ ಸಂ. ಡಿ. ೨೨೫; ಹೋಲಿಸಿ ಎ.ಇ.ಆ.ಪ.ಸ, ೧೯೫೫ ಮತ್ತು ೧೯೫೬, ಪು. ೮೩.

೪೭. ಎ.ಇ.ಆ.ಪ.ಸ., ೧೯೫೩ ಮತ್ತು ೧೯೫೪, ಪು. ೪೨–೪೩.

೪೮. ಆ.ರಿ.ಇಂ.ಎ., ೧೯೬೪–೬೫, ಸಂ. ಡಿ. ೩೨೮.

೪೯. ಎ.ಇ.ಆ.ಪ.ಸ., ೧೯೫೫ ಮತ್ತು ೧೯೫೬, ಪು. ೭೮.

೫೦. ಎ.ಇಂ.ಮು., ೧೯೩೫–೩೬, ಚಿ. ೧೯೩೯–೪೦; ಚಿ. ಬಿ (ಇದರ ಕಾಲವನ್ನು ಎ.ಇಂ.ಆ.ಪ.ಸ., ೧೯೫೯ ಮತ್ತು ೧೯೬೦, ಪು. ೨೮ರಲ್ಲಿ ತಿದ್ದು ಸರಿಪಡಿಸಲಾಗಿದೆ) ಆ.ರಿ.ಇಂ.ಎ., ೧೯೬೪–೬೫, ಸಂ. ಡಿ. ೨೪೪, ೨೬೩, ೨೮೭, ೩೦೦; ೧೯೬೫–೬೬ ಸಂ. ಡಿ. ೨೩೭, ೨೩೯, ೨೭೪; ೧೯೬೮–೬೯ ಸಂ. ಡಿ. ೩೮೫; ೧೯೭೦–೭೧ ಸಂ. ಡಿ. ೧೨೦ ಇತ್ಯಾದಿ.

೫೧. ಎ.ಇಂ.ಮು., ೧೯೨೫–೨೬, ಚಿ

೫೨. ಪ್ರೊಸೀಡಿಂಗ್ಸ್ ಆಫ್ ದಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್. ೩೨ನೆಯ ಅಧಿವೇಶನ, ಜಬಲ್ ಪುರ ೧೯೭೦, ಭಾಗ ೧, ಪು. ೪೨೭.

೫೩. ಆ.ರಿ.ಇಂ.ಎ., ೧೯೫೫–೫೬ ಸಂ. ಡಿ. ೧೧೯; ೧೯೬೨–೬೩ ಸಂ. ಡಿ. ೧೭೯, ೧೮೧; ೧೯೬೪–೬೫ ಸಂ. ಡಿ. ೩೩೦; ೧೯೬೮–೬೯ ಸಂ. ಡಿ. ೪೦೮; ಎ.ಇಂ.ಮು., ೧೯೩೭–೩೮, ಚಿ ೧ ಇತ್ಯಾದಿ.

೫೪. ಆ.ರಿ.ಇಂ.ಎ., ೧೯೬೩–೬೪.

ಕೆ.ಸ. ೨೩೨೮೦ ಎಂಯುಪಿಎಂ—೫೦೦ + ೨೫ ಪ್ರತಿಗಳು—೨೧–೪–೮೨

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ
★ ವಿಜ್ಞಾನ ಕರ್ಣಾಟಕ
★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬